ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ಚೀನಾದ ಜ್ಯಾಂಗ್ ಝೂನ್‌ಶುವೊ ಅವರು ಏಷ್ಯನ್ ಗೇಮ್ಸ್‌ನ ಒಂದೇ ಆವೃತ್ತಿಯಲ್ಲಿ ಏಳು ಚಿನ್ನದ ಪದಕ ಗೆದ್ದ ಮೊದಲ ಈಜುಪಟು ಎಂಬ ದಾಖಲೆ ಬರೆದಿದ್ದಾರೆ...

26 ಸೆಪ್ಟೆಂಬರ್, 2026 ಶನಿವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ -195 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಗುರಿ ಮತ್ತು ದಾರಿ ಇದೆ, ಕ್ರಮಿಸುವ ಇಂಜಿನ್ ಎಲ್ಲಿದೆ ? » 2



ಎಸ್‌ಐಆರ್ : ಹೆಸರು ಉಳಿಸಿಕೊಳ್ಳಲು ಮತ್ತೊಮ್ಮೆ ಅವಕಾಶ » 3



ಗಾರ್ಮೆಂಟ್ಸ್ ಕಾರ್ಮಿಕರ ಬೆಂಬಲಕ್ಕೆ ನಿಲ್ಲುವೆ » 4

## ಜಿಲ್ಲಾ ಉಸ್ತುವಾರಿ ಸಚಿವರ ಪ್ರವಾಸ

• ಪ್ರಜೋದಯ ವರದಿ

**ಹಾಸನ:** ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ.ಶಿವಲಿಂಗೇಗೌಡ ಅವರು ಸೆ.26 ರಂದು ಬೆಳಿಗ್ಗೆ 10 ಗಂಟೆಗೆ ಅರಸೀಕೆರೆ ಮಾರುತಿ ನಗರದ ಗೃಹ ಕಚೇರಿಯಲ್ಲಿ ಸಾರ್ವಜನಿಕರ ಭೇಟಿ ಮಾಡಲಿದ್ದಾರೆ.

ಅಂದು ಬೆಳಿಗ್ಗೆ 10.30ಕ್ಕೆ ಅರಸೀಕೆರೆ ಗುರು ಸಿದ್ದರಾಮೇಶ್ವರ ಸಮುದಾಯ ಭವನದಲ್ಲಿ ತಾಲ್ಲೂಕು ಮಟ್ಟದ ಶಿಕ್ಷಕರ ದಿನಾಚರಣೆಯಲ್ಲಿ ಭಾಗವಹಿಸಿ, ಮಧ್ಯಾಹ್ನ 3 ಗಂಟೆಗೆ ಹಾಸನದ ಹಿಮ್ಸ್ ಆಡಿಟೋರಿಯಂನಲ್ಲಿ ಹಾಸನಾಂಬ ಜಾತ್ರಾ ಮಹೋತ್ಸವದ ಪೂರ್ವಭಾವಿ ಸಭೆ ನಡೆಸುವರು. ಅಂದು ಸಂಜೆ 4.30 ಕ್ಕೆ ಹಾಸನಾಂಬ ಕಲಾಕ್ಷೇತ್ರದಲ್ಲಿ ಕರ್ನಾಟಕ ರಕ್ಷಣಾ ವೇದಿಕೆ, ಜಿಲ್ಲಾ ಘಟಕದ ವತಿಯಿಂದ ಆಯೋಜಿಸಿರುವ ಕನ್ನಡ ಗಾನ ವೈಭವ ಕಾರ್ಯಕ್ರಮದಲ್ಲಿ ಭಾಗವಹಿಸಿ, ರಾತ್ರಿ 8.30 ಕ್ಕೆ ಅರಸೀಕೆರೆ ತಾಲ್ಲೂಕಿನ ಬಾಣಾವರ ದಲ್ಲಿ ಗಣಪತಿ ವಿಸರ್ಜನೆ ಕಾರ್ಯಕ್ರಮದಲ್ಲಿ ಭಾಗವಹಿಸಿ, ಅರಸೀಕೆರೆಯಲ್ಲಿ ವಾಸ್ತವ್ಯ ಮಾಡಲಿದ್ದಾರೆ.

ಸೆ.27 ರಂದು ಬೆಳಿಗ್ಗೆ 10 ಗಂಟೆಗೆ ಅರಸೀಕೆರೆ ಮಾರುತಿ ನಗರದ ಗೃಹ ಕಚೇರಿಯಲ್ಲಿ ಸಾರ್ವ ಜನಿಕರ ಭೇಟಿ ಮಾಡಲಿರುವರು. ಸಂಜೆ 5 ಗಂಟೆಗೆ ಅರಸೀಕೆರೆ ಜೆ.ಸಿ ಆಸ್ಪತ್ರೆಯಲ್ಲಿ ತಾಲ್ಲೂಕು ಆರೋಗ್ಯ ರಕ್ಷಾ ಸಮಿತಿಯ ಸಭೆ ನಡೆಸಲಿದ್ದಾರೆ.

## ಇಂದು 145ನೇ ಹುಣ್ಣಿಮೆ ಕಾರ್ಯಕ್ರಮ

• ಪ್ರಜೋದಯ ವರದಿ

**ಹಾಸನ:** ನಗರದ ಆದಿಚುಂಚನಗಿರಿ ಸಮುದಾಯ ಭವನದಲ್ಲಿ ಸೆ.26ರ ಶನಿವಾರ ಸಂಜೆ 5.30 ಗಂಟೆಗೆ 145ನೇ ಗುರು ತೋರಿದ ದಾರಿ ತಿಂಗಳ ಮಾಮನ ತೇರು ಕಾರ್ಯಕ್ರಮ ನಡೆಯಲಿದೆ. ಪತ್ರಕರ್ತ ಹಾಗು ಪ್ರಗತಿಪರ ಚಿಂತಕ ಮಾವಳ್ಳಿ ಶಂಕರ್ ಉಪನ್ಯಾಸ ನೀಡುವರು. ಆದಿಚುಂಚನಗಿರಿ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ ಸಾನಿಧ್ಯ ವಹಿಸಲಿದ್ದು, ವಿವಿಧ ಮಠಗಳ ಮಠಾಧೀಶರು ಹಾಗು ಜಿಲ್ಲೆಯ ಜನಪ್ರತಿನಿಧಿಗಳು ಭಾಗವಹಿಸಲಿದ್ದಾರೆ.

# ಹಾಲಿನ ದರ ಹೆಚ್ಚಳಕ್ಕೆ ಒಕ್ಕೂಟಗಳ ತೀರ್ಮಾನ

### ಕನಿಷ್ಠ 10 ರೂ. ಹೆಚ್ಚಳಕ್ಕೆ ಬೇಡಿಕೆ | ಪ್ರಸ್ತಾವನೆ ಕೇಳಿದ ಮುಖ್ಯಮಂತ್ರಿ, ಇಂದು ಸಭೆ

• ಪ್ರಜೋದಯ ವರದಿ

**ಬೆಂಗಳೂರು:** ಹಾಲಿನ ದರ ಲೀಟರ್‌ಗೆ 10 ರಿಂದ 14 ರೂ. ಏರಿಕೆ ಮಾಡುವಂತೆ ಹಾಲು ಒಕ್ಕೂಟಗಳು ಬೇಡಿಕೆ ಇಟ್ಟ ಬೆನ್ನಲ್ಲೇ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಕೆಎಂಎಫ್‌ಗೆ ಪ್ರಸ್ತಾವನೆ ಕೇಳಿದ್ದಾರೆ. ಕೆಎಂಎಫ್ ಕೇಂದ್ರ ಕಚೇರಿಯಲ್ಲಿ ಶುಕ್ರವಾರ ಸತತ ಮೂರು ಗಂಟೆಗಳ ಕಾಲ ಸಭೆ ನಡೆದಿದ್ದು, ಹಾಲಿನ ದರ ಕನಿಷ್ಠ 10 ರೂ. ಹೆಚ್ಚಳ ಮಾಡುವಂತೆ ಹಾಲು ಒಕ್ಕೂಟಗಳು ಮನವಿ ಮಾಡಿವೆ.

ಸಭೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಬಮುಲ್ ಅಧ್ಯಕ್ಷ ಡಿ.ಕೆ.ಸುರೇಶ್ ಅವರು, ಹಾಲಿನ ದರ ಕನಿಷ್ಠ 10 ರೂ. ಹೆಚ್ಚಳ ಮಾಡುವಂತೆ ಮನವಿ ಮಾಡಿದ್ದಾರೆ. ಈ ಬಗ್ಗೆ ಶನಿವಾರ ಬೆಳಿಗ್ಗೆ 10 ಗಂಟೆಗೆ ಮುಖ್ಯಮಂತ್ರಿ ಅವರನ್ನು ಭೇಟಿಯಾಗಿ ಪ್ರಸ್ತಾವನೆ ಸಲ್ಲಿಸುತ್ತೇವೆ. ರೈತರ ಹಿತ ಕಾಪಾಡುವುದು ನಮ್ಮ ಉದ್ದೇಶ. ಕನಿಷ್ಠ 10 ರೂ. ಹೆಚ್ಚಳ ಮಾಡಲು ರೈತರು ಬೇಡಿಕೆ ಇಟ್ಟಿದ್ದಾರೆ. ಒಕ್ಕೂಟದ ಸಮಸ್ಯೆಗಳು, ಆಡಳಿತ ವೆಚ್ಚ, ಉತ್ಪಾದನೆ ಸೇರಿ ಇತರೆ ವಿಚಾರ ಚರ್ಚಿಸಲಾಗುವುದೆಂದರು.

2025-26ನೇ ಸಾಲಿನ ಮಹಾ ಮಂಡಳಿಯ ವಾರ್ಷಿಕ ಸಭೆಯಲ್ಲಿ ಕಳೆದ ವರ್ಷದ ಆದಾಯದ ವೆಚ್ಚ ಮತ್ತು ಮುಂದಿನ ವರ್ಷದಲ್ಲಿ ನಂದಿನಿ ಬ್ರಾಂಡ್



ನ್ನು ಯಾವ ರೀತಿ ಜನರ ಮುಂದೆ ತಗೊಂಡು ಹೋಗಬೇಕು. ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ವಿಸ್ತರಣೆ, ಹೀಗೆ ಅನೇಕ ವಿಷಯಗಳ ಬಗ್ಗೆ ಚರ್ಚೆ ಮಾಡಿದ್ದೇವೆ. ಕಳೆದ ಆರೇಳು ತಿಂಗಳಿನಿಂದ ಬೆಲೆ ಏರಿಕೆ ಎಲ್ಲಾ ಕಡೆ ಆಗಿದೆ. ರಾಜ್ಯದ ರೈತರು ಸಾಕಷ್ಟು ಹಾಲು ಉತ್ಪಾದನೆ ತೊಡಗಿದ್ದಾರೆ. ಅವರಿಗೆ ಪ್ರೋತ್ಸಾಹ ಧನ ಕೊಡಬೇಕೆಂದು ಹೋರಾಟ ಮಾಡಿದ್ದಾರೆ. ಅಧಿವೇಶನ ನಡೆಯುವ ವೇಳೆಯೂ ಹಾಲಿನ ದರ ಏರಿಕೆ ಬಗ್ಗೆ ಒತ್ತಾಯ ಮಾಡಿದ್ದಾರೆಂದು ಹೇಳಿದರು.

ಬೇರೆ ರಾಜ್ಯದ ಮಾರುಕಟ್ಟೆಗಳು ಅಲ್ಲಿ ರೈತರಿಗೆ ಯಾವ ಬೆಲೆ ಕೊಡುತ್ತಿದ್ದಾರೆ. ಉತ್ಪಾದನೆ ವೆಚ್ಚ, ನಂದಿನಿ ಉತ್ಪನ್ನಗಳು ಇಡೀ ರಾಷ್ಟ್ರೀಯ ಮಟ್ಟದಲ್ಲೇ ಗುಣಮಟ್ಟ ಹೊಂದಿವೆ. ಒಟ್ಟಾರೆಯಾಗಿ ನಂದಿನಿ ಬ್ರಾಂಡ್‌ಗೆ ಧಕ್ಕೆ ಬಾರದ ರೀತಿಯಲ್ಲಿ ರಾಜ್ಯದ ಹಿತದೃಷ್ಟಿಯಿಂದ ಕೆಲಸ ಮಾಡಲು ನಾವೆಲ್ಲರೂ ಒಗ್ಗಟ್ಟಾಗಿದ್ದೇವೆಂದು ತೀರ್ಮಾನ ಮಾಡಿದ್ದೇವೆಂದು ಹೇಳಿದರು.

ಬೇರೆ ರಾಜ್ಯಗಳಲ್ಲಿ ಹಾಲು ಉತ್ಪಾದಕರ ದರಕ್ಕೂ, ಇಲ್ಲಿನ ಉತ್ಪಾದಕರ ದರಕ್ಕೂ ಏನು ವ್ಯತ್ಯಾಸ ಇದೆ ಎಂಬುದನ್ನು ಚರ್ಚೆ ಮಾಡುತ್ತೇವೆ. ಇಲ್ಲಿ ಲಾಭ ಮಾಡಿ ಸಂಸ್ಥೆ ಮಾಡುವುದು ಏನಿಲ್ಲ. ಗ್ರಾಹಕರನ್ನು ನಂಬಿಕೊಂಡು ದರ ಏರಿಕೆಗೆ ಪ್ರಸ್ತಾವನೆ ಸಲ್ಲಿಸುತ್ತಿದ್ದೇವೆ. ಇವತ್ತು ಪ್ರತಿನಿತ್ಯ ಪೆಟ್ರೋಲ್ ಡೀಸೆಲ್ ದರ ಹೆಚ್ಚಾಗಿದೆ. ಕಳೆದ ವರ್ಷಕ್ಕಿಂತ ಕೆಎಂಎಫ್ ಲಾಭ ಈ ವರ್ಷ ಕಡಿಮೆ ಇದೆ ಎಂದರು.

### 4 ರಿಂದ 5 ರೂ. ಹೆಚ್ಚಾಗುವ ಸಾಧ್ಯತೆ

ರಾಜ್ಯದ ಜನತೆಗೆ ಮತ್ತೊಂದು ಬೆಲೆ ಏರಿಕೆಯ ಬಿಸಿ ತಟ್ಟುವ ಸಾಧ್ಯತೆ ದಟ್ಟವಾಗಿದ್ದು, ನಂದಿನಿ ಹಾಲಿನ ದರ ಏರಿಕೆ ಬಹುತೇಕ ನಿಶ್ಚಿತವಾಗಿದೆ. ಪ್ರತಿ ಲೀಟರ್ ಹಾಲಿನ ಬೆಲೆ 4 ರಿಂದ 5 ರೂ. ಹೆಚ್ಚಳವಾಗುವ ನಿರೀಕ್ಷೆ ಇದೆ. ತಿಂಗಳಾಂತ್ಯಕ್ಕೆ ನೂತನ ದರ ಜಾರಿಗೆ ಬರುವ ಸಾಧ್ಯತೆ ಇದ್ದು, ಒಕ್ಕೂಟಗಳ ಮನವಿಯನ್ನು ಸರ್ಕಾರದ ಗಮನಕ್ಕೆ ತಂದು, ಮುಖ್ಯಮಂತ್ರಿಗಳ ಅನುಮೋದನೆ ಪಡೆದ ನಂತರವೇ ಅಂತಿಮ ನಿರ್ಧಾರ ಪ್ರಕಟವಾಗಲಿದೆ.

## ಅರಕಲಗೂಡಿನಲ್ಲಿ ಶಂಕಿತ ಉಗ್ರನ ಬಂಧನ ?

• ಪ್ರಜೋದಯ ವರದಿ

**ಅರಕಲಗೂಡು :** ರಸ್ತೆಗೆ ಡಾಂಬರ್ ಹಾಕುವ ಕಾರ್ಮಿಕನ ಸೋಗಿನಲ್ಲಿದ್ದ ಶಂಕಿತ ಉಗ್ರನೊಬ್ಬನನ್ನು ಬೆಂಗಳೂರು ಪೊಲೀಸರು ಗುರುವಾರ ವಶಕ್ಕೆ ಪಡೆದಿರುವುದಾಗಿ ತಿಳಿದು ಬಂದಿದೆ.

ಗುಪ್ತಚರ ಇಲಾಖೆ ಮಾಹಿತಿಯ ಆಧಾರದ ಮೇಲೆ ಬೆಂಗಳೂರು ಹಾಗು ಚಿಕ್ಕಬಳ್ಳಾಪುರ ಪೊಲೀಸರು ಜಂಟಿಯಾಗಿ ಕಾರ್ಯಾಚರಣೆ ನಡೆಸಿದ್ದಾರೆ ಎನ್ನಲಾಗಿದ್ದು, ಸಮೀಪದ ಗ್ರಾಮವೊಂದರಲ್ಲಿ ಡಾಂಬರ್ ಕಾಮಗಾರಿಯಲ್ಲಿ ತೊಡಗಿದ್ದ ಸಿಕಂದರ್ ಶೇಕ್ ಎಂಬಾತನನ್ನು ಬಂಧಿಸಲಾಗಿದೆ. ಇದೇ ವೇಳೆ ಚಿಕ್ಕಬಳ್ಳಾಪುರದಲ್ಲಿ ಶಬ್ಬೀರ್ ಎಂಬಾತನನ್ನು ವಶಕ್ಕೆ ಪಡೆದು ಬೆಂಗಳೂರಿನತ್ತ ಕರೆದೊಯ್ದಿದ್ದಾರೆಂದು ತಿಳಿದುಬಂದಿದೆ.

ಶಂಕಿತ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಆರೋಪಿಗಳ ಸಾಮಾಜಿಕ ಜಾಲತಾಣಗಳ ಬಳಕೆ ಹಾಗು ಟೆಲಿಗ್ರಾಂ ಸೇರಿ ವಿವಿಧ ಆನ್‌ಲೈನ್ ಚಟುವಟಿಕೆಗಳ ಬಗ್ಗೆಯೂ ತನಿಖಾಧಿಕಾರಿಗಳು ಪರಿಶೀಲನೆ ನಡೆಸುತ್ತಿದ್ದಾರೆ ಎನ್ನಲಾಗಿದೆ. ಯಾವುದೇ ವಿಧ್ವಂಸಕ ಕೃತ್ಯಕ್ಕೆ ಸಂಚು ರೂಪಿಸಲಾಗಿತ್ತೇ ಅಥವಾ ಇತರ ಅಕ್ರಮ ಚಟುವಟಿಕೆಗಳೊಂದಿಗೆ ಸಂಪರ್ಕವಿತ್ತೇ ಎಂಬುದನ್ನು ಪೊಲೀಸರು ತನಿಖೆ ಮೂಲಕ ಪರಿಶೀಲಿಸುತ್ತಿದ್ದಾರೆಂದು ಮೂಲಗಳು ತಿಳಿಸಿವೆ.





ಮಫ್ತಿಯಲ್ಲಿ ಬಂದ ಬೆಂಗಳೂರು ಮತ್ತು ಚಿಕ್ಕಬಳ್ಳಾಪುರ ಪೊಲೀಸರು ಗ್ರಾಮವೊಂದರಲ್ಲಿ ಕಾರ್ಯಾಚರಣೆ ನಡೆಸಿರುವುದು ಸ್ಥಳೀಯರಲ್ಲಿ ಆತಂಕಕ್ಕೆ ಕಾರಣವಾಗಿದೆ. ಪೊಲೀಸ್ ತನಿಖೆ ಪೂರ್ಣಗೊಂಡ ಬಳಿಕವೇ ಸ್ಪಷ್ಟವಾಗುವ ಸಾಧ್ಯತೆಯಿದೆ.

**ಆತ್ಮಾಹುತಿ ದಾಳಿಗೆ ಸಿದ್ಧತೆ**

ಕಳೆದ ಹಲವು ತಿಂಗಳಿಂದ ಕಾರ್ಮಿಕ ನಾಗಿ ಪಟ್ಟಣದಲ್ಲಿ ವಾಸ್ತವ್ಯ ಹೂಡಿದ್ದ ಶಂಕಿತ ಉಗ್ರ ದಸರಾ ಸಂದರ್ಭದಲ್ಲಿ ಆತ್ಮಾಹುತಿ ಬಾಂಬ್ ದಾಳಿಗೆ ಸಿದ್ಧತೆ ನಡೆಸಿದ್ದ ಎನ್ನಲಾಗಿದೆ. ಮಡಿಕೇರಿ ಹಾಗು ಅರಕಲಗೂಡು ದಸರಾದಲ್ಲಿ ಜನರು ಸಾವಿರಾರು ಸಂಖ್ಯೆಯಲ್ಲಿ ಪಾಲ್ಗೊಳ್ಳುತ್ತಾರೆ. ಆ ವೇಳೆಯಲ್ಲೇ ಬಾಂಬ್ ದಾಳಿ ನಡೆಸಿ ಹಲವರ ಪ್ರಾಣ ಆಹುತಿಗೆ ತಯಾರಿ ನಡೆಸಿದ್ದನೆಂದು ತಿಳಿದುಬಂದಿದೆ.

## ಬೇಲೂರು ತಾಲ್ಲೂಕು ಜೆಡಿಎಸ್ ಅಧ್ಯಕ್ಷರಾಗಿ ಲೋಕೇಗೌಡ ಆಯ್ಕೆ



• ಪ್ರಜೋದಯ ವರದಿ

**ಬೇಲೂರು:** ಜೆಡಿಎಸ್ ತಾಲ್ಲೂಕು ಘಟಕದ ಅಧ್ಯಕ್ಷರಾಗಿ ಲೋಕೇಗೌಡ ಅವರು ಅವಿರೋಧ ಆಯ್ಕೆಯಾಗಿದ್ದಾರೆ.

ಬೆಂಗಳೂರಿನಲ್ಲಿ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಹೆಚ್.ಡಿ.ದೇವೇಗೌಡ ಅವರ ನಿವಾಸದಲ್ಲಿ ಗುರುವಾರ ನಡೆದ ಕಾರ್ಯಕ್ರಮದಲ್ಲಿ ನೂತನ ಪದಾಧಿಕಾರಿಗಳ ಆಯ್ಕೆ ನಡೆಯಿತು. ನೂತನ ತಾಲ್ಲೂಕು ಅಧ್ಯಕ್ಷ ಲೋಕೇಗೌಡ ಅವರು ಮಾತನಾಡಿ, ತಮ್ಮ ಮೇಲೆ ವಿಶ್ವಾಸವಿಟ್ಟು ಜವಾಬ್ದಾರಿ ನೀಡಿರುವ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಅವರು, ಮಾಜಿ ಸಚಿವ ಹೆಚ್.ಡಿ. ರೇವಣ್ಣ, ಭವಾನಿ ರೇವಣ್ಣ ಸೇರಿ ಪಕ್ಷದ ಹಿರಿಯರು, ಜಿಲ್ಲಾ ನಾಯಕರು ಹಾಗು ತಾಲ್ಲೂಕು ಮತ್ತು ಗ್ರಾಮ ಮಟ್ಟದ ಕಾರ್ಯಕರ್ತರಿಗೆ ಕೃತಜ್ಞತೆ ಸಲ್ಲಿಸಿದರು.

ಪಕ್ಷದ ಸಿದ್ಧಾಂತ, ತತ್ವ ಹಾಗು ಸಂಘಟನೆಯ ಮೇಲೆ ನಂಬಿಕೆ ಇಟ್ಟು ನನಗೆ ನೀಡಿರುವ ಜವಾಬ್ದಾರಿ ನಿರ್ವಹಿಸುತ್ತೇನೆ. ಹಿರಿಯರ ಮಾರ್ಗದರ್ಶನ ಹಾಗು ಕಾರ್ಯಕರ್ತರ ಸಹಕಾರದೊಂದಿಗೆ ಬೇಲೂರು ತಾಲ್ಲೂಕಿನಲ್ಲಿ ಪಕ್ಷದ ಸಂಘಟನೆಯನ್ನು ಮತ್ತಷ್ಟು ಬಲಪಡಿಸುವುದು ಗುರಿಯಾಗಿದೆ ಎಂದು ಹೇಳಿದರು.

ತಾಲ್ಲೂಕಿನ ಪ್ರತಿಯೊಂದು ಹೋಬಳಿ, ಗ್ರಾಮ ಹಾಗು ಬೂತ್ ಮಟ್ಟದಲ್ಲಿ ಪಕ್ಷದ ಸಂಘಟನೆಯನ್ನು ಬಲಪಡಿಸಲು ಆದ್ಯತೆ ನೀಡಲಾ

» ನಾಲ್ಕನೇ ಪುಟದಲ್ಲಿ

# ಜಿಲ್ಲೆಯ ಮಲೆನಾಡು ಭಾಗದಲ್ಲಿ ಕರುಣೆ ತೋರಿದ ಮಳೆರಾಯ

• ಪ್ರಜೋದಯ ವರದಿ

**ಹಾಸನ :** ನಗರ ಸೇರಿ ಜಿಲ್ಲೆಯ ಮಲೆನಾಡು ಭಾಗದಲ್ಲಿ ಶುಕ್ರವಾರ ಮಳೆಯಾಗಿದ್ದು, ಬಯಲು ಸೀಮೆ ಭಾಗದಲ್ಲಿ ಸೋನೆ ಮಳೆ ಸುರಿದಿದೆ.

ಭೀಕರ ಬರಗಾಲದಿಂದ ಕಾದ ಕಾವಲಿಯಂತಾಗಿದ್ದ ಇಳೆಗೆ ಮಳೆಯ ಸಿಂಚನ ತಂಪೆರೆದಿದೆ. ಹಾಸನ, ಸಕಲೇಶಪುರ, ಬೇಲೂರು, ಆಲೂರು ವ್ಯಾಪ್ತಿಯಲ್ಲಿ ಮಳೆ ಆಗಿದ್ದು, ಚನ್ನರಾಯಪಟ್ಟಣ, ಹೊಳೆನರಸೀಪುರ, ಅರಕಲಗೂಡು, ಅರಸೀಕೆರೆ ಭಾಗದಲ್ಲಿ ತುಂತುರು ಮಳೆಯಾಗಿದೆ. ಬೆಳಿಗ್ಗೆಯಿಂದ ಮೋಡ ಮುಸುಕಿದ ವಾತಾವರಣ ನಿರ್ಮಾಣವಾಗಿ ಚಳಿ ಗಾಳಿ ಬೀಸಿತು. ನಗರದಲ್ಲಿ ಮಧ್ಯಾಹ್ನ 1.30 ರಿಂದ 3 ಗಂಟೆ ವರೆಗೆ ಹಾಗು ಸಂಜೆ 6 ರಿಂದ ರಾತ್ರಿ 8ರ ವರೆಗೆ ಜಿಟಿಜಿಟಿ ಮಳೆ ಸುರಿಯಿತು. ಬೇಲೂರಿನ ಬಿಕ್ಕೋಡು, ಅರೇಹಳ್ಳಿ ಭಾಗದಲ್ಲಿ ಉತ್ತಮ ಮಳೆಯಾಗಿದೆ.

**ಬೆಳೆಗಾರರ ಮೊಗದಲ್ಲಿ ಮಂದಹಾಸ**

ವಾಯುಭಾರ ಕುಸಿತದ ಪರಿಣಾಮ ಕಳೆದ ಎರಡು ದಿನಗಳಿಂದ ಸಕಲೇಶಪುರ ತಾಲ್ಲೂಕಿನಲ್ಲಿ ಸೋನೆ ಮಳೆಯಂತೆ ಸುರಿಯುತ್ತಿದ್ದ ಮಳೆ ಶುಕ್ರವಾರ ಸಂಜೆ ಬಳಿಕ ಬಿರುಸುಗೊಂಡು ಎಡಬಿಡದೆ ಸುರಿಯುತ್ತಿದೆ. ಮುಂಗಾರು ಮಳೆಯ ಕೊರತೆಯಿಂದ ಆತಂಕದಲ್ಲಿದ್ದ ಬೆಳೆಗಾರರಲ್ಲಿ ಇದೀಗ ಕೊಂಚ ನೆಮ್ಮದಿ ಮೂಡಿಸಿದೆ.

- ಸಕಲೇಶಪುರದಲ್ಲಿ ನಿರಂತರ ಮಳೆ
- ಬಯಲು ಸೀಮೆಯಲ್ಲಿ ಸೋನೆ

ಈ ಬಾರಿ ಮುಂಗಾರು ನಿರೀಕ್ಷಿತ ಪ್ರಮಾಣದಲ್ಲಿ ಕೈಕೊಟ್ಟ ಪರಿಣಾಮ ತಾಲ್ಲೂಕಿನಲ್ಲಿ ನೀರಿನ ಕೊರತೆಯ ಆತಂಕ ಎದುರಾಗಿತ್ತು. ತಾಲ್ಲೂಕಿನಾದ್ಯಂತ ಸುಮಾರು 2,500 ಎಕರೆ ಪ್ರದೇಶದಲ್ಲಿ ಭತ್ತ ನಾಟಿ ಮಾಡಲಾಗಿದ್ದು, ಈ ಪೈಕಿ ಸುಮಾರು 500 ಎಕರೆ ಪ್ರದೇಶಕ್ಕೆ ನೀರಿನ ಅಗತ್ಯತೆ ಹೆಚ್ಚಾಗಿತ್ತು. ಮಳೆ ಕೊರತೆಯಿಂದ ಭತ್ತದ ಬೆಳೆಗೆ ನೀರು ಒದಗಿಸುವುದು ಬೆಳೆಗಾರರಿಗೆ ಸವಾಲಾಗಿತ್ತು.

ಕಾಫಿ ತೋಟಗಳಲ್ಲಿಯೂ ತೇವಾಂಶದ ಕೊರತೆ ಕಂಡು ಬಂದಿತ್ತು. ವಿಶೇಷವಾಗಿ ಮೆಣಸು ಬಳ್ಳಿಗಳಲ್ಲಿ ಕಾಯಿ ಕಟ್ಟುವ ಹಂತವಾಗಿರುವುದರಿಂದ ಈ ಸಂದರ್ಭದಲ್ಲಿ ತೋಟಗಳಿಗೆ ನೀರಿನ ಅಗತ್ಯತೆ ಹೆಚ್ಚಾಗಿದೆ. ಇದೀಗ ಸೆಪ್ಟೆಂಬರ್ ಅಂತ್ಯದಲ್ಲಿ ಮಳೆ ಚುರುಕುಗೊಂಡಿರುವುದು ಕಾಫಿ ಹಾಗು ಮೆಣಸು ಬೆಳೆಗಾರರಿಗೆ ಸಮಾಧಾನ ತರಿಸಿದೆ.

ಎರಡು ದಿನಗಳಿಂದ ತುಂತುರು ಹಾಗು



ಸಾಧಾರಣ ಮಳೆಯಾಗುತ್ತಿದ್ದರೂ, ಶುಕ್ರವಾರ ಸಂಜೆ ಬಳಿಕ ಮಳೆಯ ಬಿರುಸು ಪಡೆಯಿತು. ನಿರಂತರವಾಗಿ ಸುರಿಯುತ್ತಿರುವ ಮಳೆಯಿಂದ ತೋಟಗಳು ಹಾಗು ಕೃಷಿ ಭೂಮಿಯಲ್ಲಿ ತೇವಾಂಶ ಹೆಚ್ಚಾಗಿ, ನೀರಿನ ಕೊರತೆ ನೀಗುವ ನಿರೀಕ್ಷೆ ಬೆಳೆಗಾರರಲ್ಲಿ ಮೂಡಿದೆ.

ಮುಂಗಾರು ಕೈಕೊಟ್ಟ ಹಿನ್ನಲೆಯಲ್ಲಿ ನೀರಿನ ಲಭ್ಯತೆ ಕುರಿತು ಆತಂಕದಲ್ಲಿದ್ದ ಬೆಳೆಗಾರರಿಗೆ ಬೆಳೆಗಳ ಅಗತ್ಯದ ಸಂದರ್ಭದಲ್ಲಿ ಸುರಿಯುತ್ತಿರುವ ಮಳೆ ಆಶಾಭಾವನೆ ಮೂಡಿಸಿದೆ. ಅದರಲ್ಲೂ ಭತ್ತದ ಬೆಳೆಗೆ ನೀರಿನ ಅಗತ್ಯವಿದ್ದ ಸಂದರ್ಭ ಹಾಗು ಕಾಫಿ ತೋಟಗಳಲ್ಲಿ ಮೆಣಸು ಬಳ್ಳಿ ಕಾಯಿ ಕಟ್ಟುತ್ತಿರುವ ಹಂತದಲ್ಲಿ ಮಳೆ ಬಂದಿರುವುದು ಬೆಳೆಗಾರರ ಮೊಗದಲ್ಲಿ ಮಂದಹಾಸ ಮೂಡಿಸಿದೆ.

**ಅರಕಲಗೂಡು ಭಾಗದಲ್ಲಿ ನಿರಾಸೆ**

ಅರಕಲಗೂಡು ತಾಲ್ಲೂಕಿನಲ್ಲಿ ಮಳೆ ಕೈಕೊಟ್ಟಿರುವ ಹಿನ್ನಲೆಯಲ್ಲಿ ಒಣಗುತ್ತಿರುವ ಬೆಳೆಗಳಿಗೆ ಜೀವಜಲದ ನಿರೀಕ್ಷೆಯಲ್ಲಿದ್ದ ರೈತರಿಗೆ ಶುಕ್ರವಾರವೂ ವರುಣ ನಿರಾಸೆ ಮೂಡಿಸಿದ. ಗುರುವಾರ ಸಂಜೆಯಿಂದ ಆಕಾಶದಲ್ಲಿ ಮೋಡ ಮುಸುಕಿದ ವಾತಾವರಣ ಕಂಡುಬಂದರೂ, ಮಳೆ ಸುರಿಯದೆ ರೈತರ



ಆತಂಕ ಮತ್ತಷ್ಟು ಹೆಚ್ಚಾಗಿದೆ.

ಗುರುವಾರ ಸಂಜೆ ಅಲ್ಲಲ್ಲಿ ಬಿಟ್ಟು ಬಿಟ್ಟು ಮಳೆಯಾದರೆ, ಶುಕ್ರವಾರ ಬೆಳಿಗ್ಗೆಯೂ ತಾಲ್ಲೂಕಿನ ಹಲವೆಡೆ ಜಿಟಿಜಿಟಿ ಮಳೆಯಾಯಿತು. ಕೇವಲ ತುಂತುರು ಮಳೆಗೆ ಸೀಮಿತವಾದ ಪರಿಣಾಮ, ಒಣಗುತ್ತಿರುವ ಬೆಳೆಗಳಿಗೆ ಯಾವುದೇ ಪ್ರಯೋಜನವಾಗಲಿಲ್ಲ. ತಾಲೂಕಿನಲ್ಲಿ ಭೀಕರ ಬರದ ಪರಿಸ್ಥಿತಿ ನಿರ್ಮಾಣವಾಗಿದ್ದು, ಮಳೆ ಕೊರತೆಯಿಂದ ಈಗಾಗಲೇ ಬಿತ್ತನೆ ಮಾಡಿರುವ ವಿವಿಧ ಬೆಳೆಗಳು ಒಣಗಲಾರಂಭಿಸಿವೆ. ಜಮೀನುಗಳಲ್ಲಿ ತೇವಾಂಶದ ಕೊರತೆ ಉಂಟಾಗಿದ್ದು, ಬೆಳೆಗಳು ಕೈಕೊಡುವ ಆತಂಕ ರೈತರನ್ನು ಕಾಡುತ್ತಿದೆ. ಮೋಡ ಕವಿದ ವಾತಾವರಣ ಕಂಡು ಮಳೆ ಸುರಿಯಬಹುದೆಂಬ ನಿರೀಕ್ಷೆಯಲ್ಲಿ ರೈತರು ಮುಗಿಲಿನತ್ತ ದೃಷ್ಟಿ ನೆಟ್ಟಿದ್ದರೂ, ವರುಣ ಕರುಣೆ ತೋರದಿರುವುದು ಸಂಕಷ್ಟಕ್ಕೆ ಕಾರಣವಾಗಿದೆ.

ಮಳೆ ಯಾವಾಗ ಸುರಿಯಲಿದೆ, ಯಾವಾಗ ಬೆಳೆಗಳಿಗೆ ಹದ ಮಳೆ ಆಗಲಿದೆ ಎಂಬುದೇ ರೈತರ ಮುಂದಿರುವ ಪ್ರಶ್ನೆಯಾಗಿದೆ. ಇನ್ನೂ ಕೆಲ ದಿನ ಮಳೆ ಬಾರದಿದ್ದರೆ ಈಗಾಗಲೇ ಸಂಕಷ್ಟದಲ್ಲಿರುವ ಬೆಳೆಗಳು ಸಂಪೂರ್ಣ ಒಣಗಿ ನಷ್ಟವಾಗುವ ಸಾಧ್ಯತೆ ಇದೆ. ಹೀಗಾಗಿ ಕೂಡಲೇ ಉತ್ತಮ ಮಳೆಯಾಗಲಿ, ಒಣಗುತ್ತಿರುವ ಬೆಳೆಗಳಿಗೆ ಜೀವ ತುಂಬಲಿ ಎಂಬ ಆಶಯವನ್ನು ರೈತರು ವ್ಯಕ್ತಪಡಿಸಿದ್ದಾರೆ.

# ಬೂತ್ ಮಟ್ಟದಿಂದ ಜೆಡಿಎಸ್ ಸದೃಢಗೊಳಿಸುವ ಸಂಕಲ್ಪ

• ಪ್ರಜೋದಯ ವರದಿ

**ಹಾಸನ:** ಜೆಡಿಎಸ್ ವರಿಷ್ಠ ಹೆಚ್.ಡಿ. ದೇವೇಗೌಡ ಅವರು, ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರು ಪಕ್ಷ ಸಂಘಟನೆ ದೃಷ್ಟಿಯಿಂದ ಜಿಲ್ಲಾ ಸಮಿತಿ ಪುನಾರಚಿಸಿದ್ದು, ಅವರ ನಿರೀಕ್ಷೆಯಂತೆ ಪಕ್ಷವನ್ನು ಬೂತ್ ಮಟ್ಟದಿಂದ ಸದೃಢಗೊಳಿಸಲಾಗುವುದೆಂದು ಜೆಡಿಎಸ್ ಜಿಲ್ಲಾ ಗೌರವಾಧ್ಯಕ್ಷ ಬಿ.ಎ.ಜಗನ್ನಾಥ್ ಅವರು ಹೇಳಿದರು.

ನಗರದ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಅವರು, ಮುಂದಿನ ವರ್ಷ ಚುನಾವಣೆಗಳ ವರ್ಷವಾಗಿದ್ದು, ವರಿಷ್ಟರು ದೊಡ್ಡ



ಜವಾಬ್ದಾರಿ ವಹಿಸಿದ್ದಾರೆ. ನಾಯಕರು ಸಹಕಾರ, ಪ್ರೋತ್ಸಾಹ ನೀಡಬೇಕು, ಪಕ್ಷ ಸಂಘಟನೆಗೆ ತಯಾರಿ ನಡೆಸಬೇಕೆಂದು ಕಾರ್ಯಕರ್ತರು ಮನವಿ ಮಾಡಿದ್ದರು. ನಾಯಕರು ನಮ್ಮನ್ನೆಲ್ಲಾ ಕರೆಸಿ ಮಾತುಕತೆ ನಡೆಸಿದರು. ಆ ಹಿನ್ನಲೆಯಲ್ಲಿ ಹಿರಿಯರು ಸಮಾಲೋಚನೆ ನಡೆಸಿ ಹೊಸ ತಂಡ ರಚಿಸಿದ್ದಾರೆಂದರು.

ಕಾರ್ಯಕರ್ತರಿಗೆ ಜವಾಬ್ದಾರಿ ನೀಡುವ ಉದ್ದೇಶದಿಂದ ಕೆಲಸ ಮಾಡುತ್ತೇವೆ. ಜೆಡಿಎಸ್ ಯಾವತ್ತಿಗೂ ಜಾತ್ಯಾತೀತವಾಗಿ ಇರಲಿದೆ. ಅಲ್ಪ ಸಂಖ್ಯಾತ ಘಟಕ ಹಾಗು ಮಹಿಳಾ ಘಟಕಗಳನ್ನು ಆರಂಭಿಸಲಾಗುತ್ತದೆ. ಜಿಲ್ಲೆಯಲ್ಲಿ ನಮ್ಮ ಕಾರ್ಯಕರ್ತರು ತೊಂದರೆ ಅನುಭವಿಸುತ್ತಿದ್ದಾರೆ. ಎಲ್ಲರ ಕಷ್ಟ ಆಲಿಸುವುದು ನಮ್ಮ ಜವಾಬ್ದಾರಿ. ಮಾಜಿ ಸಚಿವ ಹೆಚ್.ಡಿ. ರೇವಣ್ಣ ಅವರ ಮಾರ್ಗ ದರ್ಶನದಲ್ಲಿ ಹೋರಾಟ ರೂಪಿಸಲಾಗುವುದು. ರಾಷ್ಟ್ರ ಮಟ್ಟದಲ್ಲಿ ಜೆಡಿಎಸ್ ಪಕ್ಷವು ಎನ್‌ಡಿಎ ಜೊತೆಗೆ ಮೈತ್ರಿ ಮಾಡಿ

» ನಾಲ್ಕನೇ ಪುಟದಲ್ಲಿ

## ನಾಲೆಗೆ ಬಿದ್ದಿದ್ದ ಯುವಕನ ಶವಪತ್ತೆ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ :** ಬೈಕ್ ಸ್ಕಿಡ್ ಆಗಿ ಹೇಮಾವತಿ ನಾಲೆಗೆ ಬಿದ್ದು ಸಾವನ್ನಪ್ಪಿದ ಯುವಕನ ಮೃತದೇಹ ಎರಡು ದಿನಗಳ ಬಳಿಕ ತಾಲ್ಲೂಕು ಕ್ರೀಡಾಂಗಣದ ಹಿಂಭಾಗದಲ್ಲಿರುವ ಮಾಸ್ತಿಯಮ್ಮ ದೇವಾಲಯದ ಬಳಿ ಶುಕ್ರವಾರ ಪತ್ತೆಯಾಗಿದೆ.

ಸೆಸ್ಕಾಂ ನೌಕರರಾಗಿದ್ದ ಹೇಮಂತ್ ಕರ್ತವ್ಯ ಮುಗಿಸಿ, ಬುಧವಾರ ಸಂಜೆ ಬೈಕ್‌ನಲ್ಲಿ ಮನೆಗೆ ತೆರಳುತ್ತಿದ್ದ ಸಂದರ್ಭದಲ್ಲಿ ಆಯಾತಪ್ಪಿ ಹೇಮಾವತಿ ನಾಲೆಗೆ ಬಿದ್ದಿದ್ದರು. ಮೃತದೇಹಕ್ಕಾಗಿ ಅಗ್ನಿಶಾಮಕದಳದ ಸಿಬ್ಬಂದಿ ಹಾಗು ಈಜು ತಜ್ಞ ಈಶ್ವರ್ ಮಲ್ಪೆ ಶೋಧಕಾರ್ಯ ನಡೆಸಿ ಮೃತದೇಹ ಪತ್ತೆಹಚ್ಚಿದ್ದಾರೆ. ಪಟ್ಟಣ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



## ಮನೆ ಮುಂದಿನ ರಸ್ತೆಯಲ್ಲಿ ಶವ ತೆಗೆದುಕೊಂಡು ಹೋಗದಂತೆ ತಡೆ

• ಪ್ರಜೋದಯ ವರದಿ

**ಅರಕಲಗೂಡು :** ಮನೆ ಮುಂದಿನ ರಸ್ತೆಯಲ್ಲಿ ಶವ ಸಾಗಿಸಲು ಅವಕಾಶ ನೀಡುವುದಿಲ್ಲವೆಂದು ಕೆಲವರು ವಿರೋಧ ವ್ಯಕ್ತಪಡಿಸಿದ ಹಿನ್ನಲೆಯಲ್ಲಿ ಮೃತದೇಹವನ್ನು ಒಂದೂವರೆ ಗಂಟೆ ರಸ್ತೆಯಲ್ಲೇ ಇರಿಸಿದ ಘಟನೆ ತಾಲ್ಲೂಕಿನ ಕೊಣನೂರು ಹೋಬಳಿ ಮಜ್ಜನಹಳ್ಳಿಯಲ್ಲಿ ನಡೆದಿದೆ.

ಗ್ರಾಮದ ಮಡಿವಾಳ ಜನಾಂಗಕ್ಕೆ ಸೇರಿದ ತಂಗ್ಯಮ್ಮ (60) ಅವರು ಗುರುವಾರ ರಾತ್ರಿ ಮೃತಪಟ್ಟಿದ್ದರು. ಶುಕ್ರವಾರ ಮೃತದೇಹವನ್ನು ಅಂತ್ಯ ಸಂಸ್ಕಾರಕ್ಕಾಗಿ ಸ್ಮಶಾನಕ್ಕೆ ಕೊಂಡೊಯ್ಯುವ ಸಂದರ್ಭದಲ್ಲಿ ಮನೆಯ ಮುಂದಿನ ರಸ್ತೆಯಲ್ಲಿ ಶವ ಸಾಗಿಸಲು ಬಿಡುವುದಿಲ್ಲವೆಂದು ಕೆಲ ಕುಟುಂಬಗಳು ವಿರೋಧ ವ್ಯಕ್ತಪಡಿಸಿದವು.

ಸ್ಥಳಕ್ಕೆ ಆಗಮಿಸಿದ 112 ಪೊಲೀಸರು ಪರಿಸ್ಥಿತಿಯನ್ನು ನಿಯಂತ್ರಿಸಿ ಪರ್ಯಾಯ ರಸ್ತೆಯ ಮೂಲಕ ಮೃತದೇಹವನ್ನು ಸ್ಮಶಾನಕ್ಕೆ ಸಾಗಿಸಲು ಅನುವು ಮಾಡಿಕೊಟ್ಟರು. ಶವ ಸಂಸ್ಕಾರಕ್ಕೆ ಅಗತ್ಯವಿದ್ದ ಸೌದೆಯನ್ನು ತರಲು ರಸ್ತೆಯಲ್ಲಿ ಅಡ್ಡಿಪಡಿಸಿದ ಸಂದರ್ಭದಲ್ಲೂ ಪೊಲೀಸರು ಮಧ್ಯ ಪ್ರವೇಶಿಸಿ ಸೌದೆ ತುಂಬಿದ್ದ ಟ್ರ್ಯಾಕ್ಟರ್‌ನ್ನು ಸ್ವತಃ ಚಲಾಯಿಸಿಕೊಂಡು ಅಂತ್ಯ ಸಂಸ್ಕಾರಕ್ಕೆ ಅವಕಾಶ ಮಾಡಿಕೊಟ್ಟರು.

ಘಟನೆ ತಿಳಿದು ಸ್ಥಳಕ್ಕೆ ಭೇಟಿ ನೀಡಿದ ತಹಶೀಲ್ದಾರ್ ಕೆ.ಸಿ. ಸೌಮ್ಯ ಅವರು ಗ್ರಾಮಸ್ಥರೊಂದಿಗೆ ಚರ್ಚಿಸಿದರು. ಸರ್ಕಾರಿ

» ನಾಲ್ಕನೇ ಪುಟದಲ್ಲಿ

## ಗಣಪತಿ ವಿಸರ್ಜನೆ ವೇಳೆ ಶಬ್ದ ಮಾಲಿನ್ಯ : ಪ್ರತ್ಯೇಕ 4 ಎಫ್‌ಐಆರ್

• ಪ್ರಜೋದಯ ವರದಿ

**ಹಾಸನ:** ನಗರದಲ್ಲಿ ಸೆ.23ರಂದು ನಡೆದ ಹಿಂದೂ ಮಹಾಗಣಪತಿ ವಿಸರ್ಜನಾ ಮಹೋತ್ಸವದಲ್ಲಿ ನಿಯಮ ಮೀರಿ ಡಿಜೆ ಬಳಸಿದ ಆರೋಪದಡಿ ಹಿಂದೂಪರ ಸಂಘಟನೆಯ ಹಲವರ ಮೇಲೆ ಪ್ರತ್ಯೇಕ ನಾಲ್ಕು ಎಫ್‌ಐಆರ್ ದಾಖಲಿಸಲಾಗಿದೆ.

ಡಿ.ಜೆ.ಆಪರೇಟರ್ ಚಂದನ್, ಆಯೋಜಕರಾದ ವಿಕಾಸ್, ದಯಾನಂದ್, ಅಭಿಷೇಕ್, ಲೋಕಿ, ವಿಕ್ಕಿ, ಅನೂಪ್, ದಿನೇಶ್ ಸಿಂಗ್, ದಾಸರಕೊಪ್ಪಲು ಮಂಜು, ಶರತ್, ಮಹಿಪಾಲ್ ಎಂಬುವವರ ವಿರುದ್ಧ ಬಿಎನ್‌ಎಸ್ 2023 (ಯು/ಎಸ್ 292) ಅಡಿಯಲ್ಲಿ ಪ್ರಕರಣ ದಾಖಲಾಗಿದೆ.

ಸುಪ್ರೀಂ ಕೋರ್ಟ್ ನಿರ್ದೇಶನದಂತೆ ಶಬ್ದ ಮಾಲಿನ್ಯವಾಗದಂತೆ ಧ್ವನಿವರ್ಧಕ ಬಳಸುವಂತೆ ಆಯೋಜಕರಿಗೆ ತಿಳಿಸಲಾಗಿತ್ತು. ಮೆರವಣಿಗೆ ಸಂದರ್ಭದಲ್ಲೂ ಡಿ.ಜೆ.ಆಪರೇಟರ್ ಹಾಗು ಮಾಲೀಕರಿಗೆ ತಿಳಿಸಿದರೂ ಅವರು ಸಲಹೆಯನ್ನು ಪರಿಗಣಿಸಲಿಲ್ಲ. ಸಾರ್ವಜನಿಕರಿಗೆ ತೊಂದರೆಯಾಗುವ ರೀತಿ ಜನರೇಟರ್ ಇಟ್ಟುಕೊಂಡು ಶಬ್ದ ಮಾಲಿನ್ಯ ಮಾಡಿದ್ದಾರೆಂದು ಆರೋಪಿಸಲಾಗಿದೆ. ನಗರ ಠಾಣೆ ಕಾನ್ಸಟೇಬಲ್ ಹರೀಶ್, ಲತೇಶ್, ಸರೋಜಾ ಬಾಯಿ ಹಾಗು ಪ್ರಿಯಾಂಕಾ ಅವರು ಪ್ರತ್ಯೇಕ ಎಫ್‌ಐಆರ್ ದಾಖಲಿಸಿದ್ದಾರೆ.

### ಒಂದೇ ತಿಂಗಳಲ್ಲಿ 32 ಟಿಎಂಸಿಯಿಂದ 14 ಟಿಎಂಸಿಗೆ ಇಳಿಕೆ | 10 ಟಿಎಂಸಿ ಮಾತ್ರ ಬಳಕೆಗೆ ಲಭ್ಯ

# ಮಳೆಗಾಲದಲ್ಲಿ ಅಣೆಕಟ್ಟೆಗೆ ಬಂದ ನೀರು ಸಂಪೂರ್ಣ ಖಾಲಿ

• ಪ್ರಜೋದಯ ವರದಿ

**ಹಾಸನ :** ಅಲ್ಪಸ್ವಲ್ಪ ಮಳೆಯಿಂದ ಹೇಮಾವತಿ ಅಣೆಕಟ್ಟೆಯಲ್ಲಿ ಸಂಗ್ರಹವಾಗಿದ್ದ ನೀರು ಕೇವಲ 30 ದಿನಗಳಲ್ಲಿಯೇ ಖಾಲಿಯಾಗಿದೆ.

ತಿಂಗಳ ಅವಧಿಯಲ್ಲಿ ಬರೋಬ್ಬರಿ 18 ಟಿಎಂಸಿ ನೀರನ್ನು ಹೊರಗೆ ಬಿಡಲಾಗಿದ್ದು, ಕಳೆದ 30 ದಿನಗಳಿಂದ ನದಿ ಮತ್ತು ನಾಲೆಗಳಿಗೆ ಹರಿಸುತ್ತಿದ್ದ ನೀರನ್ನು ಶುಕ್ರವಾರವಷ್ಟೇ ನಿಲ್ಲಿಸಲಾಗಿದೆ. 37.103 ಟಿಎಂಸಿಯಷ್ಟು ಸಂಗ್ರಹಣಾ ಸಾಮರ್ಥ್ಯವಿರುವ ಜಲಾಶಯದಲ್ಲಿ ಪ್ರಸ್ತುತ 14.884 ಟಿಎಂಸಿಯಷ್ಟು ನೀಲು ಸಂಗ್ರಹವಾಗಿದೆ. ಅದರಲ್ಲಿ ಬಳಕೆಗೆ ಕೇವಲ 10 ಟಿಎಂಸಿ ಮಾತ್ರ ಲಭ್ಯವಿದೆ.

ಆಗಸ್ಟ್ 16 ರಿಂದ ನೀರು ಹರಿಸಲು ಪ್ರಾರಂಭ ಮಾಡಿದ್ದು, ಸೆ.25ಕ್ಕೆ ನಿಲ್ಲಿಸಲಾಗಿದೆ. ಆ.16 ರಂದು 27.921 ಟಿಎಂಸಿ ನೀರು ಲಭ್ಯವಿತ್ತು.

ಶುಕ್ರವಾರದ ವೇಳೆಗೆ ನೀರಿನ ಪ್ರಮಾಣ 14 ಟಿಎಂಸಿಗೆ ಕುಸಿದೆ. ಜೂನ್ ತಿಂಗಳ ಅಂತ್ಯದಲ್ಲಿ ಜಲಾಶಯದ ನೀರಿನ ಮಟ್ಟ 2,891 ಅಡಿಗಳಷ್ಟಿದ್ದು, 14. 913 ಟಿಎಂಸಿ ನೀರು ಸಂಗ್ರಹವಾಗಿತ್ತು. ಜುಲೈ, ಆಗಸ್ಟ್ ತಿಂಗಳಲ್ಲಿ ಸುರಿದ ಅಲ್ಪ ಪ್ರಮಾಣದ ಮಳೆ ಯಿಂದಾಗಿ ಆಗಸ್ಟ್ 15ರ ವೇಳೆಗೆ ಜಲಾಶಯದ ನೀರಿನ ಮಟ್ಟ 2,916 ಅಡಿಗಳಿಗೆ ಏರಿಕೆಯಾಗಿತ್ತು. ಈ ಸಂದರ್ಭದಲ್ಲಿ 32.115 ಟಿಎಂಸಿ ನೀರು ಸಂಗ್ರಹವಾಗಿತ್ತು. ಆದರೆ, ಆಗಸ್ಟ್ 16 ರಿಂದ ನಾಲೆಗಳಿಗೆ ಹಾಗು ನದಿಗೆ ನೀರು ಹರಿಸಲು ಆರಂಭಿಸಿದ ಬಳಿಕ ಜಲಾಶಯದ ನೀರಿನ ಸಂಗ್ರಹದಲ್ಲಿ ಭಾರೀ ಇಳಿಕೆಯಾಗಿದೆ. ಒಂದೇ ತಿಂಗಳಲ್ಲಿ ಸುಮಾರು 18 ಟಿಎಂಸಿ ನೀರು ಖಾಲಿಯಾಗಿದೆ. ಪ್ರಸ್ತುತ ಜಲಾಶಯದಲ್ಲಿ 2,891.48 ಅಡಿ ನೀರಿನ ಮಟ್ಟವಿದ್ದು, 14.884 ಟಿಎಂಸಿ ನೀರು ಮಾತ್ರ ಸಂಗ್ರಹವಾಗಿದೆ. ಅದರಲ್ಲಿ 10.512 ಟಿಎಂಸಿ ನೀರು ಮಾತ್ರ ಬಳಕೆಗೆ ಲಭ್ಯವಿದೆ. 4 ಟಿಎಂಸಿ ಡೆಡ್ ಸ್ಟೋರೇಜ್ ಆಗಿದೆ.

ಖಾಲಿಯಾಗಿರುವ 18 ಟಿಎಂಸಿ ಹೇಮಾವತಿ ಜಲಾಶಯದ ನೀರು ಬಹುತೇಕ ಕೆಆರ್‌ಎಸ್ ಮೂಲಕ ತಮಿಳುನಾಡಿಗೆ ಹರಿದಿದೆ. ಇದರ ಜೊತೆಗೆ ಜನ-ಜಾನುವಾರುಗಳಿಗೆ ಕುಡಿಯುವ ನೀರಿಗಾಗಿ ಕೆರೆಕಟ್ಟೆ ತುಂಬಿಸಲು ಕಾಲುವೆಗಳಿಗೂ ಸಹ ನೀರು ಹರಿಸಲಾಗಿದೆ. ನದಿಗೂ ಹೆಚ್ಚಿನ ಪ್ರಮಾಣದ ನೀರು ಹರಿದ ಪರಿಣಾಮ ಜಲಾಶಯ ಬರಿದಾಗುವ ಹಂತಕ್ಕೆ ತಲುಪಿದೆ.

**ಮುಂದಿನ 8 ತಿಂಗಳು ನೀರಿಗೆ ಆತಂಕ**

ಕಳೆದ ವರ್ಷ ಇದೇ ದಿನ ಜಲಾಶಯದಲ್ಲಿ ಸುಮಾರು 34 ಟಿಎಂಸಿ ನೀರು ಸಂಗ್ರಹವಾಗಿತ್ತು. ಆದರೆ, ಈ ಬಾರಿ ಅದರ ಅರ್ಧದಷ್ಟು ನೀರೂ ಇಲ್ಲದಿರುವುದು ಆತಂಕ ಹೆಚ್ಚಿಸಿದೆ.

ಮುಂಗಾರು ಮಳೆ ನಿರೀಕ್ಷಿತ ಪ್ರಮಾಣದಲ್ಲಿ ಬಾರದಿರುವುದರಿಂದ ಜಲಾಶಯಕ್ಕೆ ಮತ್ತೆ ಹೆಚ್ಚಿನ ಪ್ರಮಾಣದಲ್ಲಿ ನೀರು ಹರಿದುಬರುವ ಸಾಧ್ಯತೆ ಕಡಿಮೆಯಾಗಿದೆ. ಹೀಗಿರುವಾಗ, ಮುಂದಿನ 8 ತಿಂಗಳ ಕಾಲ ಹಾಸನ ಸೇರಿ ಹೇಮಾವತಿ ಜಲಾಶಯದ ನೀರನ್ನು ಅವಲಂಬಿಸಿರುವ ಪ್ರದೇಶಗಳಿಗೆ ಕುಡಿಯುವ ನೀರು ಪೂರೈಸುವುದು ಹೇಗೆಂಬ ಪ್ರಶ್ನೆ ಎದುರಾಗಿದೆ.

ಈ ಸಂಕಷ್ಟದ ನಡುವೆಯೇ ಮತ್ತೆ ತಮಿಳುನಾಡಿಗೆ ನೀರು ಹರಿಸಲು ಆದೇಶ ನೀಡಿರುವುದು ಜಿಲ್ಲೆಯ ಜನರ ಅಸಮಾಧಾನಕ್ಕೆ ಕಾರಣವಾಗಿದೆ. ಕುಡಿಯುವ ನೀರಿಗೂ ತೊಂದರೆ ಎದುರಾಗುವ ಸಾಧ್ಯತೆ ಇರುವುದರಿಂದ ತಮಿಳುನಾಡಿಗೆ ನೀರು ಹರಿಸಬಾರದು. ಜಿಲ್ಲೆಯ ಜನರು, ಜಾನುವಾರುಗಳು ಹಾಗು ಕೃಷಿಯ ಅಗತ್ಯಗಳಿಗೆ ಆದ್ಯತೆ ನೀಡಿ ಜಲಾಶಯದ ನೀರನ್ನು ಉಳಿಸಬೇಕೆಂದು ಜನರು ಆಗ್ರಹಿಸಿದ್ದಾರೆ.

### ಜಲಾಶಯದ ನೀರಿನ ಮಟ್ಟ

ಹೇಮಾವತಿ ಜಲಾಶಯದ ಗರಿಷ್ಠ ಮಟ್ಟ 2922.00 ಅಡಿಗಳಾಗಿದ್ದು, ಶುಕ್ರವಾರ ನೀರಿನ ಮಟ್ಟ 2891.48 ಅಡಿಗಳಷ್ಟಿದೆ. 37.103 ಟಿಎಂಸಿ ಗರಿಷ್ಠ ನೀರಿನ ಸಂಗ್ರಹ ಸಾಮರ್ಥ್ಯ ಹೊಂದಿದ್ದು, ಪ್ರಸ್ತುತ 14.884 ಟಿಎಂಸಿ ನೀರಿನ ಸಂಗ್ರಹವಾಗಿದೆ. (ಬಳಕೆಗೆ 10.512 ಟಿಎಂಸಿ) 867 ಕ್ಯೂಸೆಕ್ ಒಳಹರಿವಿದೆ. 300 ಕ್ಯೂಸೆಕ್ ಹೊರಹರಿವಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ 34.233 ಟಿಎಂಸಿ ನೀರು ಲಭ್ಯವಿತ್ತು.

## ಸಂಸದರ ವೇತನದಿಂದ ಜೋಡಿಹಳ್ಳ ಕೆರೆಗೆ ನೀರಿನ ವ್ಯವಸ್ಥೆ

• ಪ್ರಜೋದಯ ವರದಿ



**ಹೊಳೆನರಸೀಪುರ:** ತಾಲ್ಲೂಕಿನ ಹಳೆಕೋಟೆ ಹೋಬಳಿ ಬೆಟ್ಟದ ಸಾತೇನಹಳ್ಳಿ ಗ್ರಾಮದ ಜೋಡಿಹಳ್ಳ ಕೆರೆಗೆ ಕಾಲುವೆಯಿಂದ ಹರಿದು ವ್ಯರ್ಥವಾಗುತ್ತಿದ್ದ ನೀರನ್ನು ಸಂಗ್ರಹಿಸಿ, ಜಾನುವಾರುಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲು ಸಂಸದ ಶ್ರೇಯಸ್ ಪಟೇಲ್ ಅವರು ತಮ್ಮ ವೇತನದ ಹಣದಿಂದ ವೈಯಕ್ತಿಕವಾಗಿ ವೆಚ್ಚ ಭರಿಸಿದ್ದಾರೆ.

ಕಳೆದ 5 ವರ್ಷಗಳಿಂದ ಜೋಡಿ ಹಳ್ಳ ಕೆರೆಯಲ್ಲಿ ನೀರಿಲ್ಲದೆ ಬತ್ತಿಹೋಗಿದ್ದು, ಕೆರೆಗೆ ಶಾಶ್ವತ ನೀರಿನ ಮೂಲವೂ ಇಲ್ಲದ ಕಾರಣ ಸ್ಥಳೀಯ ರೈತರು ಹಾಗು ಗ್ರಾಮಸ್ಥರು ತೀವ್ರ ತೊಂದರೆ ಅನುಭವಿಸುತ್ತಿದ್ದರು. ಪ್ರಸಕ್ತ ವರ್ಷ ಮಳೆ ಕೊರತೆಯಿಂದ ಬರದ ಪರಿಸ್ಥಿತಿ ಎದುರಾಗಿರುವ ಹಿನ್ನಲೆ ಜಾನುವಾರುಗಳಿಗೆ ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ಸಂಸದರು ಈ ವ್ಯವಸ್ಥೆ ಕಲ್ಪಿಸಿದ್ದಾರೆ.

ಕಾಲುವೆಯಿಂದ ಹರಿದು ವ್ಯರ್ಥವಾಗುತ್ತಿದ್ದ ನೀರನ್ನು ಜೋಡಿಹಳ್ಳ ಕೆರೆಗೆ ಹರಿಸುವ ಮೂಲಕ ಜಾನುವಾರುಗಳಿ

» ನಾಲ್ಕನೇ ಪುಟದಲ್ಲಿ

CMYK CMYK CMYK CMYK

# ವಿಷನ್ 2027: ಗುರಿ ಮತ್ತು ದಾರಿ ಇದೆ, ಕ್ರಮಿಸುವ ಇಂಜಿನ್ ಎಲ್ಲಿದೆ?

ಗಂಟಾಘೋಷ ರಾಮಣ್ಣ ಎಂಬ ಹಳ್ಳಿಯ ಯುವಕನೊಬ್ಬ ಕೃಷಿ ಆಧಾರಿತ ಸಣ್ಣ ಉದ್ಯಮವೊಂದನ್ನು ಶುರು ಮಾಡಲು ಕನಸು ಕಾಣುತ್ತಾನೆ. ಸರ್ಕಾರ ಬಜೆಟ್‌ನಲ್ಲಿ ಯುವ ಉದ್ಯಮಿಗಳಿಗಾಗಿ 100 ಕೋಟಿ ರೂಪಾಯಿಗಳ ಬೃಹತ್ ಯೋಜನೆಯನ್ನು ಘೋಷಣೆ ಮಾಡುತ್ತದೆ. ಟಿವಿಯಲ್ಲಿ ಆ ಭರ್ಜರಿ ಘೋಷಣೆ ಕೇಳಿ ಸಂಭ್ರಮಿಸುವ ರಾಮಣ್ಣ, ಸಾಲ ಮತ್ತು ಅನುಮತಿಗಾಗಿ ಸರ್ಕಾರಿ ಕಚೇರಿಗಳ ಮೆಟ್ಟಿಲೇರುತ್ತಾನೆ. ಆದರೆ ಅಲ್ಲಿಂದ ಅವನ ಅಸಲಿ ಹೋರಾಟ ಶುರುವಾಗುತ್ತದೆ.

ಒಂದು ಸಣ್ಣ ಅನುಮತಿ ಪಡೆಯಲು 10 ಕಚೇರಿಗಳಿಗೆ ಅಲೆಯಬೇಕು. ಸಂಕೀರ್ಣ ನಿಯಮಗಳ ಜಾಲದಲ್ಲಿ ಸಿಲುಕಿ 6 ತಿಂಗಳಾದರೂ ಆತನ ಕೆಲಸವಾಗುವುದಿಲ್ಲ. ಕೊನೆಗೆ ವ್ಯವಸ್ಥೆಯ ವಿಳಂಬ ನೀತಿಯಿಂದ ಬೇಸತ್ತು ಆತ ತನ್ನ ಉದ್ಯಮದ ಕನಸನ್ನೇ ಕೈಬಿಡುತ್ತಾನೆ. ಇದು ಕೇವಲ ರಾಮಣ್ಣನ ಕಥೆಯಲ್ಲ, ಭಾರತದ ಹಲವು ರಾಜ್ಯದ ಆಡಳಿತ ವ್ಯವಸ್ಥೆಯ ನೈಜ ಕನ್ನಡಿ.

ಭಾರತ ಇಂದು ಜಾಗತಿಕ ಮಟ್ಟದಲ್ಲಿ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆಯಾಗಿರಬಹುದು. ಆದರೆ ಅಭಿವೃದ್ಧಿಯ ಮುಂದಿನ ಹಂತದಲ್ಲಿ ಭಾರತದ ನಿಜವಾದ ಪರೀಕ್ಷೆ ಇರುವುದು ಕೇವಲ ಆರ್ಥಿಕ ಬೆಳವಣಿಗೆಯಲ್ಲ; ಬದಲಾಗಿ ಆಡಳಿತ ಸಾಮರ್ಥ್ಯ, ಮಾನವ ಸಂಪತ್ತು, ತಂತ್ರಜ್ಞಾನ ಮತ್ತು ಸಂಸ್ಥೆಗಳ ಬಲದಲ್ಲಿ ಇದೆ.

ಭಾರತ ಈಗ ಮುಂದೆ ಸಾಗಬೇಕೇ ಎಂಬ ಪ್ರಶ್ನೆಯನ್ನು ಬಹು ಹಿಂದೆಯೇ ದಾಟಿದೆ, ಆದರೆ ಮುಂದೆ ಸಾಗುವ ಆ ಭಾರಿ ವೇಗಕ್ಕೆ ತಕ್ಕಷ್ಟು ಬಲವಾದ ಸಂಸ್ಥೆಗಳನ್ನು ನಾವು ಕಟ್ಟಬಹುದೇ ಎಂಬುದೇ ಇಂದಿನ ಬಹುದೊಡ್ಡ ಪ್ರಶ್ನೆಯಾಗಿದೆ. ಭಾರತದ ಹಲವು ರಾಜ್ಯಗಳಲ್ಲಿ ಯೋಜನೆಗಳ ಕೊರತೆಯಿಲ್ಲ, ಕಾನೂನುಗಳ ಕೊರತೆಯಿಲ್ಲ, ಸಮಿತಿಗಳ ಹಾಗೂ ಬಜೆಟ್ ಘೋಷಣೆಗಳಿಗೂ ಯಾವ ಕೊರತೆಯೂ ಇಲ್ಲ. ಆದರೆ ಒಂದು ಯೋಜನೆ ಕಾಗದದಿಂದ ಹೊರಬಂದು ಸಾಮಾನ್ಯ ನಾಗರಿಕನ ಬದುಕಿನಲ್ಲಿ ಬದಲಾವಣೆಯಾಗುವವರೆಗೆ ಅದು ಅನೇಕ ಹಂತಗಳನ್ನು ದಾಟಬೇಕಾಗುತ್ತದೆ.

ಹಣ ಬಿಡುಗಡೆ, ಅಧಿಕಾರಿ ನೇಮಕ, ಅನುಮತಿ, ಖರೀದಿ ಪ್ರಕ್ರಿಯೆ, ಮೂಲಸೌಕರ್ಯ ನಿರ್ಮಾಣ ಮತ್ತು ಮೇಲ್ವಿಚಾರಣೆಯಂತಹ ದೊಡ್ಡ ಸರಪಳಿಯ ಯಾವುದಾದರೂ ಒಂದು ಕೊಂಡಿ ದುರ್ಬಲವಾದರೂ ಎಷ್ಟೇ ಉತ್ತಮ ಯೋಜನೆಯಿದ್ದರೂ ಅದು ಸಂಪೂರ್ಣವಾಗಿ ವಿಫಲವಾಗುತ್ತದೆ. ಹೀಗಾಗಿ ನಮಗೆ ಸರ್ಕಾರ ಏನು ಘೋಷಿಸಿತು? ಎನ್ನುವುದಕ್ಕಿಂತ ಸರ್ಕಾರ ಏನು ಸಾಧಿಸಿತು? ಎಂಬ ಫಲಿತಾಂಶ ಆಧಾರಿತ ಆಡಳಿತದ ತೀವ್ರ ಅಗತ್ಯವಿದೆ.

ಬಲಿಷ್ಠ ರಾಜ್ಯ ಎಂದರೆ ಕೇವಲ ಹೆಚ್ಚು ಕಚೇರಿಗಳು ಹಾಗೂ ಹೆಚ್ಚು ಅಧಿಕಾರಿಗಳನ್ನು ಹೊಂದಿರುವ ದೊಡ್ಡ ಸರ್ಕಾರ ಎಂಬುದು ತಪ್ಪು ಕಲ್ಪನೆ. ನಿರ್ಧಾರ ಎಷ್ಟು ವೇಗವಾಗಿ ಆಗುತ್ತದೆ, ನಾಗರಿಕನ ಕೆಲಸ ಎಷ್ಟು ಸರಳವಾಗಿ ಆಗುತ್ತದೆ ಮತ್ತು ಸಾರ್ವಜನಿಕ ಹಣ ಎಷ್ಟು ಪರಿಣಾಮಕಾರಿಯಾಗಿ ಬಳಕೆಯಾಗುತ್ತದೆ ಎಂಬುದೇ ಆಡಳಿತ ಸಾಮರ್ಥ್ಯದ ನಿಜವಾದ ಅಳತೆಯಾಗಿದೆ. ಅಂದರೆ ಭಾರತಕ್ಕೆ ಈಗ ದೊಡ್ಡ ಸರ್ಕಾರಕ್ಕಿಂತ ಹೆಚ್ಚಾಗಿ ಸಮರ್ಥ ಸರ್ಕಾರದ ಅಗತ್ಯವಿದೆ.

ನಿರ್ಧಾರ ತೆಗೆದುಕೊಳ್ಳುವ ಭಯ ನಮ್ಮ ಆಡಳಿತ ವ್ಯವಸ್ಥೆಯನ್ನು ಕಾಡುತ್ತಿರುವ ಮತ್ತೊಂದು ಗಂಭೀರ ಸಮಸ್ಯೆ ಎಂದರೆ ಅಧಿಕಾರಿಗಳಲ್ಲಿರುವ ನಿರ್ಧಾರ ತೆಗೆದುಕೊಳ್ಳುವ ಭಯ. ಒಬ್ಬ ಪ್ರಾಮಾಣಿಕ ಅಧಿಕಾರಿ ಹೊಸ ರೀತಿಯಲ್ಲಿ ಕೆಲಸ ಮಾಡಲು ಪ್ರಯತ್ನಿಸಿದಾಗ ಏನಾದರೂ ತಪ್ಪಾದರೆ ತನಿಖೆ, ಲೆಕ್ಕಪರಿಶೋಧನೆ ಹಾಗೂ ನ್ಯಾಯಾಲಯದ ವಿಚಾರಣೆ ಎದುರಿಸಬೇಕಾಗುತ್ತದೆ ಎಂಬ ಕಾರಣಕ್ಕೆ ನಿರ್ಧಾರ ತೆಗೆದುಕೊಳ್ಳದಿರುವುದೇ ಸುರಕ್ಷಿತ ಎಂಬ ಮನೋಭಾವ ಬೆಳೆಯುತ್ತಿದೆ, ಇದು ಅತ್ಯಂತ ಅಪಾಯಕಾರಿ. ಭ್ರಷ್ಟಾಚಾರವನ್ನು ಕ್ಷಮಿಸಬಾರದು ನಿಜ, ಆದರೆ ಪ್ರಾಮಾಣಿಕ ತಪ್ಪನ್ನು ಭ್ರಷ್ಟಾಚಾರಕ್ಕೆ ಸಮಾನವಾಗಿ ನೋಡಬಾರದು.

ವ್ಯವಸ್ಥಿತ ಭ್ರಷ್ಟಾಚಾರ ಮತ್ತು ಕೇವಲ ಆಡಳಿತಾತ್ಮಕ ನ್ಯೂನತೆಗಳನ್ನು ಪ್ರತ್ಯೇಕಿಸಿ ತನಿಖೆ ನಡೆಸಲು ಒಂದು ಸ್ಪಷ್ಟವಾದ, ಸ್ವತಂತ್ರವಾದ ವ್ಯವಸ್ಥೆ ತುರ್ತಾಗಿ ಜಾರಿಗೆ ಬರಬೇಕಿದೆ. ಮಹಾರಾಷ್ಟ್ರದ ಐಎಎಸ್ ಅಧಿಕಾರಿ ತುಕಾರಾಂ ಮುಂಡೆ ಅವರಂತಹ ದಕ್ಷ ಅಧಿಕಾರಿಗಳು ವಾಸ್ತವದಲ್ಲಿ ವ್ಯವಸ್ಥೆಯ ನ್ಯೂನತೆಗಳನ್ನು ಗುರುತಿಸಿ ಅದನ್ನು ಸ್ವಚ್ಛಗೊಳಿಸುತ್ತಾ, ಆಡಳಿತದ ವೇಗವನ್ನು ಹೆಚ್ಚಿಸುತ್ತಾ ಹೆಜ್ಜೆ ಇಡುತ್ತಿದ್ದಾರೆ.

ಆದರೆ, ಇಂತಹ ದಿಟ್ಟ ಅಧಿಕಾರಿಗಳು ಭ್ರಷ್ಟ ವ್ಯವಸ್ಥೆಯ ವಿರುದ್ಧ ಹೋರಾಡುವಾಗ, ನಮ್ಮ ಒಟ್ಟು ವ್ಯವಸ್ಥೆಯು ಅವರಿಗೆ ಬೆನ್ನೆಲುಬಾಗಿ ನಿಲ್ಲುವ ಬದಲು, ಅವರ ವಿರುದ್ಧವಾಗಿ ನಿಲ್ಲುತ್ತಿದೆ. ಈ ವ್ಯವಸ್ಥೆ ಬದಲಾಗಬೇಕು; ಇಂತಹ ಪ್ರಾಮಾಣಿಕ ಅಧಿಕಾರಿಗಳನ್ನು ಬೆಂಬಲಿಸುವ ಮತ್ತು ಅವರ ಬೆನ್ನಿಗೆ ನಿಲ್ಲುವಂತಹ ಒಂದು ದೃಢವಾದ ವ್ಯವಸ್ಥೆ ನಮ್ಮಲ್ಲಿ ಬಂದರೆ ಮಾತ್ರ ಆಡಳಿತದ ವೇಗ ಮತ್ತಷ್ಟು ಹೆಚ್ಚಲು ಸಾಧ್ಯ.




> **ಭಾರತ ಈಗ ಮುಂದೆ ಸಾಗಬೇಕೇ ಎಂಬ ಪ್ರಶ್ನೆಯನ್ನು ಬಹು ಹಿಂದೆಯೇ ದಾಟಿದೆ, ಆದರೆ ಮುಂದೆ ಸಾಗುವ ಆ ಭಾರಿ ವೇಗಕ್ಕೆ ತಕ್ಕಷ್ಟು ಬಲವಾದ ಸಂಸ್ಥೆಗಳನ್ನು ನಾವು ಕಟ್ಟಬಹುದೇ ಎಂಬುದೇ ಇಂದಿನ ಬಹುದೊಡ್ಡ ಪ್ರಶ್ನೆಯಾಗಿದೆ. ಭಾರತದ ಹಲವು ರಾಜ್ಯಗಳಲ್ಲಿ ಯೋಜನೆಗಳ ಕೊರತೆಯಿಲ್ಲ, ಕಾನೂನುಗಳ ಕೊರತೆಯಿಲ್ಲ, ಸಮಿತಿಗಳ ಹಾಗೂ ಬಜೆಟ್ ಘೋಷಣೆಗಳಿಗೂ ಯಾವ ಕೊರತೆಯೂ ಇಲ್ಲ**

ಇಲ್ಲಿಯವರೆಗೆ ಬದಲಾಗಬೇಕಾದರೆ ಏನೇನು ಆಗಬೇಕು ಎನ್ನುವುದು ಮುಂದಿನ ಭವಿಷ್ಯವಾಗಿದೆ. ಅಧಿಕಾರಿಗೆ ನಿರ್ಧಾರ ತೆಗೆದುಕೊಳ್ಳುವ ಸ್ವಾತಂತ್ರ್ಯ ಇರಬೇಕು, ಅದೇ ಸಮಯದಲ್ಲಿ ಆ ನಿರ್ಧಾರಕ್ಕೆ ದಾಖಲೆ, ಕಾರಣ ಮತ್ತು ಹೊಣೆಗಾರಿಕೆಯ ವ್ಯವಸ್ಥೆಯೂ ಇರಬೇಕು; ಅಂದರೆ ನಮಗೆ ಭಯವಿಲ್ಲದ ಆದರೆ ಹೊಣೆಗಾರಿಕೆಯ ಆಡಳಿತ ಬೇಕಾಗಿದೆ. ಇದರ ಜೊತೆಗೆ, ಇಂದಿನ ಸರ್ಕಾರದ ಮುಂದೆ ಇರುವ ಸಮಸ್ಯೆಗಳು ಹಿಂದಿನ 20ನೇ ಶತಮಾನದ ಸಮಸ್ಯೆಗಳಲ್ಲ; ಕೃತಕ ಬುದ್ಧಿಮತ್ತೆ, ಅರೆವಾಹಕ ತಂತ್ರಜ್ಞಾನ, ಜೀವ ತಂತ್ರಜ್ಞಾನ, ಹವಾಮಾನ ಬದಲಾವಣೆ ಮತ್ತು ಸೈಬರ್ ಭದ್ರತೆಯಂತಹ ಕ್ಷೇತ್ರಗಳಲ್ಲಿ ನಿರ್ಧಾರ ಕೈಗೊಳ್ಳಲು ಆಳವಾದ ತಾಂತ್ರಿಕ ಜ್ಞಾನ ಬೇಕಾಗುತ್ತದೆ. ಆದ್ದರಿಂದ ಆಡಳಿತದಲ್ಲಿ ಕೇವಲ ಸಾಮಾನ್ಯ ಆಡಳಿತ ಜ್ಞಾನ ಇರುವ ಅಧಿಕಾರಿಗಳ ಜೊತೆಗೆ ಆಯಾ ಕ್ಷೇತ್ರದ ಪರಿಣಿತರಿಗೂ ಸೂಕ್ತ ಸ್ಥಾನ ನೀಡಲೇಬೇಕಾದ ಅನಿವಾರ್ಯತೆ ಇದೆ.

ಸಾಮಾನ್ಯ ಆಡಳಿತಗಾರರ ಅನುಭವ ಮತ್ತು ತಜ್ಞರ ಆಳವಾದ ಜ್ಞಾನವು ಒಗ್ಗೂಡಿದಾಗ ಮಾತ್ರ, ಅತ್ಯಂತ ನಿಖರವಾದ ಹಾಗೂ ವೈಜ್ಞಾನಿಕವಾದ ನೀತಿಗಳನ್ನು ರೂಪಿಸುವ ಮೂಲಕ ದೇಶದ ಭವಿಷ್ಯದ ಸಂಕೀರ್ಣ ಸವಾಲುಗಳನ್ನು ಸಮರ್ಥವಾಗಿ ಎದುರಿಸಲು ಸರ್ಕಾರಕ್ಕೆ ಸಾಧ್ಯವಾಗುತ್ತದೆ. ಇದೆಲ್ಲದರ ಜೊತೆಗೆ, ಆಡಳಿತ ಯಂತ್ರದ ವೇಗವನ್ನು ಹೆಚ್ಚಿಸುವಲ್ಲಿ ಶಾಸಕಾಂಗ ಮತ್ತು ನ್ಯಾಯಾಂಗದ ಪಾತ್ರದ ಬಗ್ಗೆಯೂ ನಾವು ಹೊಸ ದೃಷ್ಟಿಕೋನದಿಂದ ಯೋಚಿಸಬೇಕಿದೆ.

ಜನಪ್ರತಿನಿಧಿಗಳು (ಶಾಸಕಾಂಗ) ಮತ್ತು ನ್ಯಾಯಾಂಗದ ಹಸ್ತಕ್ಷೇಪವು ಆಡಳಿತದ ವೇಗವನ್ನು ಕುಂಠಿತಗೊಳಿಸುವ ಅಡೆತಡೆಯಾಗುವ ಬದಲು, ಯೋಜನೆಗಳ ತ್ವರಿತ ಅನುಷ್ಠಾನಕ್ಕೆ ನೆರವಾಗುವಂತಿರಬೇಕು. ಆಡಳಿತಾತ್ಮಕ ಕೆಲಸಗಳು, ಗುತ್ತಿಗೆಗಳು ಅಥವಾ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳ (ಪಿಐಎಲ್) ವಿಚಾರದಲ್ಲಿ ನಡೆಯುವ ಹಸ್ತಕ್ಷೇಪಗಳು ವ್ಯವಸ್ಥೆಗೆ ಸಮಸ್ಯೆಯಾಗಬಾರದು; ಬದಲಿಗೆ, ಶಾಸಕಾಂಗ ಮತ್ತು ನ್ಯಾಯಾಂಗವನ್ನು ವಿಶ್ವಾಸಕ್ಕೆ, ಅವರ ಪಾಲ್ಗೊಳ್ಳುವಿಕೆಯನ್ನು ಆಡಳಿತ ಯಂತ್ರದ ವೇಗ ಹೆಚ್ಚಿಸಲು ಬಳಸಿಕೊಳ್ಳುವ ಕಾರ್ಯತಂತ್ರ ರೂಪಿಸಬೇಕು.

ಆಡಳಿತ ಯಂತ್ರವು ಮುಕ್ತವಾಗಿ ಹಾಗೂ ವೇಗವಾಗಿ ಕೆಲಸ ಮಾಡಬೇಕಾದರೆ, ಕೇವಲ ಲಕ್ಷ್ಮಣರೇಖೆ ಎಳೆದುಕೊಂಡು ಪರಸ್ಪರ ದೂರವುಳಿಯುವ ಬದಲು, ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳು ಆಡಳಿತದ ವೇಗ ಹೆಚ್ಚಿಸುವ ಹಾಗೂ ಅಭಿವೃದ್ಧಿಯ ಗುರಿ ಮುಟ್ಟುವ ನಿಟ್ಟಿನಲ್ಲಿ ಸಮನ್ವಯದಿಂದ ಕೆಲಸ ಮಾಡುವುದು ಇಂದಿನ ತುರ್ತು ಅಗತ್ಯವಾಗಿದೆ.

ಕೊನೆಯ ಹಂತದ ಆಡಳಿತ ಸರ್ಕಾರದ ನಿಜವಾದ ಮುಖ ಕಾಣುವುದು ರಾಜಧಾನಿಯ ಹವಾ ನಿಯಂತ್ರಿತ ಸಚಿವಾಲಯದ ಕಚೇರಿಗಳಲ್ಲಲ್ಲ; ಬದಲಾಗಿ ಒಂದು ಹಳ್ಳಿಯ ಶಾಲೆಯಲ್ಲಿ, ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ, ಪೊಲೀಸ್ ಠಾಣೆಯಲ್ಲಿ ಅಥವಾ ಪಂಚಾಯಿತಿ ಕಚೇರಿಯಲ್ಲಿ ಸರ್ಕಾರ ಹೇಗೆ ಕೆಲಸ ಮಾಡುತ್ತದೆ ಎಂಬುದೇ ಮುಖ್ಯವಾಗುತ್ತದೆ. ಕೊನೆಯ ಹಂತದ ಸರ್ಕಾರಿ ನೌಕರನ ಸಾಮರ್ಥ್ಯವೂ ರಾಜ್ಯದ ಸಾಮರ್ಥ್ಯವೇ ಆಗಿರುತ್ತದೆ.

ಒಬ್ಬ ಶಿಕ್ಷಕನಿಗೆ ಕೇವಲ ಪಠ್ಯಪುಸ್ತಕ ಕೊಟ್ಟರೆ ಸಾಲದು, ಅವನಿಗೆ ತರಬೇತಿ, ಉತ್ತಮ ನಿರ್ವಹಣೆ ಹಾಗೂ ವೃತ್ತಿಪರ ಸ್ವಾತಂತ್ರ್ಯವೂ ಬೇಕು. ಬಜೆಟ್ ದೊಡ್ಡದಾದ ತಕ್ಷಣ ಅಭಿವೃದ್ಧಿಯೂ ದೊಡ್ಡದಾಗುವುದಿಲ್ಲ; ಹಣ ಸರಿಯಾದ ಸಮಯದಲ್ಲಿ ಬಿಡುಗಡೆಯಾಗಿ, ಸರಿಯಾದ ಉದ್ದೇಶಕ್ಕೆ ಖರ್ಚಾಗಿ, ಅದರ ಮೇಲ್ವಿಚಾರಣೆ ನಡೆದಾಗ ಮಾತ್ರ ಫಲಿತಾಂಶ ಸಿಗಲು ಸಾಧ್ಯ. ಬಜೆಟ್ ಹಂಚಿಕೆ ಅಭಿವೃದ್ಧಿಯ ಆರಂಭವಷ್ಟೇ, ಫಲಿತಾಂಶವೇ ಅದರ ಅಂತ್ಯ.

ಇನ್ನು ತಂತ್ರಜ್ಞಾನದ ವಿಚಾರಕ್ಕೆ ಬಂದರೆ, ಭಾರತ ಡಿಜಿಟಲ್ ಗುರುತು, ತ್ವರಿತ ಪಾವತಿ ಹಾಗೂ ನೇರ ಹಣ ವರ್ಗಾವಣೆ ಮುಂತಾದವುಗಳಲ್ಲಿ ದೊಡ್ಡ ಹೆಜ್ಜೆ ಇಟ್ಟಿದೆ. ಆದರೆ ಕೃತಕ ಬುದ್ಧಿಮತ್ತೆ ಯಂತಹ ಆಧುನಿಕ ತಂತ್ರಜ್ಞಾನವನ್ನು ದುರ್ಬಲ ಸಂಸ್ಥೆಗಳಿಗೆ ಕೊಟ್ಟರೆ ತಪ್ಪುಗಳು ವೇಗವಾಗಿ ನಡೆಯಬಹುದೇ ಹೊರತು ಪರಿಹಾರ ಸಿಗುವುದಿಲ್ಲ. ತಂತ್ರಜ್ಞಾನವು ಸರ್ಕಾರವನ್ನು ಬದಲಾಯಿಸಬಹುದು, ಆದರೆ ಅದು ಬಲಿಷ್ಠ ಸಂಸ್ಥೆಗಳ ಬದಲಿಗೆ ಎಂದಿಗೂ ಬರಲಾರದು.

ಭ್ರಷ್ಟಾಚಾರವನ್ನು ಕೇವಲ ಒಬ್ಬ ಕೆಟ್ಟ ಅಧಿಕಾರಿಯ ವೈಯಕ್ತಿಕ ಸಮಸ್ಯೆ ಎಂದು ನೋಡದೆ, ಅದೊಂದು ವ್ಯವಸ್ಥೆಯ ಸಮಸ್ಯೆ ಎಂದು ಅರಿಯಬೇಕು. ಸಂಕೀರ್ಣ ನಿಯಮಗಳು, ಅತಿಯಾದ ಅಧಿಕಾರ ಹಾಗೂ ವಿಳಂಬ ನೀತಿಯೇ ಭ್ರಷ್ಟಾಚಾರಕ್ಕೆ ಅವಕಾಶಗಳನ್ನು ಸೃಷ್ಟಿಸುತ್ತವೆ.

ಒಂದು ಪ್ರಮಾಣಪತ್ರ ಪಡೆಯಲು 10 ಕಚೇರಿಗಳಿಗೆ ಅಲೆಯುವಂತಾದಾಗ ಮಧ್ಯವರ್ತಿಗಳು ಹುಟ್ಟಿಕೊಳ್ಳುತ್ತಾರೆ, ಅದೇ ಸೇವೆ ಸರಳ ಹಾಗೂ ಪಾರದರ್ಶಕವಾಗಿದ್ದರೆ ಮಧ್ಯವರ್ತಿಯ ಅವಕಾಶ ತಾನಾಗಿಯೇ ಕಡಿಮೆಯಾಗುತ್ತದೆ. ಜನಸಂಖ್ಯಾ ಲಾಭಾಂಶ ಭಾರತದ ದೊಡ್ಡ ಯುವಜನಸಂಖ್ಯೆಯನ್ನು ನಾವು ಜನಸಂಖ್ಯಾ ಲಾಭಾಂಶ ಎಂದು ಕರೆಯುತ್ತೇವೆ, ಆದರೆ ಶಿಕ್ಷಣ, ಕೌಶಲ್ಯ, ಆರೋಗ್ಯ, ಉದ್ಯೋಗ ಮತ್ತು ಉತ್ಪಾದಕತೆ ಇಲ್ಲದಿದ್ದರೆ ಈ ದೊಡ್ಡ ಯುವಜನಸಂಖ್ಯೆ ಲಾಭಾಂಶವಾಗುವ ಬದಲು ಉದ್ಯೋಗದ ತೀವ್ರ ಒತ್ತಡವಾಗಿ ಪರಿಣಮಿಸಬಹುದು.

ದೇಶದ ಭವಿಷ್ಯವನ್ನು ಕೇವಲ ಸೇತುವೆ ಮತ್ತು ಹೆದ್ದಾರಿಗಳಿಂದ ಕಟ್ಟಲಾಗುವುದಿಲ್ಲ, ಮಾನವ ಸಂಪತ್ತೇ ನಮ್ಮ ಅತ್ಯಂತ ದೊಡ್ಡ ಮೂಲಸೌಕರ್ಯವಾಗಬೇಕು. ಆಡಳಿತವನ್ನು ಕೇವಲ ಒಂದು ಕೇಂದ್ರೀಕೃತ ವ್ಯವಸ್ಥೆಯಿಂದ ಮಾತ್ರ ನಡೆಸಲು ಸಾಧ್ಯವಿಲ್ಲ; ಕೇಂದ್ರ, ರಾಜ್ಯ, ಜಿಲ್ಲೆ, ತಾಲೂಕು ಮತ್ತು ಪಂಚಾಯಿತಿಗಳು ಒಂದೇ ಆಡಳಿತ ಸರಪಳಿಯ ಕೊಂಡಿಗಳು. ಪಂಚಾಯಿತಿಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ಅಧಿಕಾರ, ಹಣ ಮತ್ತು ಸಿಬ್ಬಂದಿ ನೀಡದೆ ಸ್ಥಳೀಯ ಆಡಳಿತದ ಬಗ್ಗೆ ಮಾತನಾಡುವುದರಲ್ಲಿ ಅರ್ಥವಿಲ್ಲ.

ಅಂತೆಯೇ, ಕೇವಲ ರಸ್ತೆಗಳಿದ್ದರೆ ಸಾಲದು, ಉದ್ಯಮಿಗೆ ಹೂಡಿಕೆ ಮಾಡಲು ಮತ್ತು ಕಾರ್ಮಿಕರಿಗೆ ರಕ್ಷಣೆ ನೀಡಲು ನ್ಯಾಯಾಂಗದ ಸಾಮರ್ಥ್ಯವೂ ಆರ್ಥಿಕ ಸಾಮರ್ಥ್ಯದ ಒಂದು ಪ್ರಮುಖ ಭಾಗವಾಗಿದೆ. ಕಾನೂನು ಎಲ್ಲರಿಗೂ ಒಂದೇ ರೀತಿಯಲ್ಲಿ ಮತ್ತು ಸಮಯಕ್ಕೆ ಸರಿಯಾಗಿ ಜಾರಿಯಾಗುವ ವಿಶ್ವಾಸವೇ ಸಂಸ್ಥೆಯ ನಿಜವಾದ ಬಲವಾಗಿದೆ. ರಾಷ್ಟ್ರೀಯ ಶಕ್ತಿ ಎಂದರೆ ಕೇವಲ ಸೇನೆ ಮಾತ್ರವಲ್ಲ; ಅದರ ಹಿಂದೆ ಆರ್ಥಿಕ, ಕೈಗಾರಿಕಾ, ತಾಂತ್ರಿಕ, ಹಣಕಾಸು ಮತ್ತು ರಾಜತಾಂತ್ರಿಕ ಸಾಮರ್ಥ್ಯವೂ ಇರಬೇಕು.

ದೇಶದ ಒಳಗಿನ ಸಂಸ್ಥೆಗಳ ಬಲವೇ ದೇಶದ ಹೊರಗಿನ ಶಕ್ತಿಗೆ ಆಧಾರವಾಗಿದೆ. 2047ರ ಅಸಲಿ ಪರೀಕ್ಷೆ 2047ರಲ್ಲಿ ಭಾರತ ದೊಡ್ಡ ಆರ್ಥಿಕ ಶಕ್ತಿಯಾಗುವುದು ಮಹತ್ವದ ಸಾಧನೆಯೇ ಸರಿ, ಆದರೆ ಅದಕ್ಕಿಂತ ದೊಡ್ಡ ಸಾಧನೆ ಎಂದರೆ, ಒಬ್ಬ ಸಾಮಾನ್ಯ ನಾಗರಿಕ ತನ್ನ ಕೆಲಸಕ್ಕಾಗಿ ಅಧಿಕಾರಿಯ ವೈಯಕ್ತಿಕ ಕೃಪೆಯನ್ನು ಬೇಡಿಕೊಳ್ಳಬೇಕಾದ ದುಸ್ಥಿತಿ ಇರದಿರುವುದು.

ಒಬ್ಬ ರೈತನಿಗೆ ಸರಿಯಾದ ಮಾಹಿತಿ ಮತ್ತು ಸೇವೆ ಸಮಯಕ್ಕೆ ಸಿಗುವುದು, ಪ್ರಾಮಾಣಿಕ ಅಧಿಕಾರಿಗೆ ನಿರ್ಧಾರ ತೆಗೆದುಕೊಳ್ಳಲು ಭಯವಿರದಿರುವುದು, ರೋಗಿಗೆ ವಿಶ್ವಾಸಾರ್ಹ ಸಾರ್ವಜನಿಕ ಆರೋಗ್ಯ ಸೇವೆ ದೊರೆಯುವುದು ಹಾಗೂ ತೆರಿಗೆದಾರನಿಗೆ ತನ್ನ ಹಣದ ಬಳಕೆಯ ಬಗ್ಗೆ ವಿಶ್ವಾಸವಿರುವುದು ನೈಜ ಅಭಿವೃದ್ಧಿಯ ಸಂಕೇತವಾಗಿದೆ. ಭಾರತದ ಕನಸುಗಳು ಬಹಳ ದೊಡ್ಡವಾಗಿವೆ, ಈಗ ಆ ಕನಸುಗಳ ಗಾತ್ರಕ್ಕೆ ತಕ್ಕ ಬಲಿಷ್ಠ ಸಂಸ್ಥೆಗಳನ್ನು ಕಟ್ಟುವ ಕಾಲ ಕೂಡಿಬಂದಿದೆ.

ಉತ್ತಮ ನೀತಿ, ಬಲಿಷ್ಠ ಸಂಸ್ಥೆ, ಸಮರ್ಥ ಮಾನವ ಸಂಪತ್ತು, ಆಧುನಿಕ ತಂತ್ರಜ್ಞಾನ, ಶಿಸ್ತಿನ ಅನುಷ್ಠಾನ ಹಾಗೂ ಸಾರ್ವಜನಿಕ ವಿಶ್ವಾಸ ಸೇರಿದಾಗ ಮಾತ್ರ ಭಾರತವು ನಿಜವಾದ ಬಲಿಷ್ಠ ರಾಷ್ಟ್ರವಾಗಿ ಹೊರಹೊಮ್ಮಲು ಸಾಧ್ಯ. ಇದು ಕೇವಲ ಆಡಳಿತದ ಪ್ರಶ್ನೆಯಲ್ಲ, 2047ರ ಭಾರತದ ಭವಿಷ್ಯದ ಹಾಗೂ ಮೂಲಭೂತ ಪರೀಕ್ಷೆಯಾಗಿದೆ.

**– ಗುರುರಾಜ್** ಗಂಟಿಹೊಳೆ



## ಇಂದಿನ ಬಹುದೊಡ್ಡ ಪ್ರಶ್ನೆಯಾಗಿದೆ....

- ಭಾರತದ ಹಲವು ರಾಜ್ಯಗಳಲ್ಲಿ ಯೋಜನೆಗಳ ಕೊರತೆಯಿಲ್ಲ, ಕಾನೂನುಗಳ ಕೊರತೆಯಿಲ್ಲ, ಸಮಿತಿಗಳ ಹಾಗೂ ಬಜೆಟ್ ಘೋಷಣೆಗಳಿಗೂ ಯಾವ ಕೊರತೆಯೂ ಇಲ್ಲ.
- ಒಂದು ಯೋಜನೆ ಕಾಗದದಿಂದ ಹೊರಬಂದು ಸಾಮಾನ್ಯ ನಾಗರಿಕನ ಬದುಕಿನಲ್ಲಿ ಬದಲಾವಣೆಯಾಗುವವರೆಗೆ ಅದು ಅನೇಕ ಹಂತಗಳನ್ನು ದಾಟಬೇಕಾಗುತ್ತದೆ.
- ಹಣ ಬಿಡುಗಡೆ, ಅಧಿಕಾರಿ ನೇಮಕ, ಅನುಮತಿ, ಖರೀದಿ ಪ್ರಕ್ರಿಯೆ, ಮೂಲಸೌಕರ್ಯ ನಿರ್ಮಾಣ ಮತ್ತು ಮೇಲ್ವಿಚಾರಣೆಯಂತಹ ದೊಡ್ಡ ಸರಪಳಿಯ ಯಾವುದಾದರೂ ಒಂದು ಕೊಂಡಿ ದುರ್ಬಲವಾದರೂ ಎಷ್ಟೇ ಉತ್ತಮ ಯೋಜನೆಯಿದ್ದರೂ ಅದು ಸಂಪೂರ್ಣವಾಗಿ ವಿಫಲವಾಗುತ್ತದೆ.
- ಹೀಗಾಗಿ ನಮಗೆ ಸರ್ಕಾರ ಏನು ಘೋಷಿಸಿತು? ಎನ್ನುವುದಕ್ಕಿಂತ ಸರ್ಕಾರ ಏನು ಸಾಧಿಸಿತು? ಎಂಬ ಫಲಿತಾಂಶ ಆಧಾರಿತ ಆಡಳಿತದ ತೀವ್ರ ಅಗತ್ಯವಿದೆ.
- ಬಲಿಷ್ಠ ರಾಜ್ಯ ಎಂದರೆ ಕೇವಲ ಹೆಚ್ಚು ಕಚೇರಿಗಳು ಹಾಗೂ ಹೆಚ್ಚು ಅಧಿಕಾರಿಗಳನ್ನು ಹೊಂದಿರುವ ದೊಡ್ಡ ಸರ್ಕಾರ ಎಂಬುದು ತಪ್ಪು ಕಲ್ಪನೆ.
- ನಿರ್ಧಾರ ಎಷ್ಟು ವೇಗವಾಗಿ ಆಗುತ್ತದೆ, ನಾಗರಿಕನ ಕೆಲಸ ಎಷ್ಟು ಸರಳವಾಗಿ ಆಗುತ್ತದೆ ಮತ್ತು ಸಾರ್ವಜನಿಕ ಹಣ ಎಷ್ಟು ಪರಿಣಾಮಕಾರಿಯಾಗಿ ಬಳಕೆಯಾಗುತ್ತದೆ ಎಂಬುದೇ ಆಡಳಿತ ಸಾಮರ್ಥ್ಯದ ನಿಜವಾದ ಅಳತೆಯಾಗಿದೆ.



## ಜ್ಞಾನದ ಹುಡುಕಾಟ, ನಡವಳಿಕೆಗಾಗಿ...

ಜ್ಞಾನದ ಆಳಕ್ಕೆ ಇಳಿದಷ್ಟು ಚಿತ್ರ ವಿಚಿತ್ರ ಸತ್ಯಗಳು ಅನಾವರಣಗೊಳ್ಳುತ್ತವೆ. ಮತ್ತೆ ನಮ್ಮ ಅಲ್ಪಜ್ಞಾನದ ಅರಿವಾಗಿ ನಾಚಿಕೆಯಾಗುತ್ತದೆ. ಹಾಗೆಯೇ ಕೆಲವೊಮ್ಮೆ ವಿಷಯಗಳು ಗಾಬರಿ ಹುಟ್ಟಿಸುತ್ತವೆ. ಮುಖವಾಡ ಕಳಚಿದ ಸಹಜ ಸ್ಥಿತಿ ಮತ್ತು ತಟಸ್ಥ ಸನ್ನಿವೇಶದಲ್ಲಿ ತೆರೆದುಕೊಳ್ಳುವ ಮಾಹಿತಿಗಳು ಸ್ಫೋಟಕ ಮನಸ್ಥಿತಿ ಹೊಂದಿರುತ್ತದೆ.

ಹಾಗೆ ಕೆಲವೊಮ್ಮೆ ದೀರ್ಘ ಚಿಂತನೆಯಲ್ಲಿ ತೊಡಗಿದಾಗ ಇತ್ತೀಚಿನ ವರ್ಷಗಳಲ್ಲಿ ಸಮಾಜಮುಖಿ ಚಿಂತನೆಯಲ್ಲಿ ತೊಡಗಿರುವವರು, ಚಳವಳಿ, ಹೋರಾಟಗಳಲ್ಲಿ ಭಾಗಿಯಾಗುತ್ತಿರುವವರು, ಧಾರ್ಮಿಕ, ಸಾಂಸ್ಕೃತಿಕ, ಶೈಕ್ಷಣಿಕ, ಆಧ್ಯಾತ್ಮಿಕ ಚಿಂತನೆಗಳಲ್ಲಿ ತೊಡಗಿಸಿಕೊಂಡಿರುವವರು ತಾವು ಮಹಾ ಜ್ಞಾನಿಗಳು, ಎಲ್ಲಾ ವಿಷಯಗಳನ್ನು ಅರಿತವರು, ತುಂಬಾ ಒಳ್ಳೆಯವರು ಎಂದು ಭಾವಿಸಿಕೊಳ್ಳುತ್ತಾ, ಇತರರಲ್ಲಿ ಪರಿಪೂರ್ಣ ಪ್ರಜ್ಞೆ ಇಲ್ಲ, ಅವರು ಕೆಟ್ಟವರು ಮತ್ತು ನಂಬಿಕೆಗೆ ಅರ್ಹರಲ್ಲ ಎಂದು ಭ್ರಮಿಸುತ್ತಾ, ತಮ್ಮನ್ನು ತಾವು ಮಾರ್ಕೆಟ್ ಮಾಡಿಕೊಂಡು, ಸಮಾಜದಲ್ಲಿ ಅಸ್ತಿತ್ವ ಉಳಿಸಿಕೊಳ್ಳಲು, ಜೀವನ ಕಟ್ಟಿಕೊಳ್ಳಲು ಪ್ರಯತ್ನಿಸುತ್ತಿರುವುದು ಕಂಡು ಬರುತ್ತಿದೆ.

ತನ್ನ ಆತ್ಮಾವಲೋಕನ ಮಾಡಿಕೊಳ್ಳದೆ, ಇತರರನ್ನೇ ಹೆಚ್ಚು ಟಾರ್ಗೆಟ್ ಮಾಡಿಕೊಂಡು, ಬದುಕುವ ಕಲೆಯನ್ನೇ ಮರೆತು ಮಾತು ಮತ್ತು ಅಕ್ಷರಗಳ ಮೂಲಕವೇ ತಾವು ಒಬ್ಬ ಶ್ರೇಷ್ಠ ಚಿಂತಕರೇನೋ ಎಂಬಂತೆ ತಮ್ಮನ್ನು ತಾವು ಬಿಂಬಿಸಿಕೊಳ್ಳುತ್ತಿರುವುದು ಕಾಣುತ್ತಿದೆ. ತನ್ನನ್ನು ತಾನು ನಾನೇ ಎಂದು ಭಾವಿಸಿಕೊಳ್ಳುವುದೇ ಮೂರ್ಖತನದ ಇನ್ನೊಂದು ಮುಖ.

ಜ್ಞಾನದ ಆಳದಲ್ಲಿ ಅರಿವಾದ ಮತ್ತೊಂದು ಸತ್ಯದರ್ಶನವೆಂದರೆ, ನಾನು ಬುದ್ಧಿವಂತ ಎಂದು ಜನ ಮಾತನಾಡಿಕೊಳ್ಳುವುದಕ್ಕೆ ಕಾರಣ ನಿಜವಾಗಲೂ ನಾನು ಬುದ್ಧಿವಂತನಾಗಿರುವುದಲ್ಲ, ಬದಲಾಗಿ ಜನರ ಗ್ರಹಿಕೆ ಮತ್ತು ತಿಳುವಳಿಕೆಯ ಮಟ್ಟ ಕಡಿಮೆಯಾಗಿರುವುದು ಹಾಗೂ ಅವರು ಚಿಂತನೆ ಮತ್ತು ಅಧ್ಯಯನದಲ್ಲಿ ಆಸಕ್ತಿ ಕಳೆದುಕೊಂಡು, ಹಣ ಅಧಿಕಾರ ಗಳಿಸುವುದಕ್ಕಾಗಿ ಕುಟುಂಬ ನಿರ್ವಹಣೆಗೋ, ಉದ್ಯೋಗದಲ್ಲಿಯೋ ಹೆಚ್ಚು ಕಳೆದುಹೋಗುವುದರಿಂದ, ದಿಢೀರನೆ ಸಿಗುವ ಸಾಮಾಜಿಕ ಜಾಲತಾಣಗಳ ಕೆಲವು ಚಿಂತನೆಗಳಿಗೆ ಮಾರುಹೋಗುವ ಕಾರಣ ನಾನು ಬುದ್ಧಿವಂತ ಎಂದು ಭ್ರಮೆಗೆ ಒಳಗಾಗುತ್ತಿದ್ದೇನೆ. ಅದು ವಾಸ್ತವ ಅಲ್ಲವೇ ಅಲ್ಲ.

ಮುಖವಾಡವಲ್ಲದ, ಅಸಹಜವಲ್ಲದ, ಸಹಜ ಚಿಂತನಾಕ್ರಮ ಎನ್ನುವ ವಿಧಾನದಲ್ಲಿಯೂ ಈ ಆಧುನಿಕ ಸಂಕೀರ್ಣ ಕಾಲದಲ್ಲಿ ಅಸಹಜತೆ ಮೂಡಿ ಬರುತ್ತಿರುವುದು ಕಾಲದ ವ್ಯಂಗ್ಯವಾಗಿ ಕಾಣುತ್ತಿದೆ. ಜ್ಞಾನ ನಿಂತ ನೀರಲ್ಲ, ಅದೊಂದು ಹರಿಯುವ ಪ್ರವಾಹ. ಇತ್ತೀಚೆಗೆ ಸಾಮಾಜಿಕ ಜಾಲತಾಣಗಳಲ್ಲಿ ಒಂದು ಟ್ರೆಂಡ್ ಶುರುವಾಗಿದೆ. ಅದೇನೆಂದರೆ, ಅನೇಕ ಸಾಮಾನ್ಯ ಜನ ರೀಲ್ಸ್‌ಗಳನ್ನು ಮಾಡಿ ಫೇಸ್ಬುಕ್ ಇನ್ಸ್ಟಾಗ್ರಾಮ್‌ಗಳಲ್ಲಿ ಅಪ್ಲೋಡ್ ಮಾಡಿ ತುಂಬಾ ಪ್ರಖ್ಯಾತರಾಗುತ್ತಿದ್ದಾರೆ. ವಯಸ್ಸು, ಪ್ರದೇಶ, ಲಿಂಗ ಮುಂತಾದ ಯಾವುದೇ ವ್ಯತ್ಯಾಸವಿಲ್ಲದೆ, ಚಿತ್ರವಿಚಿತ್ರ ಕಂಟೆಂಟ್‌ಗಳ ಮೂಲಕ ಜನಪ್ರಿಯವಾಗಿ ಲಕ್ಷಾಂತರ ಹಿಂಬಾಲಕರು ಅಭಿಮಾನಿಗಳನ್ನು ಪಡೆದಿದ್ದಾರೆ. ಅದರಲ್ಲೂ ಮಹಿಳೆಯರು ಹೆಚ್ಚಾಗಿ ಈ ವಿಷಯದಲ್ಲಿ ಮುಂದಿದ್ದಾರೆ.

ಈ ರೀತಿ ರೀಲ್ಸ್ ಮಾಡುವ ಹೆಣ್ಣು ಮಕ್ಕಳು ಬಹುತೇಕರು ಸಾಂಪ್ರದಾಯಿಕ ಶೈಲಿಯ, ಪುರುಷ ಕೇಂದ್ರೀಕೃತ, ಮಹಿಳಾ ಸಮಾಜದ ಮಿತಿಗಳನ್ನು ಮೀರಿ ಹೆಚ್ಚು ಬೋಲ್ಡ್ ಆಗಿ ಮಾತನಾಡುತ್ತಾರೆ. ಒಂದಷ್ಟು ಅಶ್ಲೀಲ ಮಾತುಗಳು ಸಹ ಪುರುಷರಂತೆಯೇ ಇರುತ್ತದೆ. ಮಹಿಳೆಯರು ಅಶ್ಲೀಲ ಮಾತನಾಡಬಾರದು ಎನ್ನುವ ಪುರುಷ ಸಮಾಜದ ನಿರೀಕ್ಷೆಗೆ ವಿರುದ್ಧವಾಗಿ, ತಾವು ಪುರುಷರಂತೆ ಎಲ್ಲಾ ಪದಗಳನ್ನು ಉಪಯೋಗಿಸುತ್ತಾರೆ.

ಅದು ಅವರವರ ಸ್ವಾತಂತ್ರ್ಯ. ಆದರೆ ಈ ರೀಲ್ಸ್‌ಗಳನ್ನು ವೀಕ್ಷಿಸುವ ಕೆಲವು ಪರಿಚಿತರು, ಅಪರಿಚಿತರು, ಅನಾಮದೇಯರು, ನಕಲಿ ಐಡಿಯವರು ಯಾರೋ ತಮ್ಮ ತೆವಲಿಗೆ, ಕುಚೇಷ್ಟೆಗೆ, ರೇಗಿಸಬೇಕಂತಲೇ ಇವರ ಬಗ್ಗೆ ಕೆಟ್ಟದಾಗಿ ಕಾಮೆಂಟ್ ಮಾಡುತ್ತಾರೆ. ಅತ್ಯಂತ ಅಶ್ಲೀಲ ಪದ ಉಪಯೋಗಿಸುತ್ತಾರೆ. ಮುಖ್ಯವಾಗಿ ಆ ಹೆಣ್ಣನ್ನು ಬೆಲೆವೆಣ್ಣು ಎಂತಲೇ ಮಾತನಾಡಿಸುತ್ತಾರೆ. ಅಲ್ಲಿಂದ ಶುರುವಾಗುತ್ತದೆ ನೋಡಿ ಆ ಕಮೆಂಟ್ ಬಗ್ಗೆ, ಈ ರೀಲ್ ಮಾಡುವವರು ಆ ಕಮೆಂಟ್ಗಾ ನೂರು ಪಟ್ಟು ಹೆಚ್ಚು ಅಶ್ಲೀಲವಾಗಿ ಅವರಿಗೆ ಕಮೆಂಟ್ ಹಾಕಿದವರನ್ನು ಮತ್ತೆ ಮತ್ತೆ ನಿಂದಿಸುತ್ತಾ, ಅಮ್ಮ, ಅಕ್ಕ ಎಂದು ಎಲ್ಲರನ್ನೂ ನೆನಪಿಸಿಕೊಳ್ಳುತ್ತಾ, ಎಲ್ಲಾ ಕೆಟ್ಟ ಬೈಗುಳನ್ನು ಬಯ್ಯುತ್ತಾ, ತಮ್ಮ ಇಡೀ ಬಾಯಿ ಚಪಲವನ್ನು ತೀರಿಸಿಕೊಳ್ಳುತ್ತಾರೆ. ಇದಂತೂ ಒಂದು ರೀತಿ ಹಾಸ್ಯಾಸ್ಪದವಾಗಿರುತ್ತದೆ.

ಈ ಸಾಮಾಜಿಕ ಜಾಲತಾಣಗಳಲ್ಲಿ ಹೊಗಳಿಕೆಗಳ ಜೊತೆ ತೆಗಳಿಕೆಗಳು ಇರುತ್ತವೆ. ನಾವು ಎರಡನ್ನು ಗಮನಿಸಿ ನಿರ್ಲಕ್ಷಿಸಬೇಕು. ಯಾರೋ ಕೇವಲ ಒಬ್ಬರ ಕಮೆಂಟ್‌ಗೆ ಹುಚ್ಚು ಹಿಡಿದವರಂತೆ ಮಾತನಾಡುತ್ತಾ ಗಂಡಸಾಗಿದ್ದರೆ ಬರಲಿ, ಧೈರ್ಯವಿದ್ದರೆ ಬರಲಿ, ತಾಕತ್ತಿದ್ದರೆ ಬರಲಿ ಇತ್ಯಾದಿ ಇತ್ಯಾದಿ ಆಹ್ವಾನ ಕೊಡುವುದು ತುಂಬಾ ಬಾಲಿಶವೆನಿಸುತ್ತದೆ. ಸಂಯಮವಿಲ್ಲದ ಜ್ಞಾನ ಜ್ಞಾನವೇ ಅಲ್ಲ, ಪ್ರಬುದ್ಧತೆಯು ಅಲ್ಲ. ಇನ್ನೊಬ್ಬರಿಗೆ ಪಾಠ ಕಲಿಸುತ್ತೇವೆ ಎನ್ನುವ ಮನಸ್ಥಿತಿಯೇ ಅಪರಾಧಿ ಮನಸ್ಥಿತಿ, ಕ್ರೌರ್ಯದ ಮನಸ್ಥಿತಿ, ಅಜ್ಞಾನದ ಮನಸ್ಥಿತಿ. ಜ್ಞಾನವೆಂಬುದು ಮೂರ್ತ ಸ್ವರೂಪವೇ ಹೊರತು ಅಮೂರ್ತವಲ್ಲ.

ಜ್ಞಾನ ತಿಳಿವಳಿಕೆ ಮಾತ್ರವಲ್ಲ ನಡವಳಿಕೆ. ಜ್ಞಾನ ಸಹಜ ಸ್ವಾಭಾವಿಕವೇ ಹೊರತು ಅದನ್ನು ಮುಖವಾಡವಾಗಿಸಲು ಸಾಧ್ಯವಿಲ್ಲ. ಹಾಗಾದರೆ ಜ್ಞಾನವೆಂಬ ನಾನು ಯಾರು? ಹುಡುಕಾಡುತ್ತಲೇ ಇದ್ದೇನೆ. ನೀವು ಬನ್ನಿ ನನ್ನೊಂದಿಗೆ, ಜ್ಞಾನದ ಹುಡುಕಾಟದಲ್ಲಿ ಜೊತೆಯಾಗೋಣ.

**– ವಿವೇಕಾನಂದ. ಎಚ್. ಕೆ.,** ಬೆಂಗಳೂರು

## ಗದರುವುದು ತಪ್ಪೇ?

ಅಧ್ಯಾಪಕರು ಅಂದಮೇಲೆ ಶಿಸ್ತಿಗಾಗಿ ಗದರುವುದು ಸಹಜ. ಆದರೆ ಆ ಗದರುವಿಕೆ ಮಗುವಿನ ಮನಸ್ಸಿನ ಮೇಲೆ ಅಷ್ಟೊಂದು ಪರಿಣಾಮ ಬೀರುತ್ತದೆ ಎಂದು ನನಗೆ ತಿಳಿದಿರಲಿಲ್ಲ.

ನನ್ನ ತರಗತಿಯಲ್ಲೊಬ್ಬ ಪುಟ್ಟ ಬಾಲಕನಿದ್ದಾನೆ. ಇವನ ಕುರಿತು ಒಂದೇ ವಾಕ್ಯದಲ್ಲಿ ಹೇಳುವುದಾದರೆ ನಾಚಿಕೆ ಮುಳ್ಳು ಎಂದು ವ್ಯಾಖ್ಯಾನಿಸಬಹುದು. ಅತಿಯಾದ ಕೋಪ, ಶಿಸ್ತುಬದ್ಧತೆ ಹಾಗೂ ಗಂಭೀರತೆ ಎಲ್ಲವೂ ಇವನಲ್ಲಿದ್ದರೂ, ಅವನಲ್ಲಿ ಅಳುವ ಅಸ್ತ್ರ ಮಾತ್ರ ಸದಾ ಸಿದ್ಧ! ಅತಿಯಾಗಿ ಮುದ್ದು ಮಾಡಿದರೆ ಮಕ್ಕಳು ತಲೆಮೇಲೆ ಹತ್ತುತ್ತಾರೆ ಎನ್ನುವ ಹಿರಿಯರ ಮಾತಿಗೆ ಇವನೇ ಸಾಕ್ಷಿಯಾಗಿದ್ದ. ತರಗತಿಯಲ್ಲಿ ನಾನು ಕೊಂಚ ಧ್ವನಿ ಎತ್ತಿ ಮಾತನಾಡಿದರೆ ಅಥವಾ ನಿನ್ನದು ತಪ್ಪು ಎಂದು ಗದರಿದರೆ ಸಾಕು; ಅವನ ಮುಖ ಕೆಂಪಾಗಿ ಬಾಡಿದ ಟೊಮೆಟೊ ಹಣ್ಣಿನಂತಾಗುತ್ತಿತ್ತು. ಕಣ್ಣಿನಲ್ಲಂತೂ ಸದಾ ಗಂಗೆಯಂತೆ ಕಣ್ಣೀರು ಸಿದ್ಧ. ಇದನ್ನು ತಿಳಿದ ನಾನು ಅವನ ಮನಸ್ಸು ತುಂಬಾ ಮೃದು ಎಂದು ಭಾವಿಸಿ, ಸ್ವಲ್ಪ ಜಾಗೃತಿ ವಹಿಸಿ ಸಂಭಾಷಿಸುತ್ತಿದ್ದೆ. ಅದುವೇ ಅವನಿಗೆ ಸಲುಗೆಯಾಗಿ ತುಂಟಾಟ ಹೆಚ್ಚಾಯಿತು. ಕಲಿಕೆಯಲ್ಲಿ ಅವನು ಮುಂದಿದ್ದ ಕಾರಣ ನಾನು ಕೂಡ ಅವನ ತುಂಟಾಟವನ್ನು ತಮಾಷೆಯಾಗಿ ನಿಭಾಯಿಸುತ್ತಿದ್ದೆ. ನಮ್ಮ ಬಾಂಧವ್ಯ ತುಂಬಾ ಮುದ್ದಾಗಿ, ಖುಷಿಯಿಂದ ಸಾಗುತ್ತಿತ್ತು. ಆದರೆ ಯಾರ ಕಣ್ಣು ಬಿತ್ತೋ ಗೊತ್ತಿಲ್ಲ, ನಮ್ಮ ಸಂಬಂಧದಲ್ಲಿ ಬಿರುಕು ಮೂಡಿತು.

ಅವನ ತುಂಟಾಟ ಹೆಚ್ಚಾಗಿ ಕಲಿಕೆಯಲ್ಲಿ ಹಿನ್ನಡೆಯಾಗತೊಡಗಿತು. ಕಲಿಕೆಯಲ್ಲಿ ಆಸಕ್ತಿ ಇಲ್ಲದೆ, ಕಾರಣವಿಲ್ಲದೆ ಅಳುವುದು ಹೆಚ್ಚಾಯಿತು. ಹೀಗಿರಲು ಒಂದು ದಿನ ನೀಡಿದ್ದ ಮನೆಗೆಲಸವನ್ನು ಮಾಡದೆ ತರಗತಿಗೆ ಬಂದಿದ್ದ. ಎರಡು-ಮೂರು ಬಾರಿ ವಿಚಾರಿಸಿ, ನಾಳೆ ಮಾಡಿ ಬಾ ಎಂದು ಸುಮ್ಮನಿದ್ದೆ. ಆದರೆ ಅಂದು ನಾನು ಸುಮ್ಮನಿರದೆ, ಇನ್ನೂ ಮನೆಗೆಲಸ ಮಾಡಿ ಬರದಿದ್ದರೆ ಶಿಕ್ಷೆ ಕೊಡುವೆ ಎಂದು ಚೆನ್ನಾಗಿ ಗದರಿದೆ. ಅವನು ಸ್ವಲ್ಪ ಹೊತ್ತು ಅತ್ತು ಸುಮ್ಮನಾದ. ಆದರೆ ಇದರ ಪರಿಣಾಮ ನಾಳೆಗೆ ಕಾದಿದೆ ಎಂದು ನನಗೆ ತಿಳಿದಿರಲಿಲ್ಲ.




ಮರುದಿನ ಬೆಳಿಗ್ಗೆಯೇ ಅಲಾರಾಂನಂತೆ ಅವನ ಅಮ್ಮನ ಕರೆ ಬಂದಿತು. ಇವತ್ತು ನನ್ನ ಮಗ ನಿಮ್ಮ ತರಗತಿಗೆ ಬರುವುದಿಲ್ಲವಂತೆ, ನೀವು ಅವನಿಗೆ ಬೈದಿದ್ದೀರಿ ಎಂದರು. ಅವನು ಅತ್ತರೂ ಪರವಾಗಿಲ್ಲ, ಇಂದು ಶಾಲೆಗೆ ಕಳುಹಿಸಿ, ಸ್ವಲ್ಪ ಹೊತ್ತಿನಲ್ಲಿ ಸರಿಯಾಗುತ್ತಾನೆ ಎಂದು ಹೇಳಿ ಫೋನ್ ಇಟ್ಟೆ. ಏನೇ ಆಗಲಿ ಎಂದು ತರಗತಿಗೆ ಹೊರಟೆನು.

ಶಾಲೆಗೆ ಹೋದಾಗ ಅಳುತ್ತಾ ನಿಂತಿದ್ದ ಅವನನ್ನು ಕರೆದೆ. ಆದರೆ ಅವನು ನಾನು ಕರೆದರೂ ಓ ನೀಡದೆ ತಕ್ಷಣ ಮುಖ್ಯೋಪಾಧ್ಯಾಯರ ಬಳಿ ಓಡಿದನು. ಮುಖ್ಯೋಪಾಧ್ಯಾಯರು ವಿಚಾರಿಸಿದಾಗ ನಾನು ನಡೆದ ವಿಷಯವನ್ನು ವಿವರಿಸಿದೆ. ಅವರು, ಈಗಿನ ಕಾಲದ ಮಕ್ಕಳಿಗೆ ಯಾವುದು ತಪ್ಪು-ಸರಿ ಎಂಬ ಅರಿವಿರುವುದಿಲ್ಲ. ಹೆತ್ತವರೂ ಒಂದೇ ಮಗುವೆಂದು ಹೊಡೆಯದೇ-ಬೈಯದೇ ಮುದ್ದಾಗಿ ಬೆಳೆಸುತ್ತಾರೆ. ಆದ್ದರಿಂದ ನಾವು ಅವರನ್ನು ತುಂಬಾ ಸೂಕ್ಷ್ಮವಾಗಿ ನೋಡಿಕೊಳ್ಳಬೇಕು ಎಂದರು.

ನಂತರ ನೇರವಾಗಿ ಮಗುವಿನ ಬಳಿ ಹೋಗಿ ಮಾತನಾಡಿಸಿದೆನು. ನಾನು ಏನೇ ಹೇಳಿದರೂ, ನನಗೆ ನೀವು ಇಷ್ಟವಿಲ್ಲ, ತರಗತಿಗೆ ಬರುವುದಿಲ್ಲ ಎಂದೇ ಉತ್ತರಿಸುತ್ತಿದ್ದ. ಈ ಉತ್ತರ ಕೇಳಿ ಒಂದೆಡೆ ಬೇಸರ, ಇನ್ನೊಂದೆಡೆ ಕೋಪ ಬಂತು. ಕೊನೆಗೆ ಐಸ್‌ಕ್ರೀಮ್, ಮಿಠಾಯಿ ಕೊಡಿಸುವೆ ಎಂದು ಬಾಹ್ಯ ಪ್ರೇರಣೆ ನೀಡಿದರೂ ಅವನು ಬರಲು ಒಪ್ಪಲಿಲ್ಲ. ಅವನನ್ನು ಆಫೀಸ್‌ನಲ್ಲಿ ಕುಳ್ಳಿರಿಸಿ ತರಗತಿಗೆ ಹೋದೆನು. ಅವನ ಅಮ್ಮ ಕರೆ ಮಾಡಿದಾಗ ಎಲ್ಲ ಸರಿಯಾಗಿದೆ ಎಂದು ಫೋನ್ ಇಟ್ಟೆ.

ಮತ್ತೆ ಅವನ ಬಳಿ ಹೋಗಿ ಹಲವು ರೀತಿಯಲ್ಲಿ ಮಾತನಾಡಿಸಿದರೂ ಪ್ರಯೋಜನವಾಗಲಿಲ್ಲ. ಅವನ ಕೈಯಲ್ಲಿದ್ದ ತಿಂಡಿಯನ್ನು ನಾನು ಕೇಳಿದಾಗ ನೀಡಲಿಲ್ಲ, ಆದರೆ ಬೇರೆ ಶಿಕ್ಷಕರು ಕೇಳಿದ ತಕ್ಷಣ ಕೊಟ್ಟನು. ಇದನ್ನು ನೋಡಿ ನನಗೆ ಅಳು ಬರುವಂತಾಯಿತು. ಹೇಗಾದರೂ ಮಾಡಿ ಇವನನ್ನು ಸರಿಮಾಡಬೇಕು ಎಂದು ತೀರ್ಮಾನಿಸಿದೆನು. ನಮಗೆ ಎಲ್ಲರು ಮೆಚ್ಚುವಂತೆ ನಡೆದುಕೊಳ್ಳಲು ಸಾಧ್ಯವಿಲ್ಲ. ಕೊನೆಗೆ ಕಲಿಯಬೇಕೆಂಬ ಆಸೆಯಿಂದ ತರಗತಿಗೇನೋ ಬಂದನು, ಆದರೆ ಆ ಮುಗ್ಧ ನಗು ಅವನಲ್ಲಿ ರಲಿಲ್ಲ. ಅಧ್ಯಾಪಕರಾದ ನಾವು ಗದರುವುದೇನೋ ಸರಿ, ಆದರೆ ಅದರ ಬಾಹ್ಯ ಪರಿಣಾಮವನ್ನು ಕೂಡ ನಾವೇ ಎದುರಿಸಬೇಕೆಂದು ಅರ್ಥವಾಯಿತು. ನಾನು ಗದರಿದಾಗ ಆ ಪುಟ್ಟ ಮನಸ್ಸಿನಲ್ಲಿ ಉಂಟಾದ ನೋವು ಮತ್ತು ಬೇಸರವೇ ಅವನ ಬಾಯಲ್ಲಿ ನೀವು ಇಷ್ಟವಿಲ್ಲ ಎಂದು ನುಡಿಸುತ್ತಿತ್ತು.

ಆದರೆ ದಿನಗಳು ಉರುಳಿದಂತೆ ಆ ಮಗು ತಾನಾಗಿಯೇ ಬಂದು ನನ್ನಲ್ಲಿ ಕ್ಷಮೆ ಕೇಳಿತು. ನನಗಂತೂ ತುಂಬಾ ಖುಷಿಯಾಯಿತು. ಆ ಗದರುವಿಕೆಯ ಹಿಂದಿರುವ ಪ್ರೀತಿ ಮತ್ತು ಕಾಳಜಿಯನ್ನು ಅರ್ಥೈಸಿ, ಅವನು ಮೊದಲಿಗಿಂತಲೂ ಚೆನ್ನಾಗಿ ವರ್ತಿಸತೊಡಗಿದನು. ಹಾಗಾದರೆ ಅಧ್ಯಾಪಕರು ಗದರುವುದು ಸರಿಯೇ, ತಪ್ಪೇ??

**– ಭವ್ಯಶ್ರೀ ನಾಗರಕಟ್ಟೆ,** ಕಾಸರಗೋಡು




## ಸುಂದರ ಬದುಕಿಗೊಂದು ಚೆಂದದ ಗುರಿ

ಬದುಕು ಸುಂದರ ಎನಿಸಬೇಕಾದರೆ ಪ್ರತಿ ವ್ಯಕ್ತಿಗೂ ತಮ್ಮದೇ ಆದ ಒಂದು ಗುರಿ ಇರಬೇಕೆಂದು ನನ್ನ ಅಭಿಪ್ರಾಯ. ಅವರವರು ಇಷ್ಟ ಪಡುವ ಕೆಲಸ ಮಾಡುವ ಅವಕಾಶ ಪ್ರತಿ ವ್ಯಕ್ತಿಗೂ ದೊರೆತರೆ ಸ್ವಸ್ಥ ಸಮಾಜ ನಿರ್ಮಾಣಕ್ಕೆ ಒಂದು ದೊಡ್ಡ ಹೆಜ್ಜೆ ಇಟ್ಟಂತೆ ಆಗುತ್ತದೆ. ಆದರೆ ಸಾಮಾನ್ಯ ಮನುಷ್ಯರು ಮಾಡುವಂತಹ ಕೆಲಸಗಳನ್ನೆಲ್ಲ ಒಂದು ಯಂತ್ರ ಮಾಡುವಾಗ ಸಾಮಾನ್ಯ ಮನುಷ್ಯ ತನ್ನ ಸಮಯವನ್ನು ಹೇಗೆ ಕಳೆಯಬೇಕು? ಸಂಪಾದನೆಗೆ ದಾರಿಯನ್ನು ಹೇಗೆ ಹುಡುಕಿಕೊಳ್ಳಬೇಕು? ಪೇಟೆಯಲ್ಲಿರುವ ಜನರ ಕೊಳ್ಳುವ ಶಕ್ತಿಯು ಕೂಡ ಅವರ ಉದ್ಯೋಗವನ್ನೇ ಅವಲಂಬಿಸಿರಬೇಕಾದರೆ ಆರ್ಥಿಕ ವ್ಯವಸ್ಥೆ ಕೂಡ ಹದಗೆಡಬಹುದಲ್ಲವೇ.

ನಮ್ಮ ಮಕ್ಕಳಿಗೆ ಏನನ್ನು ಓದಲು ಹೇಳಬೇಕು? ಯಾವುದನ್ನು ಓದಬೇಕಾದರೂ ಲಕ್ಷಾಂತರ ಹಣ ವೆಚ್ಚವಾಗುತ್ತದೆ. ಆದರೆ ಎಲ್ಲಾ ಮಕ್ಕಳಿಗೂ ಹೋಗಲಿ ಪ್ರತಿಭಾವಂತ ತಕ್ಕ ಕೌಶಲ್ಯ ಹೊಂದಿದ ಮಕ್ಕಳಿಗೆ ಉದ್ಯೋಗವಾದರೂ ಸಿಗುವ ಖಾತ್ರಿ ಇದೆಯೇ ಇಲ್ಲ. ಹತ್ತಾರು ವರ್ಷಗಳ ಕಾಲ ಸಂಗೀತ ಕಲಿತು ಅದನ್ನು ತಪಸ್ಸಿನಂತೆ ಸ್ವೀಕರಿಸಿದ ಯುವ ಜನತೆಯ ಹಾಡುವ ಅಥವಾ ವಾದ್ಯ ಸಂಗೀತ ನುಡಿಸುವ ವಿಡಿಯೋಗಳನ್ನು ಕೇಳಿ ಆನಂದಿಸುವ ಬದಲು ಕೃತಕ ಬುದ್ಧಿಮತ್ತೆ ಉಪಯೋಗಿಸಿ ಸಂಗೀತವೇ ತಿಳಿಯದ ಮನುಷ್ಯರು ತಯಾರಿಸಿದ ವಿಡಿಯೋಗಳಿಗೆ ಲಕ್ಷಾಂತರ ವೀಕ್ಷಣೆ ಆಗುವಾಗ ನನಗೆ ಹೊಟ್ಟೆಯಲ್ಲಿ ವಿಚಿತ್ರ ಸಂಕಟವಾಗುತ್ತದೆ. ಕ್ಲಿಷ್ಟಕರವಾದ, ಮನುಷ್ಯರಿಂದ ಅಸಾಧ್ಯವಾದ ಕೆಲಸಗಳನ್ನು ಮಾಡಲು ಮಾತ್ರ ಕೃತಕ ಬುದ್ಧಿಮತ್ತೆಯನ್ನು ಉಪಯೋಗಿಸಿ ಉಳಿದ ಕೆಲಸಗಳನ್ನು ಮನುಷ್ಯರೇ ಮಾಡಲು ಅವಕಾಶ ದೊರೆತರೆ ಎಷ್ಟು ಚಂದ ಎನಿಸುವುದು ನನ್ನ ತಪ್ಪೇ?

## ನೀವೂ ಬನ್ನಿ ಸಾರ್!

ಅಪರಾಧ ತಡೆ ಮಾಸಾಚರಣೆ ಹಿನ್ನೆಲೆಯಲ್ಲಿ ಪ್ರಾಂಶುಪಾಲರೊಬ್ಬರು ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಅನ್ನು ಕಾಲೇಜಿಗೆ ಆಹ್ವಾನಿಸಿದ್ದರು.

ಆ ಕಾರ್ಯಕ್ರಮದ ದಿನ ಇನ್‌ಸ್ಪೆಕ್ಟರ್ ಅವರು ಕೇಸ್ ಒಂದರ ಆರೋಪಿಯನ್ನು ಬಂಧಿಸಿ ಪೊಲೀಸ್ ಜೀಪ್‌ನಲ್ಲಿ ಕೂರಿಸಿಕೊಂಡು ಸ್ಟೇಷನ್ ಕಡೆ ಹೊರಟಿದ್ದರು. ಆಗ ಕಾಲೇಜಿನ ಕಾರ್ಯಕ್ರಮ ನೆನಪಾಗಿ ಅದನ್ನು ಮುಗಿಸಿಕೊಂಡೇ ಸ್ಟೇಷನ್‌ಗೆ ಹೋದರಾಯಿತು ಎಂದು ಇನ್‌ಸ್ಪೆಕ್ಟರ್ ಅವರು ಕಾಲೇಜು ಆವರಣದಲ್ಲಿ ತಮ್ಮ ಜೀಪ್ ನಿಲ್ಲಿಸಿದರು.

ಆಗ ಅವರನ್ನು ಎದುರುಗೊಂಡು ಕಾಲೇಜಿನ ಉಪನ್ಯಾಸಕರೊಬ್ಬರು ಸ್ವಾಗತಿಸುತ್ತ ಕರೆದೊಯ್ಯಲು ಮುಂದಾದರು. ಆ ಸಬ್ ಇನ್‌ಸ್ಪೆಕ್ಟರ್. ಇತರೆ ಪೇದೆಗಳು ಮತ್ತು ಆರೋಪಿಯನ್ನು ಜೀಪ್‌ನಲ್ಲೇ ಕೂಡಲು ಹೇಳಿ ಹೊರಡಲು ಅನುವಾದರು.



ಆಗ ಆ ಉಪನ್ಯಾಸಕ ನೀವೂ ಕೂಡಾ ಬನ್ನಿ ಸರ್ ಎಂದು ಆರೋಪಿಯನ್ನು ಕರೆಯಲು ಮುಂದಾದಾಗ, ಆ ಪೊಲೀಸ್ ಸಿಬ್ಬಂದಿ ನಗುತ್ತಾ, ಅಯ್ಯೋ ಅವನು ನಮ್ಮ ಸಿಬ್ಬಂದಿಯಲ್ಲ, ಆರೋಪಿ ಎಂದು ಹೇಳಿದಾಗ ಉಪನ್ಯಾಸಕರ ಮುಖ ಕಳೆಗುಂದಿತ್ತು.

**– ನಾಗರಾಜ** ಮಗ್ಗದ

# ಎಸ್ಐಆರ್: ಹೆಸರು ಉಳಿಸಿಕೊಳ್ಳಲು ಮತ್ತೊಮ್ಮೆ ಅವಕಾಶ

## ಅಂತಿಮ ಹಂತದಲ್ಲಿ ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯ: ತಹಸೀಲ್ದಾರ್ ಕೆ.ಸಿ.ಸೌಮ್ಯ

• ಪ್ರಜೋದಯ ವರದಿ



**ಅರಕಲಗೂಡು:** ಅರಕಲಗೂಡು ವಿಧಾನಸಭಾ ಕ್ಷೇತ್ರದಲ್ಲಿ ನಡೆಯುತ್ತಿರುವ ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯ ಅಂತಿಮ ಹಂತ ತಲುಪಿದ್ದು, ಅಗತ್ಯ ದಾಖಲೆಗಳನ್ನು ಸಲ್ಲಿಸದಿರುವ 2,294 ಮಂದಿಗೆ ಮತ್ತೊಮ್ಮೆ ದಾಖಲೆ ಒದಗಿಸಿ ಮತದಾರರ ಪಟ್ಟಿಯಲ್ಲಿ ಹೆಸರು ಉಳಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ ಎಂದು ತಹಸೀಲ್ದಾರ್ ಕೆ.ಸಿ.ಸೌಮ್ಯ ಅವರು ತಿಳಿಸಿದರು.

ಪಟ್ಟಣದ ತಾಲ್ಲೂಕು ಕಚೇರಿ ಸಭಾಂಗಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕ್ಷೇತ್ರದ ವಿವಿಧ ಹೋಬಳಿಗಳಲ್ಲಿ ಒಟ್ಟು 13,880 ಮತದಾರರಿಗೆ ಅಗತ್ಯ ದಾಖಲೆಗಳನ್ನು ಸಲ್ಲಿಸುವಂತೆ ನೋಟಿಸ್ ನೀಡಲಾಗಿತ್ತು. ಈ ಪೈಕಿ 13,564 ಮಂದಿ ವಿಚಾರಣೆಗೆ ಹಾಜರಾಗಿ ದಾಖಲೆಗಳನ್ನು ಸಲ್ಲಿಸಿದ್ದಾರೆ. ಆದರೆ 2,294 ಮಂದಿ ಇದುವರೆಗೆ ಅಗತ್ಯ ದಾಖಲೆಗಳನ್ನು ಒದಗಿಸಿಲ್ಲ. ಇವರು ಪ್ರಸ್ತುತ ವಿಧಾನ ಸಭಾ ಕ್ಷೇತ್ರದಲ್ಲಿ ವಾಸಿಸುತ್ತಿದ್ದಾರೆಯೇ ಅಥವಾ ಇಲ್ಲವೇ ಎಂಬುದರ ಕುರಿತು ಮಾಹಿತಿ ಲಭ್ಯವಾಗದ ಹಿನ್ನೆಲೆಯಲ್ಲಿ, ಮತ್ತೊಮ್ಮೆ ದಾಖಲೆಗಳನ್ನು ಸಲ್ಲಿಸಲು ಅವಕಾಶ ನೀಡಲಾಗಿದೆ ಎಂದು ಹೇಳಿದರು.

ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯ ಅಂತಿಮ ಹಂತದಲ್ಲಿದ್ದು, ಅರ್ಹ ಮತದಾರರ ಹೆಸರನ್ನು ಯಾವುದೇ ಕಾರಣಕ್ಕೂ ಕೈಬಿಡುವ ಉದ್ದೇಶವಿಲ್ಲ. ಕೆಲವು ಮಾಹಿತಿಗಳನ್ನು ಪರಿಶೀಲಿಸಿ ಅಂತಿಮಗೊಳಿಸುವ ಸಲುವಾಗಿ ಎಲ್ಲ ಹೋಬಳಿಗಳ ವ್ಯಾಪ್ತಿಯಲ್ಲಿ ಮತದಾರರಿಗೆ ನೋಟಿಸ್ ನೀಡಲಾಗಿತ್ತು. ಬಾಕಿ ಉಳಿದಿರುವವರಿಗೂ ಮತ್ತೊಮ್ಮೆ ಅವಕಾಶ ಕಲ್ಪಿಸಲಾಗಿದ್ದು, ನಿಗದಿತ ಅವಧಿಯೊಳಗೆ ಸೂಕ್ತ ದಾಖಲೆಗಳನ್ನು ಮತಗಟ್ಟೆ ಮಟ್ಟದ ಅಧಿಕಾರಿಗಳಿಗೆ ಸಲ್ಲಿಸಿ ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರು ಇರುವುದನ್ನು ಖಚಿತಪಡಿಸಿಕೊಳ್ಳಬೇಕು ಎಂದು ಅವರು ಮನವಿ ಮಾಡಿದರು.

ವಿಧಾನಸಭಾ ಕ್ಷೇತ್ರದ ಆರು ಹೋಬಳಿಗಳಲ್ಲೂ ತಲಾ ಇಬ್ಬರು ಸಹಾಯಕ ಚುನಾವಣಾಧಿಕಾರಿಗಳನ್ನು ನೇಮಕ ಮಾಡಲಾಗಿದೆ. ಅವರು ನೋಟಿಸ್‌ಗೆ ಸಂಬಂಧಿಸಿದ ಮಾಹಿತಿಯನ್ನು ಪಡೆದು ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಲು ಮತದಾರರಿಗೆ ನೆರವಾಗಲಿದ್ದಾರೆ ಎಂದು ಮಾಹಿತಿ ನೀಡಿದರು.

ನೋಟಿಸ್ ಪಡೆದವರಲ್ಲಿ ಅನಾರೋಗ್ಯದಿಂದ ಹಾಸಿಗೆ ಹಿಡಿದಿರುವವರು, ಸೇನೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವವರು ಹಾಗೂ ಇತರೆ ಅನಿವಾರ್ಯ ಕಾರಣಗಳಿಂದ ವಿಚಾರಣೆಗೆ ಹಾಜರಾಗಲು ಸಾಧ್ಯವಾಗದ ಕುಟುಂಬಗಳ ಸದಸ್ಯರು ಸಂಬಂಧಪಟ್ಟ ದಾಖಲೆಗಳನ್ನು ಸಲ್ಲಿಸಿದರೆ ಅವುಗಳನ್ನು ಸಹ ಪರಿಗಣಿಸಲಾಗುವುದು ಎಂದು ತಿಳಿಸಿದರು.

ಈಗಾಗಲೇ ಸುಮಾರು 1.46 ಲಕ್ಷ ಮತದಾರರ ಮಾಹಿತಿಯನ್ನು ಅಂತಿಮ ಹಂತದ ಪ್ರಕ್ರಿಯೆಗೆ ಒಳಪಡಿಸಲಾಗುತ್ತಿದೆ. ಒಟ್ಟಾರೆ ಸುಮಾರು 2.12 ಲಕ್ಷ ಮತದಾರರು ಅಂತಿಮ ಪಟ್ಟಿಯಲ್ಲಿ ಸೇರುವ ನಿರೀಕ್ಷೆಯಿದೆ. ನೋಟಿಸ್ ಪಡೆದಿರುವ ಮತದಾರರು ನಿಗದಿತ ಅವಧಿಯೊಳಗೆ ಅಗತ್ಯ ಮಾಹಿತಿಯನ್ನು ಸಲ್ಲಿಸಿದರೆ ಅಂತಿಮ ಮತದಾರರ ಪಟ್ಟಿ ಪ್ರಕಟಿಸಲು ಅನುಕೂಲವಾಗಲಿದೆ. ಅರ್ಹರಾಗಿರುವ ಯಾರ ಹೆಸರನ್ನೂ ಕೈಬಿಡುವುದಿಲ್ಲ ಎಂದು ತಹಸೀಲ್ದಾರ್ ಸ್ಪಷ್ಟಪಡಿಸಿದರು.

ಹೊಸದಾಗಿ ಮತದಾರರ ಪಟ್ಟಿಗೆ ಹೆಸರು ಸೇರ್ಪಡೆ, ಪಟ್ಟಿಯಿಂದ ಹೆಸರು ಕೈಬಿಡುವುದು ಹಾಗೂ ಹೆಸರು, ವಿಳಾಸ ಸೇರಿದಂತೆ ವಿವಿಧ ವಿವರಗಳಲ್ಲಿ ತಿದ್ದುಪಡಿ ಮಾಡಿಕೊಳ್ಳಲು ಅವಕಾಶವಿದೆ. ಅರ್ಹರು ಸಂಬಂಧಪಟ್ಟ ಅರ್ಜಿಗಳನ್ನು ಪಡೆದು ಅಗತ್ಯ ಪ್ರಕ್ರಿಯೆ ಪೂರ್ಣಗೊಳಿಸಿಕೊಳ್ಳಬೇಕು ಎಂದು ಸೌಮ್ಯ ಅವರು ಸಲಹೆ ನೀಡಿದರು.

**ಸೆ.26ರಂದು ಕೊಣನೂರಿನಲ್ಲಿ ಪ್ರಜಾಸೇವಾ ಆಂದೋಲನ:**

ತಾಲ್ಲೂಕಿನ ಕೊಣನೂರು ಸಮುದಾಯ ಭವನದಲ್ಲಿ ಸೆ.26ರಂದು ಪ್ರಜಾಸೇವಾ ಆಂದೋಲನ ಸಭೆ ನಡೆಯಲಿದೆ. ಶಾಸಕ ಎ.ಮಂಜು ಅಧ್ಯಕ್ಷತೆಯಲ್ಲಿ ನಡೆಯುವ ಸಭೆಯಲ್ಲಿ ಸಾರ್ವಜನಿಕರ ಕುಂದು-ಕೊರತೆಗಳನ್ನು ಆಲಿಸಿ, ಅರ್ಜಿಗಳನ್ನು ಸ್ವೀಕರಿಸಿ ಸ್ಥಳದಲ್ಲೇ ಸಾಧ್ಯವಾದಷ್ಟು ವಿಲೇವಾರಿ ಮಾಡಲು ಕ್ರಮ ಕೈಗೊಳ್ಳಲಾಗುವುದು. ಸಾರ್ವಜನಿಕರು ಆಂದೋಲನದ ಸದುಪಯೋಗ ಪಡೆದುಕೊಳ್ಳಬೇಕು ಎಂದು ತಹಸೀಲ್ದಾರ್ ಕೆ.ಸಿ.ಸೌಮ್ಯ ಅವರು ಮನವಿ ಮಾಡಿದರು.

ಮತಪಟ್ಟಿ ಅಧಿಕಾರಿ ರುದ್ರಮನಿ, ಚುನಾವಣಾ ವಿಭಾಗದ ಭಾಸ್ಕರ್ ಹಾಗೂ ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ನಾಗೇಂದ್ರಕುಮಾರ್ ಇನ್ನಿತರರು ಹಾಜರಿದ್ದರು.

# ಪಶ್ಚಿಮಘಟ್ಟ ರಕ್ಷಣೆಗೆ ಕಸ್ತೂರಿ ರಂಗನ್ ವರದಿ ಜಾರಿ ಅಗತ್ಯ

• ಪ್ರಜೋದಯ ವರದಿ



**ಹಾಸನ:** ನೈರುತ್ಯ ಮಾರುತಗಳನ್ನು ತಡೆದು ದೇಶಕ್ಕೆ ಮಳೆ ಸುರಿಸುವ ಪಶ್ಚಿಮಘಟ್ಟ ಉಳಿಸಲು ಕಸ್ತೂರಿ ರಂಗನ್ ವರದಿ ಜಾರಿಗೊಳಿಸಬೇಕೆಂದು ಪರಿಸರ ಹೋರಾಟಗಾರ ಹುರುಡಿ ವಿಕ್ರಮ್ ಅವರು ಒತ್ತಾಯಿಸಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದಕ್ಷಿಣ ಭಾರತದ ಪ್ರಮುಖ ನದಿಗಳ ಉಗಮಕ್ಕೆ ಪಶ್ಚಿಮ ಘಟ್ಟಗಳು ಆಧಾರವಾಗಿದೆ. ಅಪರೂಪದ ಜೀವ ಮತ್ತು ಸಸ್ಯ ಸಂಕುಲದ ಆಶ್ರಯತಾಣ, ದಕ್ಷಿಣ ಭಾರತದ ಜೀವನಾಡಿಯಾಗಿರುವ ಪಶ್ಚಿಮ ಘಟ್ಟ ಪರಿಸರವನ್ನು ತಮ್ಮ ಸ್ವಾರ್ಥಕ್ಕಾಗಿ ಬಲಿ ಕೊಡಬಾರದೆಂದು ಹೇಳಿದರು.

ಕಸ್ತೂರಿ ರಂಗನ್ ವರದಿಯಲ್ಲಿ ಪರಿಸರ ಸೂಕ್ಷ್ಮ ಪ್ರದೇಶಗಳಲ್ಲಿ ಗಣಿಗಾರಿಕೆ, ಮರಳುಗಾರಿಕೆ ಹಾಗು ಕಲ್ಲುಕ್ವಾರಿ ಚಟುವಟಿಕೆಗಳಿಗೆ ಅವಕಾಶ ನೀಡಬಾರದು ಎಂದು ಶಿಫಾರಸ್ಸು ಮಾಡಲಾಗಿದೆ. ಪರಿಸರಕ್ಕೆ ಹೆಚ್ಚಿನ ಮಾಲಿನ್ಯ ಉಂಟುಮಾಡುವ ರೆಡ್ ಕೆಟಗರಿ ಕೈಗಾರಿಕೆಗಳಿಗೆ ಅವಕಾಶ ನೀಡಬಾರದು. ಉಷ್ಣ ವಿದ್ಯುತ್ ಸ್ಥಾವರಗಳ ಸ್ಥಾಪನೆಗೂ ನಿರ್ಬಂಧ ವಿಧಿಸುವಂತೆ ಶಿಫಾರಸ್ಸು ಮಾಡಲಾಗಿದೆ ಎಂದು ತಿಳಿಸಿದರು.

ಹೊಸ ದೊಡ್ಡ ಪ್ರಮಾಣದ ನಿರ್ಮಾಣ ಚಟುವಟಿಕೆಗಳು, ಹೊಸ ರಸ್ತೆಗಳ ನಿರ್ಮಾಣ ಸೇರಿ ಪರಿಸರದ ಮೇಲೆ ಗಂಭೀರ ಪರಿಣಾಮ ಬೀರುವ ಯೋಜನೆಗಳಿಗೆ ನಿಯಂತ್ರಣ ಅಗತ್ಯ. ಆದರೆ, ಶಾಲೆ, ಆಸ್ಪತ್ರೆ ಹಾಗು ಸ್ಥಳೀಯ ಅಗತ್ಯಗಳಿಗೆ ಬೇಕಾದ ಸಣ್ಣ ಕಟ್ಟಡಗಳನ್ನು ಪರಿಸರಕ್ಕೆ ಹಾನಿಯಾಗದ ರೀತಿಯಲ್ಲಿ ನಿರ್ಮಿಸಲು ಅವಕಾಶವಿದೆ. ಕಾಫಿ, ಅಡಿಕೆ ಹಾಗು ರಬ್ಬರ್‌ನಂತಹ ತೋಟಗಾರಿಕಾ ಚಟುವಟಿಕೆಗಳನ್ನು ಮುಂದುವರಿಸಬಹುದಾದರೂ ಅವುಗಳಿಂದ ಪರಿಸರಕ್ಕೆ ಹಾನಿಯಾಗದಂತೆ ಕ್ರಮ ಕೈಗೊಳ್ಳಬೇಕೆಂದು ಹೇಳಿದರು.

ಅಣೆಕಟ್ಟು ಹಾಗು ಜಲ ಯೋಜನೆಗಳ ಸಂದರ್ಭದಲ್ಲಿಯೂ ನದಿಯ ನೈಸರ್ಗಿಕ ಹರಿವನ್ನು ಸಂಪೂರ್ಣವಾಗಿ ತಡೆಯದೆ ನಿರ್ದಿಷ್ಟ ಪ್ರಮಾಣದ ನೀರನ್ನು ನದಿಗೆ ಬಿಡುವಂತಹ ಪರಿಸರ ಸಂರಕ್ಷಣಾ ಕ್ರಮಗಳನ್ನು ಅನುಸರಿಸಬೇಕು. ರೆಸಾರ್ಟ್, ಹೋಂ ಸ್ಟೇಗಳನ್ನು ಪರಿಸರಕ್ಕೆ ಹಾನಿಯಾಗದ ರೀತಿಯಲ್ಲಿ ನಡೆಸಲು ಅವಕಾಶವಿದೆ. ಪರಿಸರಕ್ಕೆ ಮಾರಕ ಆಗುವಂತಹ ಪರಿಸರ ಹಾನಿಕಾರಕ ಔಷಧ ಸಿಂಪಡಣೆ ಮಾಡುವಂತಿಲ್ಲ. ಆದರೆ, ಕೃಷಿ ಚಟುವಟಿಕೆಗೆ ಯಾವುದೇ ಅಡ್ಡಿ ಇಲ್ಲವೆಂದು ತಿಳಿಸಿದರು.

**ಸ್ಥಳಾಂತರಿಸುವ ಹುನ್ನಾರ**

ಸಕಲೇಶಪುರ ತಾಲ್ಲೂಕು ಹಾನುಬಾಳು ಹೋಬಳಿಯ ಅಗನಿ ಗ್ರಾಮದ ಮೂರುಕಣ್ಣು ಬೆಟ್ಟದ ಅರಣ್ಯ ಪ್ರದೇಶವನ್ನು 1920ರಲ್ಲಿ 7,936 ಎಕರೆಯನ್ನು ಮೀಸಲು ಅರಣ್ಯವೆಂದು ಘೋಷಿಸಿ, ನಂತರ ರದ್ದು ಪಡಿಸಿತ್ತು. ಮೂರುಕಣ್ಣು ಬೆಟ್ಟಕ್ಕೆ ಸಂಬಂಧಿಸಿದ ಸೆಕ್ಷನ್-4 ಅರಣ್ಯ ಪ್ರದೇಶದಲ್ಲಿ ಐದು ಗ್ರಾಮಗಳ ಜನರು ವಾಸಿಸುತ್ತಿದ್ದಾರೆ. ಆದರೀಗ ಅವರನ್ನು ಸ್ಥಳಾಂತರಿಸುವ ಹುನ್ನಾರ ನಡೆದಿದೆ ಎಂದು ದೂರಿದರು.

1920ಕ್ಕೂ ಹಿಂದಿನ ದಾಖಲೆ ಹೊಂದಿರುವ ಭೂಮಿಯನ್ನಷ್ಟೇ ಕಾನೂನು ಬದ್ಧವೆಂದು ಪರಿಗಣಿಸಲಾಗುತ್ತಿದೆ ಎಂಬುದು ಗ್ರಾಮಸ್ಥರಲ್ಲಿ ಆತಂಕಕ್ಕೆ ಕಾರಣವಾಗಿದೆ. ದಶಕಗಳಿಂದ ಇಲ್ಲಿ ವಾಸಿಸುತ್ತಿರುವ ಜನರ ಭೂಮಿ, ಮನೆ ಹಾಗು ಜೀವನೋಪಾಯದ ವಿಚಾರದಲ್ಲಿ ಯಾವುದೇ ಕ್ರಮ ಕೈಗೊಳ್ಳುವ ಮೊದಲು ದಾಖಲೆಗಳನ್ನು ಸಮಗ್ರವಾಗಿ ಪರಿಶೀಲಿಸಿ, ಕಾನೂನುಬದ್ಧ ಪ್ರಕ್ರಿಯೆ ಅನುಸರಿಸಬೇಕೆಂದು ಆಗ್ರಹಿಸಿದರು.

# ದಾನದ ಮೂಲಕ ರಕ್ತ ಪಡೆಯಲು ಸಾಧ್ಯ



• ಪ್ರಜೋದಯ ವರದಿ

**ಆಲೂರು:** ರಕ್ತವನ್ನು ದಾನದ ಮೂಲಕ ಪಡೆಯಲು ಸಾಧ್ಯ ಎಂದು ಹಾಸನ ಹಿಮ್ಸ್ ಬೋಧಕ ಆಸ್ಪತ್ರೆ ರಕ್ತ ಕೇಂದ್ರದ ವೈದ್ಯಾಧಿಕಾರಿ ಡಾ. ನಾಗಲಕ್ಷ್ಮಿ ಅವರು ತಿಳಿಸಿದರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಸ್ವಯಂ ಪ್ರೇರಿತ ರಕ್ತದಾನ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು, ರಕ್ತಕ್ಕೆ ಯಾವುದೇ ಪರ್ಯಾಯ ವ್ಯವಸ್ಥೆ ಅಥವಾ ಕೃತಕವಾಗಿ ಉತ್ಪಾದಿಸಲು ಸಾಧ್ಯವಿಲ್ಲ. ರಕ್ತವನ್ನು ದಾನದ ರೂಪದಲ್ಲೇ ಪಡೆಯಬೇಕು. ಒಬ್ಬ ವ್ಯಕ್ತಿ ನೀಡುವ ರಕ್ತದಿಂದ ಮೂರು ಜೀವಗಳನ್ನು ಉಳಿಸಲು ಸಾಧ್ಯವಿದೆ. ಪ್ರತಿವರ್ಷ ಅಕ್ಟೋಬರ್ 1 ರಂದು ರಾಷ್ಟ್ರೀಯ ಸ್ವಯಂಪ್ರೇರಿತ ರಕ್ತದಾನ ದಿನವನ್ನು ಆಚರಿಸಲಾಗುತ್ತಿದ್ದು, ಈ ನಿಟ್ಟಿನಲ್ಲಿ ರಕ್ತದಾನದಂತಹ ಪುಣ್ಯ ಕಾರ್ಯದಲ್ಲಿ ಎಲ್ಲರೂ ಕೈಜೋಡಿಸಬೇಕು ಎಂದು ಮನವಿ ಮಾಡಿದರು.

ಪ್ರಾಂಶುಪಾಲ ಕೆ.ಎನ್.ರಮೇಶ್ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, 60 ವಯೋಮಿತಿಯೊಳಗಿನ ಆರೋಗ್ಯವಂತರು ಕನಿಷ್ಠ ಮೂರು ತಿಂಗಳಿಗೊಮ್ಮೆ ರಕ್ತದಾನ ಮಾಡಬಹುದು. ರಕ್ತದಾನ ಮಾಡುವುದರಿಂದ ಹೃದಯರೋಗ, ಮಧುಮೇಹದಂತಹ ಕಾಯಿಲೆಗಳಿಂದ ದೂರವಿರಬಹುದು. ಪ್ರತಿಯೊಬ್ಬರೂ ರಕ್ತದಾನ ಮಾಡಲು ಪ್ರೇರೇಪಿಸಬೇಕು ಎಂದು ಸಲಹೆ ನೀಡಿದರು.

ಹಾಸನದ ತೇರಾಪಂಥ್ ಯುವ ಪರಿಷತ್ತಿನ ಸದಸ್ಯರಾದ ನಿತೇಶ್, ಕಾಲೇಜಿನ ಪ್ರಾಧ್ಯಾಪಕ ರಾದ ಜೆ.ಜಿ.ನಟರಾಜ, ಎಸ್.ಗೌತಮ್, ಮಧುಚೇತನ್, ಅಧ್ಯಾಪಕರು, ಸಿಬ್ಬಂದಿಗಳು, ವಿದ್ಯಾರ್ಥಿಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ರೆಡ್‌ಕ್ರಾಸ್ ಹಾಗೂ ಎನ್ನೆಸ್ಸೆಸ್ ಸಂಚಾಲಕ ಡಾ.ಪಿ.ಕೆ.ರಾಘವೇಂದ್ರ, ಸಮಾಜಶಾಸ್ತ್ರ ವಿಭಾಗದ ಮುಖ್ಯಸ್ಥ ಟಿ.ಕೆ.ಶ್ರೀನಿವಾಸ್, ವಾಣಿಜ್ಯಶಾಸ್ತ್ರ ಉಪನ್ಯಾಸಕ ಟಿ.ಕೆ.ಸರಿತಾ, ಮೂವತ್ತಕ್ಕೂ ಹೆಚ್ಚು ವಿದ್ಯಾರ್ಥಿಗಳು, ಸಿಬ್ಬಂದಿಗಳು ಹಾಗೂ ಸಾರ್ವಜನಿಕರು ರಕ್ತದಾನವನ್ನು ಮಾಡಿದರು.

# ಹೆಚ್ಚಿನ ಪರಿಹಾರಕ್ಕೆ ಎತ್ತಿನಹೊಳೆ ಯೋಜನೆ ಸಂತ್ರಸ್ತರ ಮನವಿ

• ಪ್ರಜೋದಯ ವರದಿ



**ಹಾಸನ:** ಎತ್ತಿನಹೊಳೆ ಯೋಜನೆ ವ್ಯಾಪ್ತಿಗೆ ಜಮೀನು ಕಳೆದುಕೊಳ್ಳುತ್ತಿರುವ ರೈತರಿಗೆ ಸೂಕ್ತ ಪರಿಹಾರ ನೀಡದೆ ಕಾಮಗಾರಿ ನಡೆಸಲಾಗುತ್ತಿದೆ. ಕೂಡಲೇ ನ್ಯಾಯ ಒದಗಿಸಬೇಕು ಎಂದು ಬೇಲೂರು ತಾಲ್ಲೂಕಿನ ಗಂಗೂರು ಗ್ರಾಮದ ಸಂತ್ರಸ್ತ ರೈತರು ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದರು.

ಈ ವೇಳೆ ಮಾತನಾಡಿದ ರೈತ ಜಿ.ಎಸ್.ರಮೇಶ್ ಅವರು, 2018 ರಲ್ಲಿ ಎತ್ತಿನಹೊಳೆ ಯೋಜನೆಗೆ ಸಂಬಂಧಿಸಿದ ಅಧಿಕಾರಿಗಳು ಗ್ರಾಮಕ್ಕೆ ಆಗಮಿಸಿ, ಯೋಜನೆ ವ್ಯಾಪ್ತಿಗೆ ಬರುವ ಜಮೀನಿಗೆ ಸೂಕ್ತ ಪರಿಹಾರ ನೀಡುವುದಾಗಿ ಭರವಸೆ ನೀಡಿ ಜಮೀನು ಪಡೆದುಕೊಂಡಿದ್ದರು. ಆದರೆ, ಬಳಿಕ ಹಲವು ರೈತರ ಸರ್ವೆ ನಂಬರ್‌ಗಳಲ್ಲಿ ಬದಲಾವಣೆ ಹಾಗೂ ದೋಷಗಳಿರುವುದು ಕಂಡುಬಂದಿದೆ. ಅವುಗಳನ್ನು ಸರಿಪಡಿಸುವ ಜವಾಬ್ದಾರಿ ನಮ್ಮದೇ ಎಂದು ಅಧಿಕಾರಿಗಳು ಭರವಸೆ ನೀಡಿದ್ದರು. ಆದರೆ ಎಂಟು ವರ್ಷ ಕಳೆದರೂ ಸಮಸ್ಯೆ ಬಗೆಹರಿದಿಲ್ಲ ಎಂದು ಆರೋಪಿಸಿದರು.

ಯೋಜನೆ ವ್ಯಾಪ್ತಿಯಲ್ಲಿ ಸುಮಾರು 145 ರೈತರ ಜಮೀನುಗಳ ಸರ್ವೆ ನಂಬರ್‌ಗಳಲ್ಲಿ ದೋಷಗಳಿದ್ದು, ಇದಕ್ಕೆ ರೈತರು ಹೊಣೆಯಲ್ಲ. ಕಂದಾಯ ಇಲಾಖೆ ಹಾಗೂ ಸಂಬಂಧಪಟ್ಟ ಅಧಿಕಾರಿ ಗಳಿಂದಲೇ ಸಮಸ್ಯೆ ಉಂಟಾಗಿದ್ದು, ಮೊದಲು ದಾಖಲೆಗಳನ್ನು ಸರಿಪಡಿಸಿ, ನಂತರ ಸೂಕ್ತ ಪರಿಹಾರ ನೀಡಬೇಕು. ಇದೀಗ ಅಧಿಕಾರಿಗಳು ದಯಾ ಪರಿಹಾರವೆಂಬ ಹೆಸರಿನಲ್ಲಿ ಪ್ರತಿಯೊಬ್ಬರಿಗೂ ಸುಮಾರು 2.5 ಲಕ್ಷ ರೂ. ಪರಿಹಾರ ಪಡೆಯುವಂತೆ ಒತ್ತಡ ಹೇರುತ್ತಿದ್ದಾರೆ. ಈ ಮೊತ್ತಕ್ಕೆ ರೈತರ ಒಪ್ಪಿಗೆ ಇಲ್ಲ. ಸೂಕ್ತ ಪರಿಹಾರ ನೀಡಿದ ಬಳಿಕವೇ ಜಮೀನಿ ನಲ್ಲಿ ಕಾಮಗಾರಿ ನಡೆಸಬೇಕು ಎಂದು ಆಗ್ರಹಿಸಿದರು.

ತಮ್ಮ ಮೂರು ಎಕರೆ ಐದು ಗುಂಟೆ ಪಿತ್ರಾರ್ಜಿತ ಜಮೀನು ಯೋಜನೆಗೆ ಒಳಪಡುತ್ತಿದ್ದು, ಅದನ್ನೇ ಅವಲಂಬಿಸಿರುವ ಮೂರು ಕುಟುಂಬಗಳ ಹಲವು ಸದಸ್ಯರು ಜೀವನ ನಡೆಸುತ್ತಿದ್ದಾರೆ. ಜಮೀನು ಸಂಪೂರ್ಣ ಕಳೆದುಕೊಂಡರೆ ಕುಟುಂಬಗಳು ಸಂಕಷ್ಟಕ್ಕೆ ಸಿಲುಕಲಿವೆ. ಆದ್ದರಿಂದ ಜಮೀನಿಗೆ ನ್ಯಾಯ ಯುತ ಪರಿಹಾರ ನೀಡಬೇಕು ಎಂದು ರಮೇಶ್ ಮನವಿ ಮಾಡಿದರು.

ಇದರ ನಡುವೆ ಅಧಿಕಾರಿಗಳು ಏಕಾಏಕಿ ಜಮೀನಿಗೆ ಆಗಮಿಸಿ ತೆಂಗಿನ ಮರಗಳನ್ನು ಕಡಿದು ಹಾಕಿರುವುದು ರೈತರ ಆಕ್ರೋಶಕ್ಕೆ ಕಾರಣವಾಗಿದೆ. ಮರಗಳಲ್ಲಿ ಫಸಲು ಇದ್ದರೂ ಯಾವುದೇ ಮುನ್ನೆಚ್ಚರಿಕೆ ಅಥವಾ ಸಮರ್ಪಕ ಮಾಹಿತಿ ನೀಡದೆ ಮರಗಳನ್ನು ತೆರವುಗೊಳಿಸಲಾಗಿದೆ ಎಂದು ಅವರು ದೂರಿದರು.

ಪರಿಹಾರ ನೀಡದೆ ಕಾಮಗಾರಿ ಮುಂದುವರಿಸಿದರೆ ರೈತರಿಗೆ ಅನ್ಯಾಯವಾಗಲಿದೆ. ಸರ್ಕಾರ ಹಾಗೂ ಜಿಲ್ಲಾಡಳಿತ ಮಧ್ಯಪ್ರವೇಶಿಸಿ ನ್ಯಾಯ ಒದಗಿಸಬೇಕು ಎಂದು ಮನವಿ ಮಾಡಿದರು. ಗಂಗೂರು ಗ್ರಾಮದ ರಾಕೇಶ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

# ಶಿವಲಿಂಗೇಗೌಡ ವಿರುದ್ಧ ಸುಳ್ಳು ಆಪಾದನೆ





• ಪ್ರಜೋದಯ ವರದಿ

**ಹಾಸನ:** ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ. ಶಿವಲಿಂಗೇಗೌಡ ಅವರು ಅಧಿಕಾರಿಗಳಿಗೆ ಲಂಚ ನೀಡಿ ಎಂದು ಹೇಳಿಲ್ಲ. ಕೆಲವರು ಸುಳ್ಳು ಆಪಾದನೆ ಮಾಡುತ್ತಿದ್ದಾರೆ ಎಂದು ಅರಸೀಕೆರೆ ನಗರಸಭೆ ಮಾಜಿ ಸದಸ್ಯ ಉಮಾಶಂಕರ್ ಅವರು ಹೇಳಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೆಲಸ ಮಾಡಿಕೊಟ್ಟ ಅಧಿಕಾರಿಗಳಿಗೆ ಗೌರವ ನೀಡಬೇಕೆಂದು ಸಚಿವರು ಮಾತನಾಡುವಾಗ, ಅಲ್ಲಿದ್ದ ಒಂದು ಗುಂಪು ಗದ್ದಲ ಎಬ್ಬಿಸಿತು. ಸಚಿವರು ಲಂಚಕ್ಕೆ ಪ್ರಚೋದನೆ ನೀಡುವುದಾಗಲೀ, ಕೊಡಿ ಎಂದು ಹೇಳುವುದಾಗಲೀ ಮಾಡಿಲ್ಲ. ವಿವಿಧೆಡೆ ಕೆಲವರು ಮಾಡುತ್ತಿರುವ ಆರೋಪ ಸತ್ಯಕ್ಕೆ ದೂರವಾದ ವಿಚಾರ, ಮುಂದೆ ಹೀಗೆ ಆಗದಂತೆ ಸಚಿವರು ನೋಡಿಕೊಳ್ಳುತ್ತಾರೆ, ಪ್ರಜಾಸೇವಾ ಆಂದೋಲನ ಕಾರ್ಯಕ್ರಮ ನಿರಂತರವಾಗಿ ನಡೆಯಬೇಕು ಎಂದರು.

ಸಕಲೇಶಪುರದಲ್ಲಿ ನಡೆದ ಪ್ರಜಾಸೇವಾ ಆಂದೋಲನ ಸಭೆಯಲ್ಲಿ ಸರ್ವೆ ಇಲಾಖೆಯಲ್ಲಿ ಲಂಚಾವತಾರ ಜಾಸ್ತಿ ಆಗಿದೆ ಎಂಬ ದೂರು ಸಭೆಯಲ್ಲಿ ಕೇಳಿ ಬಂತು. ಅದು ಸಚಿವರ ಗಮನಕ್ಕೂ ಬಂತು, ಕೂಡಲೇ ಸಚಿವರು ಸ್ಥಳೀಯ ಎಡಿಎಲ್‌ಆರ್ ಕರೆಸಿ ನೀನು ಕೇಳುವುದು ಅಪರಾಧ ಎಂದು ಎಚ್ಚರಿಕೆ ನೀಡಿದರು. ಮಾತ್ರವಲ್ಲದೆ ಯಾವುದೇ ಅಧಿಕಾರಿಗಳು ವಿವಿಧ ಕೆಲಸ ಕಾರ್ಯ ಮಾಡಿಕೊಡಲು ಲಂಚ ಕೇಳಿದರೆ ಕೂಡಲೇ ನನ್ನ ಗಮನಕ್ಕೆ ತನ್ನಿ ಅಥವಾ ದೂರವಾಗಿ ಕರೆ ಮಾಡಿ, ಅಂಥವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಸಭೆಯಲ್ಲಿದ್ದವರಿಗೆ ತಿಳಿಸಿದ್ದಾರೆ ಎಂದರು.

ಶಿವಲಿಂಗೇಗೌಡ ಅವರು ಕಳೆದ 20 ವರ್ಷಗಳಿಂದ ಹತ್ತು ಹಲವು ಜನಪರ ಕೆಲಸ ಮಾಡುತ್ತಿದ್ದಾರೆ. ಈ ಅವಧಿಯಲ್ಲಿ ಅವರು ಲಂಚದ ಮಾತುಗಳನ್ನಾಡಿಲ್ಲ. ಮೊನ್ನೆಯೂ ಆಡಿದ್ದಾರೆ ಎಂದು ನಮಗೆ ಅನ್ನಿಸುವುದಿಲ್ಲ. ರಾಜಕಾರಣ ಮಾಡುವಾಗ ಮಾಡಿ, ಆದರೆ ಇಲ್ಲಸಲ್ಲದ ದೂರು ಸರಿಯಲ್ಲ. ಈ ಮೂಲಕ ಅಭಿವೃದ್ಧಿ ಕುಂಠಿತ ಆಗುವುದು ಬೇಡ ಎಂದು ಹೇಳಿದರು.

ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಗಳಾದ ಮಲ್ಲೇಶ್, ನಾಗರಾಜ್ ಕಾಂತರಾಜು, ಶಿವಣ್ಣ, ಕಾರ್ತಿಕ್ ಮತ್ತು ಕೆಡಿಪಿ ಸದಸ್ಯ ಕುಮಾರಸ್ವಾಮಿ ಇದ್ದರು.

# ಕ್ರಾಫರ್ಡ್ ಆಸ್ಪತ್ರೆಗೆ ಸ್ಕ್ಯಾನಿಂಗ್ ಯಂತ್ರ ಮಂಜೂರು ಮಾಡಿ

## ಆರೋಗ್ಯ ಸಚಿವರಿಗೆ ಶಾಸಕ ಸಿಮೆಂಟ್ ಮಂಜು ಒತ್ತಾಯ | ಬಡ ರೋಗಿಗಳ ಪರದಾಟಕ್ಕೆ ಮುಕ್ತಿ ನೀಡಲು ಆಗ್ರಹ

• ಪ್ರಜೋದಯ ವರದಿ



**ಸಕಲೇಶಪುರ:** ನಗರದ ಕ್ರಾಫರ್ಡ್ ಸರ್ಕಾರಿ ಆಸ್ಪತ್ರೆಗೆ ತುರ್ತಾಗಿ ಹೊಸ ಸ್ಕ್ಯಾನಿಂಗ್ ಯಂತ್ರ ಒದಗಿಸಿ, ಬಡ ಹಾಗೂ ಗ್ರಾಮೀಣ ಭಾಗದ ರೋಗಿಗಳಿಗೆ ಆಸ್ಪತ್ರೆಯಲ್ಲಿಯೇ ಅಗತ್ಯ ಪರೀಕ್ಷೆ ಲಭ್ಯವಾಗುವಂತೆ ಕ್ರಮ ಕೈಗೊಳ್ಳಬೇಕು ಎಂದು ಶಾಸಕ ಸಿಮೆಂಟ್ ಮಂಜು ಆರೋಗ್ಯ ಸಚಿವ ಯು.ಟಿ. ಖಾದರ್ ಅವರಿಗೆ ಮನವಿ ಸಲ್ಲಿಸಿದರು.

ಬೆಂಗಳೂರಿನಲ್ಲಿ ಸಚಿವರನ್ನು ಭೇಟಿ ಮಾಡಿದ ಶಾಸಕರು,ಸಕಲೇಶಪುರ ಆಲೂರು- ಕಟ್ಟಾಯ ವಿಧಾನಸಭಾ ಕ್ಷೇತ್ರದ ಪ್ರಮುಖ ಸರ್ಕಾರಿ ಆರೋಗ್ಯ ಕೇಂದ್ರವಾಗಿರುವ ಕ್ರಾಫರ್ಡ್ ಆಸ್ಪತ್ರೆಯನ್ನು ಸಕಲೇಶಪುರ ತಾಲ್ಲೂಕು ಹಾಗೂ ಸುತ್ತಮುತ್ತಲಿನ ಗ್ರಾಮೀಣ ಪ್ರದೇಶಗಳ ಜನರು ಅವಲಂಬಿಸಿದ್ದಾರೆ. ಪ್ರತಿದಿನ ಹೆಚ್ಚಿನ ಸಂಖ್ಯೆಯಲ್ಲಿ ರೋಗಿಗಳು, ಗರ್ಭಿಣಿಯರು, ಹಿರಿಯ ನಾಗರಿಕರು ಹಾಗೂ ಮಕ್ಕಳು ಚಿಕಿತ್ಸೆಗಾಗಿ ಆಸ್ಪತ್ರೆಗೆ ಆಗಮಿಸುತ್ತಿದ್ದಾರೆ. ಆದರೆ ಅಗತ್ಯ ಸ್ಕ್ಯಾನಿಂಗ್ ಸೌಲಭ್ಯ ಇಲ್ಲದಿರುವುದರಿಂದ ಸಾರ್ವಜನಿಕರು ತೊಂದರೆ ಅನುಭವಿಸುತ್ತಿದ್ದಾರೆ ಎಂದು ಶಾಸಕರು ಸಚಿವರ ಗಮನಕ್ಕೆ ತಂದರು.

**ಖಾಸಗಿ ಕೇಂದ್ರಗಳೇ ಗತಿ:** ವೈದ್ಯಕೀಯ ಪರೀಕ್ಷೆ ಹಾಗೂ ಮುಂದಿನ ಚಿಕಿತ್ಸೆಗೆ ಸ್ಕ್ಯಾನಿಂಗ್ ಅಗತ್ಯವಿರುವ ರೋಗಿಗಳು ಅನಿವಾರ್ಯವಾಗಿ ಖಾಸಗಿ ಸ್ಕ್ಯಾನಿಂಗ್ ಕೇಂದ್ರಗಳನ್ನು ಅವಲಂಬಿಸಬೇಕಾಗಿದೆ. ಇದರಿಂದ ಬಡ ಹಾಗೂ ಮಧ್ಯಮ ವರ್ಗದ ಕುಟುಂಬಗಳ ಮೇಲೆ ಹೆಚ್ಚುವರಿ ಆರ್ಥಿಕ ಹೊರೆ ಬೀಳುತ್ತಿದೆ. ದೂರದ ಗ್ರಾಮೀಣ ಪ್ರದೇಶಗಳಿಂದ ಬರುವ ರೋಗಿಗಳು ಸ್ಕ್ಯಾನಿಂಗ್‌ಗಾಗಿ ಬೇರೆಡೆ ಅಲೆದಾಡಬೇಕಾದ ಪರಿಸ್ಥಿತಿಯೂ ಇದೆ ಎಂದು ಮನವಿಯಲ್ಲಿ ವಿವರಿಸಲಾಗಿದೆ.

**ತುರ್ತು ಚಿಕಿತ್ಸೆಗೆ ಸ್ಕ್ಯಾನಿಂಗ್ ಅಗತ್ಯ:** ಸಕಲೇಶಪುರವು ಗುಡ್ಡಗಾಡು ಹಾಗೂ ಅರಣ್ಯ ಪ್ರದೇಶಗಳಿಂದ ಕೂಡಿದ್ದು, ಮಾನವ- ವನ್ಯಜೀವಿ ಸಂಘರ್ಷ ಹಾಗೂ ರಸ್ತೆ ಅಪಘಾತದಂತಹ ತುರ್ತು ಪ್ರಕರಣಗಳು ಆಗಾಗ್ಗೆ ಸಂಭವಿಸುತ್ತವೆ. ಇಂತಹ ಸಂದರ್ಭಗಳಲ್ಲಿ ಗಾಯಾಳುಗಳಿಗೆ ತಕ್ಷಣ ಪರೀಕ್ಷೆ ನಡೆಸಿ ಸೂಕ್ತ ಚಿಕಿತ್ಸೆ ನೀಡಲು ಸ್ಕ್ಯಾನಿಂಗ್ ಸೌಲಭ್ಯ ಅತ್ಯಗತ್ಯ. ಸಕಾಲದಲ್ಲಿ ಸ್ಕ್ಯಾನಿಂಗ್ ಪರೀಕ್ಷೆ ಲಭ್ಯವಾಗದಿದ್ದರೆ ಚಿಕಿತ್ಸೆಯೂ ವಿಳಂಬವಾಗುವ ಸಾಧ್ಯತೆ ಇದೆ ಎಂದು ಶಾಸಕರು ತಿಳಿಸಿದ್ದಾರೆ.

ಈ ಸಮಸ್ಯೆಯನ್ನು ತುರ್ತು ಸಾರ್ವಜನಿಕ ಆರೋಗ್ಯದ ವಿಷಯವಾಗಿ ಪರಿಗಣಿಸಿ, ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಬೇಕು. ಕ್ರಾಫರ್ಡ್ ಸರ್ಕಾರಿ ಆಸ್ಪತ್ರೆಗೆ ಶೀಘ್ರವಾಗಿ ಹೊಸ ಸ್ಕ್ಯಾನಿಂಗ್ ಯಂತ್ರವನ್ನು ಮಂಜೂರು ಮಾಡಿ ಅಳವಡಿಸುವ ಮೂಲಕ ಈ ಭಾಗದ ಜನರ ಬಹುದಿನಗಳ ಬೇಡಿಕೆಯನ್ನು ಈಡೇರಿಸಬೇಕು ಎಂದು ಶಾಸಕ ಸಿಮೆಂಟ್ ಮಂಜು ಆರೋಗ್ಯ ಸಚಿವರನ್ನು ಒತ್ತಾಯಿಸಿದರು.

# ನಾಳೆ ಕೃಷ್ಣ ಜಯಂತಿ

**ಹಾಸನ:** ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಕೃಷ್ಣ ಜಯಂತಿ ಕಾರ್ಯಕ್ರಮವನ್ನು ಸೆ.27 ರಂದು ಬೆಳಿಗ್ಗೆ 11 ಗಂಟೆಗೆ ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಆಯೋಜಿಸಲಾಗಿದೆ.

ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ. ಶಿವಲಿಂಗೇಗೌಡ ಅವರು ಕಾರ್ಯಕ್ರಮ ಉದ್ಘಾಟಿಸಲಿದ್ದು, ಶಾಸಕ ಸ್ವರೂಪ್ ಪ್ರಕಾಶ್ ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಸಂಸದ ಶ್ರೇಯಸ್ ಎಂ.ಪಟೇಲ್, ಶಾಸಕರಾದ ಹೆಚ್.ಡಿ.ರೇವಣ್ಣ, ಸಿ.ಎನ್.ಬಾಲಕೃಷ್ಣ, ಎ.ಮಂಜು, ಹೆಚ್.ಕೆ.ಸುರೇಶ್, ಸಿಮೆಂಟ್ ಮಂಜು, ವಿಧಾನ ಪರಿಷತ್ ಶಾಸಕರುಗಳಾದ ಸೂರಜ್ ರೇವಣ್ಣ, ಮಧು ಜಿ. ಮಾದೇಗೌಡ, ಕೆ. ವಿವೇಕಾನಂದ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಪಟೇಲ್ ಶಿವಪ್ಪ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ರಂಜಿತ್ ಜಿ.ಆರ್. ಭಾಗವಹಿಸಲಿದ್ದಾರೆ.

ಅರಕಲಗೂಡು ಸರ್ಕಾರಿ ಪ್ರೌಢ ಶಾಲೆಯ ಮುಖ್ಯ ಶಿಕ್ಷಕ ಬಿ.ಡಿ.ಶಂಕರೇಗೌಡ ಅವರು ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಲಿದ್ದಾರೆ.

# ಮಹಿಳೆಯರು ಸಂಘಟಿತರಾಗಿ ಏಳಿಗೆ ಹೊಂದಬೇಕು

• ಪ್ರಜೋದಯ ವರದಿ



**ಅರಕಲಗೂಡು:** ಮಹಿಳೆಯರು ಧಾರ್ಮಿಕ ಹಾಗೂ ಸಾಮಾಜಿಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಸಂಘಟಿತರಾಗಿ ಏಳಿಗೆ ಕಾಣಬೇಕು ಎಂದು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಜಿಲ್ಲಾ ನಿರ್ದೇಶಕ ವಿಠಲ್ ಸಾಲಿಯಾನ್ ಹೇಳಿದರು.

ಪಟ್ಟಣದ ಶಿವದೇವ ಭಬನದಲ್ಲಿ ಶುಕ್ರವಾರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ನಡೆದ ಸಾಮೂಹಿಕ ಶ್ರೀ ವರಮಹಾಲಕ್ಷ್ಮಿ ಪೂಜೆ ಹಾಗೂ ಧಾರ್ಮಿಕ ಸಭಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕುಟುಂಬಗಳಲ್ಲಿ ಹಾಗೂ ಸಮಾಜದಲ್ಲಿ ಧಾರ್ಮಿಕ ಭಾವನೆಗಳನ್ನು ಬೆಳೆಸುವ ಉದ್ದೇಶದಿಂದ ಸಂಸ್ಥೆಯ ವತಿಯಿಂದ ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಮಹಿಳೆಯರು ಮನೆ ಕಾರ್ಯಗಳನ್ನು ನಿರ್ವಹಿಸುವ ಜತೆಗೆ ಇಂತಹ ಧಾರ್ಮಿಕ ಹಾಗೂ ಸಾಮಾಜಿಕ ಚಟುವಟಿಕೆಗಳಲ್ಲಿ ಭಾಗ ವಹಿಸಿ ಸಂಘಟಿತರಾಗಬೇಕು. ಸಂಘಟನೆಯ ಮೂಲಕ ಮಹಿಳೆಯರು ಆರ್ಥಿಕವಾಗಿ, ಸಾಮಾಜಿಕವಾಗಿ ಹಾಗೂ ಶೈಕ್ಷಣಿಕವಾಗಿ ಪ್ರಗತಿ ಸಾಧಿಸಲು ಸಾಧ್ಯವಾಗುತ್ತದೆ ಎಂದರು.

ಚಿಲುಮೆಮಠದ ಶ್ರೀ ಜಯದೇವ ಸ್ವಾಮೀಜಿ ಧಾರ್ಮಿಕ ಸಭೆಯಲ್ಲಿ ಆಶೀರ್ವಚನ ನೀಡಿ, ಧಾರ್ಮಿಕ ಆಚರಣೆಗಳು ಕುಟುಂಬದಲ್ಲಿ ಶಾಂತಿ, ನೆಮ್ಮದಿ ಹಾಗೂ ಸೌಹಾರ್ದತೆಯನ್ನು ಬೆಳೆಸುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ. ಮಹಿಳೆಯರು ಭಕ್ತಿ, ಸಂಸ್ಕಾರ ಮತ್ತು ಧಾರ್ಮಿಕ ಮೌಲ್ಯಗಳನ್ನು ಮುಂದಿನ ಪೀಳಿಗೆಗೆ ಕೊಂಡೊಯ್ಯುವಲ್ಲಿ ಪ್ರಮುಖ ಪಾತ್ರ ವಹಿಸಬೇಕು ಎಂದು ಹೇಳಿದರು.

ಸಾಮೂಹಿಕ ಪೂಜೆಯಲ್ಲಿ ಮಹಿಳೆಯರು ಭಕ್ತಿಭಾವದಿಂದ ಪಾಲ್ಗೊಂಡು ವಿಶೇಷ ಪೂಜೆ ಸಲ್ಲಿಸಿದರು. ವಿವಿಧ ಧಾರ್ಮಿಕ ವಿಧಿವಿಧಾನಗಳು ನೆರವೇರಿದವು.

ಕಾರ್ಯಕ್ರಮದಲ್ಲಿ ಸುಜಾತ, ಶಾಂತಮಲ್ಲಪ್ಪ, ಗೌತಮಿ, ಹೂವಣ್ಣ, ವಿಠಲ್, ಲೋಕೇಶ್, ಸ್ವಾತಿ ಜೆ.ಗುಪ್ತ, ಪ್ರಕಾಶ್, ನಂದಿನಿ, ಸೌಮ್ಯ, ಚೈತ್ರ, ಗೌರಮ್ಮ, ಉಮಾದೇವಿ, ರೂಪ, ಪುಟ್ಟಲಕ್ಷ್ಮಿ ಸದಸ್ಯರು ಇದ್ದರು.

# ಕ್ಯಾತನಹಳ್ಳಿ ಏತ ನೀರಾವರಿ ಸ್ಥಳಕ್ಕೆ ಶಾಸಕ ಸ್ವರೂಪ್ ಪ್ರಕಾಶ್ ಭೇಟಿ



**ಹಾಸನ:** ಕ್ಯಾತನಹಳ್ಳಿ ಏತ ನೀರಾವರಿ ಯೋಜನೆ ಸ್ಥಳಕ್ಕೆ ಶಾಸಕ ಹೆಚ್.ಪಿ. ಸ್ವರೂಪ್ ಅವರು ಶುಕ್ರವಾರ ಭೇಟಿ ನೀಡಿ ಪರಿಶೀಲಿಸಿದರು.

ಜನರ ಬಹು ದಿನಗಳ ಬೇಡಿಕೆಯಾಗಿರುವ ಏತ ನೀರಾವರಿ ಯೋಜನೆ ಪೂರ್ಣಗೊಳಿಸುವಂತೆ ಈಗಾಗಲೇ ಸರ್ಕಾರಕ್ಕೆ ಮನವಿ ಸಲ್ಲಿಸಿರುವ ಅವರು, ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲಿಸಿ ವಾಸ್ತವ ಸ್ಥಿತಿ ಅರಿತರು. ನೂತನವಾಗಿ ಖರೀದಿಸಿರುವ ಹೈಫ್ಯಾನಲ್, ಬ್ರೆಕರ್ ಹಾಗು 20500 ಕೆವಿ ಟ್ರಾನ್ಸ್‌ಫಾರ್ಮರ್ ಮತ್ತು 100 ಕೆವಿ ಟ್ರಾನ್ಸ್‌ಫಾರ್ಮರ್‌ಗಳನ್ನು ಸರ್ವಿಸ್ ಮಾಡಿಸಿ ಯೋಜನೆಗಾಗಿ ಸಿದ್ಧಗೊಳಿಸಲಾಗಿದೆ. ಪಂಪ್ ಮತ್ತು ಮೋಟಾರ್‌ಗಳು ಸುಸಜ್ಜಿತವಾಗಿವೆಯೇ ಎಂಬುದನ್ನು ಪರಿಶೀಲಿಸಲಾಯಿತು. ಸೆ.28ರೊಳಗಾಗಿ ಸಂಪೂರ್ಣ ಕೆಲಸ ಮುಗಿದು ಕಾಲುವೆಗಳಿಗೆ ನೀರು ಹರಿಸುವ ಕೆಲಸ ಆಗಬೇಕೆಂದು ಅಧಿಕಾರಿಗಳಿಗೆ ಶಾಸಕ ಹೆಚ್.ಪಿ.ಸ್ವರೂಪ್ ಸೂಚನೆ ನೀಡಿದರು.

ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಕಡದರವಳ್ಳಿ ಗ್ರಾಮಕ್ಕೆ ಭೇಟಿದ ಅವರು 50 ಲ.ರೂ. ವೆಚ್ಚದ ರಸ್ತೆ ಕಾಮಗಾರಿಗೆ ಚಾಲನೆ ನೀಡಿದರು. ರಸ್ತೆ ನಿರ್ಮಾಣ ಗ್ರಾಮಸ್ಥರ ಬಹುದಿನಗಳ ಬೇಡಿಕೆಯಾಗಿದ್ದು ಆದಷ್ಟು ಬೇಗ ಕಾಮಗಾರಿ ಮುಗಿಸಿ ವಾಹನಗಳ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕೆಂದು ಅಧಿಕಾರಿ ಹಾಗು ಗುತ್ತಿಗೆದಾರರಿಗೆ ನಿರ್ದೇಶನ ನೀಡಿದರು. ಪಕ್ಷದ ಮುಖಂಡರು, ಕಾರ್ಯಕರ್ತರು ಹಾಗು ಗ್ರಾಮಸ್ಥರು ಹಾಜರಿದ್ದರು

## ಸಕಲೇಶಪುರ: ವಿವಿಧ ಕಲಾತಂಡಗಳ ವೈಭವದ ಮೆರವಣಿಗೆ

# ಹೇಮಾವತಿ ನದಿಯಲ್ಲಿ ಗಣೇಶ ಮೂರ್ತಿ ವಿಸರ್ಜನೆ

• ಪ್ರಜೋದಯ ವರದಿ

**ಸಕಲೇಶಪುರ:** ಪಟ್ಟಣದ ಹಾಡ್ಯ ಸುಬ್ಬೇಗೌಡ ಗಣಪತಿ ಸೇವಾ ಸಮಿತಿ ವತಿಯಿಂದ ಪ್ರತಿಷ್ಠಾಪಿಸಲಾಗಿದ್ದ ಗಣೇಶ ಮೂರ್ತಿಯನ್ನು ಗುರುವಾರ ರಾತ್ರಿ ಸಡಗರ, ಸಂಭ್ರಮ ಹಾಗೂ ಭಕ್ತಿಭಾವದಿಂದ ವಿವಿಧ ಕಲಾತಂಡಗಳ ಭವ್ಯ ಮೆರವಣಿಗೆಯೊಂದಿಗೆ ಹೇಮಾವತಿ ನದಿಯಲ್ಲಿ ವಿಸರ್ಜಿಸಲಾಯಿತು.





ಗಣೇಶೋತ್ಸವದ ಅಂಗವಾಗಿ ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನದವರೆಗೆ ಗಣಪತಿ ಸನ್ನಿಧಿಯಲ್ಲಿ ಚತುದ್ರವ್ಯ ಹೋಮ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನೆರವೇರಿದವು. ಬಳಿಕ ಗಣಪತಿಗೆ ಮಹಾಮಂಗಳಾರತಿ ನೆರವೇರಿಸಿ, ಭಕ್ತರಿಗೆ ಪ್ರಸಾದ ವಿನಿಯೋಗ ಹಾಗೂ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು. ನೂರಾರು ಭಕ್ತರು ಪಾಲ್ಗೊಂಡು ಗಣಪತಿಯ ದರ್ಶನ ಪಡೆದರು.

ಮಧ್ಯಾಹ್ನ 3 ಗಂಟೆಗೆ ಪುಷ್ಪಾಲಂಕೃತ ರಥದಲ್ಲಿ ಗಣೇಶ ಮೂರ್ತಿಯನ್ನು ಪ್ರತಿಷ್ಠಾಪಿಸಿ, ನಾಡಪ್ರಭು ಕೆಂಪೇಗೌಡ ವೃತ್ತದಿಂದ ಪಟ್ಟಣದ ರಾಜಬೀದಿಯಲ್ಲಿ ಭವ್ಯ ಮೆರವಣಿಗೆ ಆರಂಭಿಸಲಾಯಿತು. ವಿವಿಧ ಕಲಾತಂಡಗಳ ಪ್ರದರ್ಶನ, ವಾದ್ಯಗಳ ನಾದ ಹಾಗೂ ಭಕ್ತರ ಜಯಘೋಷದ ನಡುವೆ ಮೆರವಣಿಗೆ ಸಾಗಿತು.

ಮೆರವಣಿಗೆಯಲ್ಲಿ ಹುಲಿ ವೇಷಧಾರಿಗಳ ಕುಣಿತ, ಗೊಂಬೆ ಕುಣಿತ, ಕರಡಿ ಕುಣಿತ, ಕೀಲು ಕುದುರೆ ಸೇರಿದಂತೆ ಹಲವು ಕಲಾ ಪ್ರದರ್ಶನಗಳು ನೋಡುಗರ ಗಮನ ಸೆಳೆದವು. ರಾಮ-ಲಕ್ಷ್ಮಣರೊಂದಿಗೆ ನಿರ್ಮಿಸಲಾಗಿದ್ದ ಬೃಹತ್ ಗಾತ್ರದ ಆಂಜನೇಯನ ಪ್ರತಿಕೃತಿ, ರಾಕ್ಷಸನ ಸಂಹಾರ ಮಾಡುತ್ತಿರುವಂತೆ ರೂಪಿಸಲಾಗಿದ್ದ ಹತ್ತು ಕೈಗಳ ಗಣೇಶನ ಆಕರ್ಷಕ ಕಲಾಕೃತಿ ಹಾಗೂ ಕೃತಕ ಆನೆಯ ಮೆರವಣಿಗೆ ವಿಶೇಷ ಆಕರ್ಷಣೆಯಾಗಿದ್ದವು.

ಇದರೊಂದಿಗೆ ವೀರಗಾಸೆ ತಂಡದ ಸಾಂಪ್ರದಾಯಿಕ ಕುಣಿತ ಮೆರವಣಿಗೆಗೆ ಮತ್ತಷ್ಟು ಮೆರುಗು ನೀಡಿತು. ಡಿಜೆ ಸಂಗೀತಕ್ಕೆ ಯುವಕರು ಹಾಗೂ ಯುವತಿಯರು ಉತ್ಸಾಹದಿಂದ ಕುಣಿದು ಸಂಭ್ರಮಿಸಿದರು. ವಿವಿಧ ಕಲಾತಂಡಗಳ ಪ್ರದರ್ಶನವನ್ನು ವೀಕ್ಷಿಸಲು ರಾಜಬೀದಿಯ ಇಕ್ಕೆಲಗಳಲ್ಲಿ ನೂರಾರು ಸಂಖ್ಯೆಯಲ್ಲಿ ಭಕ್ತರು ಹಾಗೂ ಪಟ್ಟಣದ ನಿವಾಸಿಗಳು ಜಮಾಯಿಸಿದ್ದರು. ಮೆರವಣಿಗೆಯುದ್ದಕ್ಕೂ ಗಣೇಶನಿಗೆ ಜೈಕಾರ ಮೊಳಗಿತು.

ಗಣಪತಿ ಸೇವಾ ಸಮಿತಿ ಅಧ್ಯಕ್ಷ ಎಸ್.ಡಿ.ಸತೀಶ್, ಪ್ರಧಾನ ಕಾರ್ಯದರ್ಶಿ ಎಸ್.ಕೆ.ಸೂರ್ಯ, ಖಜಾಂಚಿ ಬಿ.ಎನ್.ನಾಗೇಶ್ ಸೇರಿದಂತೆ ಸಮಿತಿಯ ಪದಾಧಿಕಾರಿಗಳು ಹಾಗೂ ಸದಸ್ಯರು ಮೆರವಣಿಗೆಯಲ್ಲಿ ಭಾಗವಹಿಸಿದ್ದರು.

**ಕಲಾವಿದರೊಂದಿಗೆ ಚಂಡೆ ಬಾರಿಸಿದ ಪೊಲೀಸ್ ಅಧಿಕಾರಿ**

ಮೆರವಣಿಗೆಯ ಸಂದರ್ಭದಲ್ಲಿ ನಗರ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ಮಹೇಶ್ ಅವರು ಕಲಾವಿದರೊಂದಿಗೆ ಸೇರಿ ಚಂಡೆ ವಾದ್ಯ ಬಾರಿಸಿದ್ದು ನೋಡುಗರ ಗಮನ ಸೆಳೆಯಿತು. ಪೊಲೀಸ್ ಅಧಿಕಾರಿ ಕಲಾವಿದರೊಂದಿಗೆ ಬೆರೆತು ಚಂಡೆ ಬಾರಿಸಿದ ದೃಶ್ಯಕ್ಕೆ ಸಾರ್ವಜನಿಕರಿಂದ ಮೆಚ್ಚುಗೆ ವ್ಯಕ್ತವಾಯಿತು.

ಮೆರವಣಿಗೆಯು ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಸಾಗಿದ ಬಳಿಕ ಗಣೇಶ ಮೂರ್ತಿಯನ್ನು ಪವಿತ್ರ ಹೇಮಾವತಿ ನದಿಯ ಬಳಿಗೆ ಕೊಂಡೊಯ್ಯಲಾಯಿತು. ಧಾರ್ಮಿಕ ವಿಧಿ-ವಿಧಾನಗಳನ್ನು ನೆರವೇರಿಸಿದ ನಂತರ ಭಕ್ತಿಭಾವದಿಂದ ಗಣೇಶ ಮೂರ್ತಿಯನ್ನು ಹೇಮಾವತಿ ನದಿಯಲ್ಲಿ ವಿಸರ್ಜಿಸಲಾಯಿತು.

ಒಟ್ಟಾರೆ ಹಾಡ್ಯ ಸುಬ್ಬೇಗೌಡ ಗಣಪತಿ ಸೇವಾ ಸಮಿತಿಯ ಗಣೇಶೋತ್ಸವದ ವಿಸರ್ಜನಾ ಮೆರವಣಿಗೆ ಧಾರ್ಮಿಕ ಭಕ್ತಿ, ಸಾಂಪ್ರದಾಯಿಕ ಕಲಾ ಪ್ರದರ್ಶನ ಹಾಗೂ ಜನರ ಸಂಭ್ರಮದೊಂದಿಗೆ ನೆರವೇರಿತು.


ಕರ್ನಾಟಕ ಸರ್ಕಾರ

**ಹಾಸನ ನಗರಾಭಿವೃದ್ಧಿ ಪ್ರಾಧಿಕಾರ ಬಿ.ಎಂ.ರಸ್ತೆ, ಹಾಸನ. ದೂರವಾಣಿ: 08172-268876, 266719**

(e-mail : hudahassan125@gmail.com)

ಸಂ:ಹಾನಪ್ರಾ/ನಯೋವಿ/ Road Network Grid Plan/1/2026-27 ದಿನಾಂಕ:24.09.2026

**:: ಸಾರ್ವಜನಿಕ ಪ್ರಕಟಣೆ ::**

ರಾಜ್ಯದಲ್ಲಿನ ಸ್ಥಳೀಯ ಯೋಜನಾ ಪ್ರದೇಶಗಳಲ್ಲಿನ ಅನುಮೋದಿತ ಮಹಾಯೋಜನೆ ಹೊಂದಿರುವ ಹಾಗೂ ಮಹಾಯೋಜನೆ ತಯಾರಿಕೆ ವಿವಿಧ ಹಂತಗಳಲ್ಲಿರುವ ನಗರ/ಪಟ್ಟಣಗಳಿಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 76-ಕೆ ರಡಿಯಲ್ಲಿ ಪ್ರದತ್ತವಾದ ಅಧಿಕಾರದನ್ವಯ ಸದರಿ ಕಾಯ್ದೆಯ ಕಲಂ 12(1)(ಬಿ) ರಂತೆ ತಯಾರಿಸಿರುವ GIS ಆಧಾರಿತ Road Network Grid Plan ಗೆ ಸದರಿ ಕಾಯ್ದೆಯ ಕಲಂ 13(1) ರಡಿಯಲ್ಲಿ ಸರ್ಕಾರದ ಆದೇಶ ಸಂಖ್ಯೆ:ನಅಇ/358/ಟಿಟಿಪಿ/2026(ಇ), ದಿನಾಂಕ: 09-09-2026ರಲ್ಲಿ ತಾತ್ಕಾಲಿಕ ಅನುಮೋದನೆ ನೀಡಲಾಗಿರುತ್ತದೆ. ಹಾಸನ ನಗರಾಭಿವೃದ್ಧಿ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಗೆ ಸಿದ್ಧಪಡಿಸಲಾಗಿರುವ GIS ಆಧಾರಿತ Road Network Grid Plan ನಕ್ಷೆಯನ್ನು ಹಾಸನ ನಗರಾಭಿವೃದ್ಧಿ ಪ್ರಾಧಿಕಾರ, ಬಿ.ಎಂ. ರಸ್ತೆ, ಹಾಸನ ಹಾಗೂ ಮಹಾನಗರ ಪಾಲಿಕೆ, ಬಿ.ಎಂ. ಹಾಸನ ಕಛೇರಿಗಳಲ್ಲಿ ಸಾರ್ವಜನಿಕರ ವೀಕ್ಷಣೆಗಾಗಿ ಇರಿಸಲಾಗಿರುತ್ತದೆ. ಈ ಯೋಜನೆಯಿಂದ ಬಾಧಿತರಾಗಬಹುದಾದ ಸಾರ್ವಜನಿಕರು ತಮ್ಮ ಸಲಹೆ/ಸೂಚನೆಗಳು ಅಥವಾ ಅಕ್ಷೇಪಣೆಗಳು ಏನಾದರೂ ಇದ್ದಲ್ಲಿ ಈ ಪ್ರಕಟಣೆಯು ದಿನಪತ್ರಿಕೆಯಲ್ಲಿ ಪ್ರಕಟಗೊಂಡ ದಿನಾಂಕದಿಂದ 60 (ಅರವತ್ತು) ದಿನಗಳೊಳಗಾಗಿ ಈ ಕಚೇರಿಗೆ ಖುದ್ದಾಗಿ, ನೋಂದಾಯಿತ ಅಂಚೆ ಅಥವಾ ಇ-ಮೇಲ್ ಮೂಲಕ ಸಲ್ಲಿಸಬಹುದಾಗಿದೆ. ನಿಗಧಿತ 60 (ಅರವತ್ತು) ದಿನಗಳ ಅವಧಿಯೊಳಗೆ ಸ್ವೀಕರಿಸಲ್ಪಟ್ಟ ಸಲಹೆ, ಸೂಚನೆಗಳು ಹಾಗೂ ಆಕ್ಷೇಪಣೆಗಳನ್ನು ಮಾತ್ರ ಪರಿಗಣಿಸಲಾಗುವುದು. ಸದರಿ ಅವಧಿ ಮುಕ್ತಾಯಗೊಂಡ ನಂತರ ಸ್ವೀಕರಿಸಲ್ಪಡುವ ಯಾವುದೇ ಸಲಹೆ, ಸೂಚನೆ ಅಥವಾ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸಲಾಗಿದೆ.

ಸಹಿ/-(ಕೆ.ಎಂ. ರಮೇಶ್)
ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ಹಾಸನ

ವಾಸಾಸಂಇ/ಹಿಸನಿ/ಹಾಸನ/560/ಕೆಎಸ್ಎಂಸಿಎ/2026-27

## ಸಂಸದರ ವೇತನದಿಂದ ಜೋಡಿಹಳ್ಳ ಕೆರೆಗೆ ನೀರಿನ ವ್ಯವಸ್ಥೆ

» ಮೊದಲನೇ ಪುಟದಿಂದ

ಕುಡಿಯುವ ನೀರು ಒದಗಿಸಲಾಗಿದೆ. ಇದರಿಂದ ಸಂತಸಗೊಂಡ ಸ್ಥಳೀಯ ರೈತರು ಹಾಗು ಗ್ರಾಮಸ್ಥರು ಮೆಚ್ಚುಗೆ ಸೂಚಿಸಿದ್ದಾರೆ. ಈ ಸಂದರ್ಭದಲ್ಲಿ ರೈತರು ಕೆರೆಗೆ ಶಾಶ್ವತ ನೀರಿನ ಮೂಲ ಹಾಗೂ ನೀರಾವರಿ ವ್ಯವಸ್ಥೆ ಕಲ್ಪಿಸುವಂತೆ ಸಂಸದರಿಗೆ ಮನವಿ ಸಲ್ಲಿಸಿದರು. ಇದಕ್ಕೆ ಸ್ಪಂದಿಸಿದ ಸಂಸದರು, ಕೆರೆಗೆ ಶಾಶ್ವತ ನೀರಿನ ಮೂಲ ಕಲ್ಪಿಸುವ ನಿಟ್ಟಿನಲ್ಲಿ ಸಂಬಂಧಪಟ್ಟ ಇಲಾಖೆಗಳೊಂದಿಗೆ ಚರ್ಚಿಸಿ ಅಗತ್ಯ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

ಬರದಂತಹ ಸಂಕಷ್ಟದ ಸಂದರ್ಭದಲ್ಲಿ ರೈತರು ಹಾಗು ಜಾನುವಾರುಗಳಿಗೆ ಅನುಕೂಲವಾಗುವ ರೀತಿಯಲ್ಲಿ ನೀರಾವರಿ ಸೌಲಭ್ಯ ಕಲ್ಪಿಸುವುದು ನಮ್ಮ ಜವಾಬ್ದಾರಿ. ಜೋಡಿ ಹಳ್ಳ ಕೆರೆಗೆ ಶಾಶ್ವತ ನೀರಿನ ಮೂಲ ಕಲ್ಪಿಸುವ ನಿಟ್ಟಿನಲ್ಲಿ ಮುಂದಿನ ಹಂತದ ಕ್ರಮಗಳಿಗೂ ಆದ್ಯತೆ ನೀಡಲಾಗುವುದೆಂದು ಶ್ರೇಯಸ್ ಪಟೇಲ್ ಅವರು ತಿಳಿಸಿದರು.

## ದಂಪತಿ ಮೇಲೆ ಮಾರಣಾಂತಿಕ ಹಲ್ಲೆ

• ಪ್ರಜೋದಯ ವರದಿ

**ಬೇಲೂರು:** ಕ್ಷುಲ್ಲಕ ಕಾರಣಕ್ಕೆ ವ್ಯಕ್ತಿಯೊಬ್ಬ ದಂಪತಿ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿರುವ ಘಟನೆ ಪಟ್ಟಣದಲ್ಲಿ ನಡೆದಿದೆ.

ಪಟ್ಟಣದ ಗಿರಿಜಾ ಹಾಗು ಬಸವರಾಜು ಅವರ ಮೇಲೆ ಸ್ವಾಮಿ ಪ್ರದೀಪ್ ಎಂಬಾತ ಹಲ್ಲೆ ನಡೆಸಿದ್ದಾನೆ ಎನ್ನಲಾಗಿದೆ. ಬಸವರಾಜು ಪಾನಿ ಪುರಿ ಅಂಗಡಿ ಇಟ್ಟುಕೊಂಡಿದ್ದಾರೆ. 20 ದಿನಗಳ ಹಿಂದೆ ಬಸವರಾಜು ಅವರ ಮನೆಗೆ ಬಂದಿದ್ದ ಸ್ವಾಮಿ ಪ್ರದೀಪ್ ಮೊಬೈಲ್ ಕೊಡುವಂತೆ ಕೇಳಿದ್ದಾನೆ. ಮೊಬೈಲ್ ಕೊಡದೆ ಇದ್ದುದರಿಂದ ದ್ವೇಷ ಸಾಧಿಸಿದ್ದ ಆತ ಗುರುವಾರ ರಾತ್ರಿ ಮನೆ ಮುಂದೆ ಬಂದು ಅಸಭ್ಯವಾಗಿ ವರ್ತಿಸಿದ್ದಾನೆ. ಅದನ್ನು ಪ್ರಶ್ನಿಸಿದ್ದಕ್ಕೆ ಗಿರಿಜಾ ಅವರಿಗೆ ಗಾಜಿನ ಚೂರಿನಿಂದ ಕುತ್ತಿಗೆಗೆ ಇರಿದಿದ್ದಾನೆ. ಜಗಳ ಬಿಡಿಸಲು ಬಂದ ಬಸವರಾಜು ಅವರಿಗೂ ದೊಣ್ಣೆಯಿಂದ ಹಲ್ಲೆ ಮಾಡಿದ್ದಾನೆ. ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಕಾರು ಡಿಕ್ಕಿ: ಬೈಕ್ ಸವಾರ ಸಾವು

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಕಾರು ಡಿಕ್ಕಿಯಾಗಿ ಬೈಕ್ ಸವಾರ ಮೃತಪಟ್ಟು ಇಬ್ಬರು ಗಾಯಗೊಂಡಿರುವ ಘಟನೆ ತಾಲ್ಲೂಕಿನ ಗ್ಯಾರಹಳ್ಳಿ ಗೇಟ್ ಸಮೀಪ ನಡೆದಿದೆ.

ತಮಿಳುನಾಡು ಮೂಲದ ಸುರೇಶ್ ಮೃತರು. ಪಟ್ಟಣದ ಶಿವಮೂರ್ತಿ ಎಂಬುವವರ ಬೋರ್‌ವೆಲ್ ಲಾರಿ ಚಾಲಕನಾಗಿ ಸುರೇಶ್ ಒಂದು ತಿಂಗಳಿಂದ ಕೆಲಸ ಮಾಡುತ್ತಿದ್ದನು. ಗುರುವಾರ ಜಕ್ಕೇನಹಳ್ಳಿ ಗ್ರಾಮದಲ್ಲಿ ಬೋರ್‌ವೆಲ್ ಕೊರೆಯಲು ಹೋಗಿದ್ದರು. ಸಹೋದ್ಯೋಗಿಗಳಾದ ಸುಕುಮಾನ್ ಹಾಗು ದಿನೇಶ್ ಅವರೊಂದಿಗೆ ಬೈಕ್‌ನಲ್ಲಿ ಮೂಡನಹಳ್ಳಿಯಿಂದ ಜಕ್ಕೇನಹಳ್ಳಿಗೆ ಹೋಗುತ್ತಿದ್ದಾಗ ಎದುರುಗಡೆಯಿಂದ ವೇಗವಾಗಿ ಬಂದ ಕಾರು ಡಿಕ್ಕಿಯಾಗಿದೆ. ಅಪಘಾತದ ರಭಸಕ್ಕೆ ಮೂವರು ಬೈಕ್ ಸಮೇತ ಕೆಳಗೆ ಬಿದ್ದಿದ್ದಾರೆ. ತೀವ್ರ ರಕ್ತಸ್ರಾವವಾದ ಹಿನ್ನಲೆ ಸುರೇಶ್ ಅವರು ಆಸ್ಪತ್ರೆಗೆ ಸಾಗಿಸುವಾಗ ಮಾರ್ಗಮಧ್ಯೆ ಮೃತಪಟ್ಟಿದ್ದಾರೆ. ಉಳಿದ ಇಬ್ಬರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಚಿನ್ನಾಭರಣ ಕಳವು

• ಪ್ರಜೋದಯ ವರದಿ

**ಬೇಲೂರು:** ಮನೆಯಲ್ಲಿ ಯಾರೂ ಇಲ್ಲದಾಗ ಛಾವಣಿಯ ಹೆಂಚು ತೆಗೆದು ಪ್ರವೇಶಿಸಿರುವ ಕಳ್ಳರು ಬೀರುವಿನಲ್ಲಿಟ್ಟಿದ್ದ 20 ಗ್ರಾಂ ತೂಕದ ಚಿನ್ನಾಭರಣ ಕಳವು ಮಾಡಿರುವ ಘಟನೆ ಪಟ್ಟಣದಲ್ಲಿ ನಡೆದಿದೆ.

ಪಟ್ಟಣದ ಹುಣಸಿನಕೆರೆ ನಿವಾಸಿ ಮದರ್ ಸಾಬ್ ಎಂಬುವವರ ಮನೆಯಲ್ಲಿ ಗುರುವಾರ ಕಳ್ಳತನ ನಡೆದಿದೆ. ಹಾಸನದ ಹಿಮ್ಸ್‌ನಲ್ಲಿ ಚಿಕಿತ್ಸೆಗೆ ದಾಖಲಾಗಿದ್ದ ಮೊಮ್ಮಗನ ಯೋಗಕ್ಷೇಮ ವಿಚಾರಿಸಲೆಂದು ಮದರ್ ಸಾಬ್ ಬಂದಿದ್ದನ್ನು ಖಚಿತಪಡಿಸಿಕೊಂಡ ಕಳ್ಳರು ಮನೆ ಹಿಂಭಾಗದ ನಾಲ್ಕು ಹೆಂಚು ತೆಗೆದು ಬಂದಿದ್ದಾರೆ. ಹಾಸಿಗೆ ಕೆಳಗೆ ಇಟ್ಟಿದ್ದ ಕಬ್ಬಿಣದ ಬೀರುವಿನ ಕೀ ತೆಗೆದುಕೊಂಡು ಬೀರು ಬಾಗಿಲು ತೆರೆದು 20 ಗ್ರಾಂ ತೂಕದ ಚಿನ್ನದ ಎರಡು ಉಂಗುರ, ಚಿನ್ನದ ಕಿವಿ ಓಲೆ ಹಾಗು ನೆಕ್ಲೆಸ್, ಜಮೀನಿನ ದಾಖಲಾತಿ, ಮನೆಯ ಹಕ್ಕುಪತ್ರ ಕಳವು ಮಾಡಿದ್ದಾರೆ. ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಬ್ರಿಜ್‌ಭೂಷಣ್ ಖುಲಾಸೆ ಪ್ರಶ್ನಿಸಿ ಕುಸ್ತಿಪಟುಗಳ ಮೇಲ್ಮನವಿ

**ನವದೆಹಲಿ:** ಭಾರತ ಕುಸ್ತಿ ಒಕ್ಕೂಟದ (ಡಬ್ಲ್ಯುಎಫ್‌ಐ) ಮಾಜಿ ಅಧ್ಯಕ್ಷ ಬ್ರಿಜ್ ಭೂಷಣ್ ಸಿಂಗ್ ಅವರನ್ನು ಲೈಂಗಿಕ ಕಿರುಕುಳ ಆರೋಪದಿಂದ ಮುಕ್ತಗೊಳಿಸಿರುವ ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ಆದೇಶ ಪ್ರಶ್ನಿಸಿ, ನಾಲ್ವರು ಕುಸ್ತಿಪಟುಗಳು, ಮೇಲ್ಮನವಿ ಸಲ್ಲಿಸಿದ್ದಾರೆ.

ರೋಸ್ ಅವೆನ್ಯೂ ಕೋರ್ಟ್‌ನ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ಮುಂದೆ ಮೇಲ್ಮನವಿ ಸಲ್ಲಿಸಿರುವ ಅವರು, ಕ್ರಿಮಿನಲ್ ಬೆದರಿಕೆ ಆರೋಪದಿಂದ ಫೆಡರೇಶನ್‌ನ ಮಾಜಿ ಸಹಾಯಕ ಕಾರ್ಯದರ್ಶಿ ವಿನೋದ್ ತೋಮರ್ ಅವರನ್ನು ಖುಲಾಸೆಗೊಳಿಸಿರುವ ಆದೇಶವನ್ನೂ ಪ್ರಶ್ನಿಸಲಾಗಿದೆ.

# ಗಾರ್ಮೆಂಟ್ಸ್ ಕಾರ್ಮಿಕರ ಬೆಂಬಲಕ್ಕೆ ನಿಲ್ಲುವೆ

### ಕೇಂದ್ರದ ಗಮನಕ್ಕೆ ತರುವ ಭರವಸೆ : ಸಚಿವ ಕೆ.ಎಂ.ಶಿವಲಿಂಗೇಗೌಡ

• ಪ್ರಜೋದಯ ವರದಿ



**ಅರಸೀಕೆರೆ:** ಕೇಂದ್ರ ಸರ್ಕಾರದ ನೂತನ ಪಿ.ಎಫ್. ಕಾಯ್ದೆಯಿಂದ ಗಾರ್ಮೆಂಟ್ ಕಾರ್ಮಿಕರಿಗೆ ಉಂಟಾಗಿರುವ ಸಮಸ್ಯೆಗಳ ವಿರುದ್ಧ ನಗರದ ನೌಕರರು ನಡೆಸುತ್ತಿರುವ ಪ್ರತಿಭಟನೆಗೆ ನನ್ನ ಸಂಪೂರ್ಣ ಸಹಮತವಿದೆ. ಕಾಯ್ದೆಯ ಸಾಧಕ-ಬಾಧಕಗಳ ಕುರಿತು ಕೇಂದ್ರ ಸರ್ಕಾರದ ಗಮನ ಸೆಳೆದು ಸಮಸ್ಯೆ ಬಗೆಹರಿಸಲು ರಾಜ್ಯ ಸರ್ಕಾರ ಪ್ರಾಮಾಣಿಕ ಪ್ರಯತ್ನ ನಡೆಸಲಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ.ಶಿವಲಿಂಗೇಗೌಡ ಅವರು ಹೇಳಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ವೃತ್ತದಲ್ಲಿ ಶುಕ್ರವಾರ ಎರಡನೇ ದಿನವೂ ಅರವಿಂದ್ ಹಾಗು ಶಾಹಿ ಗಾರ್ಮೆಂಟ್ಸ್‌ನ ನೂರಾರು ಪುರುಷ ಮತ್ತು ಮಹಿಳಾ ನೌಕರರು ಮುಂದುವರಿಸಿದ ಪ್ರತಿಭಟನೆಯಲ್ಲಿ ಮನವಿ ಸ್ವೀಕರಿಸಿ ಮಾತನಾಡಿದ ಅವರು, ಅರಸೀಕೆರೆ ತಾಲ್ಲೂಕು ಬರ ಹಾಗು ನಿರುದ್ಯೋಗದ ಸಮಸ್ಯೆಯಿಂದ ಬಳಲುತ್ತಿದ್ದ ಸಂದರ್ಭದಲ್ಲಿ ಉದ್ಯೋಗ ಅರಸಿ ಬೆಂಗಳೂರಿಗೆ ವಲಸೆ ಹೋಗುತ್ತಿದ್ದ ಸಾವಿರಾರು ಯುವಜನರಿಗೆ ಸ್ಥಳೀಯವಾಗಿಯೇ ಉದ್ಯೋಗ ದೊರೆಯುವಂತೆ ಗಾರ್ಮೆಂಟ್‌ಗಳನ್ನು ಸ್ಥಾಪಿಸಿರುವುದು ಮಹತ್ವದ ಬೆಳವಣಿಗೆಯಾಗಿದೆ. ಅರವಿಂದ್ ಹಾಗು ಶಾಹಿ ಗಾರ್ಮೆಂಟ್ಸ್ ಆಡಳಿತ ಮಂಡಳಿಗಳು ಕಾಳಜಿ ವಹಿಸಿ ಕೈಗಾರಿಕೆ ಸ್ಥಾಪಿಸುವ ಮೂಲಕ ನಗರ ಮತ್ತು ಗ್ರಾಮೀಣ ಭಾಗದ ಜನರಿಗೂ ಉದ್ಯೋಗ ಕಲ್ಪಿಸಿವೆ ಎಂದರು.

ಕಾರ್ಮಿಕರ ಭವಿಷ್ಯ ನಿಧಿ ಸೇರಿ ಕಾರ್ಮಿಕ ಕಾಯ್ದೆಗಳಿಗೆ ಸಂಬಂಧಿಸಿದಂತೆ ಸರ್ಕಾರ ಹಾಗು ಕಂಪನಿಗಳ ಪಾತ್ರವಿದೆ. ಈ ಹಿನ್ನೆಲೆ ರೂಪುಗೊಂಡಿರುವ ನೂತನ ಪಿಎಫ್ ಕಾಯ್ದೆಯಿಂದ ಕಾರ್ಮಿಕರಿಗೆ ಉಂಟಾಗಿರುವ ಸಮಸ್ಯೆಗಳ ಬಗ್ಗೆ ಗಮನ ಹರಿಸುವ ಅಗತ್ಯವಿದೆ. ಕಾಯ್ದೆಯಿಂದ ಉಂಟಾಗಿರುವ ಅವ್ಯವಸ್ಥೆ ವಿರುದ್ಧ ಕಾರ್ಮಿಕರ ಹೋರಾಟದಲ್ಲಿ ತಾವು ಕೈಜೋಡಿಸುವುದಾಗಿ ಸಚಿವರು ಭರವಸೆ ನೀಡಿದರು.

ಸಚಿವನಾಗಿ ತಮ್ಮ ಕ್ಷೇತ್ರದ ಕಾರ್ಮಿಕರ ಉದ್ಯೋಗ, ಭದ್ರತೆ ಹಾಗು ಭವಿಷ್ಯದ ಬಗ್ಗೆ ಕಾಳಜಿ ವಹಿಸುವುದು ತಮ್ಮ ಕರ್ತವ್ಯ. ಈ ಬಗ್ಗೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದ ರಾಜ್ಯ ಸರ್ಕಾರದ ಮೂಲಕ ಕೇಂದ್ರ ಸರ್ಕಾರವನ್ನು ಸಂಪರ್ಕಿಸಿ ಕಾರ್ಮಿಕರ ಸಮಸ್ಯೆಗಳನ್ನು ಪರಿಹರಿಸಲು ಕ್ರಮ ಕೈಗೊಳ್ಳಲಾಗುವುದು. ಭಾರತೀಯ ಗಾರ್ಮೆಂಟ್ ಉದ್ಯಮ ಇಂದು ವಿಶ್ವ ದಾದ್ಯಂತ ತನ್ನದೇ ಆದ ಮಾರುಕಟ್ಟೆ ಹೊಂದಿದೆ. ಈ ಉದ್ಯಮದ ಬೆಳವಣಿಗೆಯಲ್ಲಿ ಕಾರ್ಮಿಕರ ಪಾತ್ರ ಪ್ರಮುಖವಾಗಿದೆ. ಕಾರ್ಮಿಕರ ಸಮಸ್ಯೆಗಳನ್ನು ನೇರವಾಗಿ ಆಲಿಸುವ ಸಲುವಾಗಿ ರಾಜ್ಯ ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರನ್ನು ಅರಸೀಕೆರೆಗೆ ಆಹ್ವಾನಿಸಿ ಸಭೆ ನಡೆಸಲಾಗುವುದು ಎಂದು ತಿಳಿಸಿದರು.

ಅರಸೀಕೆರೆ ತಾಲ್ಲೂಕಿನ ಜನತೆ ಜಿಲ್ಲೆಯಲ್ಲಿ ಹೆಚ್ಚಿನ ಪ್ರಮಾಣದ ತೆರಿಗೆ ಪಾವತಿಸುತ್ತಿದ್ದಾರೆ. ಗಾರ್ಮೆಂಟ್ ಕಾರ್ಮಿಕರ ಭವಿಷ್ಯ ನಿಧಿಗೆ ಸಂಬಂಧಿಸಿದಂತೆ ಉಂಟಾಗಿರುವ ಸಮಸ್ಯೆ ಹಾಗೂ ಅನ್ಯಾಯವನ್ನು ಸರಿಪಡಿಸಲು ಪ್ರಾಮಾಣಿಕ ಪ್ರಯತ್ನ ನಡೆಸುವುದಾಗಿ ಹೇಳಿದರು. ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಶ್ರೀನಿಧಿ ಅವರ ನೇತೃತ್ವದಲ್ಲಿ ಬಿಗಿ ಪೊಲೀಸ್ ವ್ಯವಸ್ಥೆ ಕಲ್ಪಿಸಲಾಗಿತ್ತು.

**ರಸ್ತೆ ತಡೆ: ಸಂಚಾರ ಅಸ್ತವ್ಯಸ್ತ**

ನೂತನ ಪಿ.ಎಫ್. ಕಾಯ್ದೆ ವಿರೋಧಿಸಿ ಅರವಿಂದ್ ಹಾಗು ಶಾಹಿ ಗಾರ್ಮೆಂಟ್ಸ್‌ನ ನೂರಾರು ಕಾರ್ಮಿಕರು ನಗರದ ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆ ವೃತ್ತದಲ್ಲಿ ಜಮಾಯಿಸಿ ಪ್ರತಿಭಟನೆ ನಡೆಸಿದರು. ನಾಲ್ಕು ದಿಕ್ಕುಗಳಿಂದ ಆಗಮಿಸುತ್ತಿದ್ದ ವಾಹನಗಳನ್ನು ತಡೆದು ನಾಲ್ಕು ಗಂಟೆಗಳ ಕಾಲ ರಸ್ತೆ ತಡೆ ನಡೆಸಿದರು. ಈ ವೇಳೆ ಕೇಂದ್ರ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದ ಪ್ರತಿಭಟನಾಕಾರರು, ನೂತನ ಪಿಎಫ್ ಕಾಯ್ದೆಯಿಂದ ಕಾರ್ಮಿಕರಿಗೆ ಆಗಿರುವ ಸಮಸ್ಯೆಗಳನ್ನು ಕೂಡಲೇ ಪರಿಹರಿಸುವಂತೆ ಒತ್ತಾಯಿಸಿದರು.

## ಸಕಲೇಶಪುರ ತಾಲ್ಲೂಕನ್ನು ಬರಪೀಡಿತ ಪಟ್ಟಿಗೆ ಸೇರಿಸಲು ಒತ್ತಾಯ

• ಪ್ರಜೋದಯ ವರದಿ



**ಸಕಲೇಶಪುರ:** ಮಳೆ ಕೊರತೆಯಿಂದ ತಾಲ್ಲೂಕಿನ ರೈತರು ಸಂಕಷ್ಟ ಎದುರಿಸುತ್ತಿದ್ದು, ರೈತರ ಹಿತದೃಷ್ಟಿಯಿಂದ ಸಕಲೇಶಪುರವನ್ನು ಬರಪೀಡಿತ ತಾಲ್ಲೂಕುಗಳ ಪಟ್ಟಿಗೆ ಸೇರಿಸುವಂತೆ ವಿಶೇಷ ಅಧಿವೇಶನದಲ್ಲಿ ಸರ್ಕಾರವನ್ನು ಒತ್ತಾಯಿಸಲಾಗಿದೆ ಎಂದು ಶಾಸಕ ಸಿಮೆಂಟ್ ಮಂಜು ಅವರು ಹೇಳಿದರು.

ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘದ 202526ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಮಾತನಾಡಿದ ಅವರು, ರೈತರ ಹಿತಾಸಕ್ತಿಗೆ ಆದ್ಯತೆ ನೀಡುವ ಮೂಲಕ ಸಹಕಾರ ಸಂಘವನ್ನು ಮತ್ತಷ್ಟು ಬಲಪಡಿಸಬೇಕು. ಹೆಚ್ಚಿನ ಸಂಖ್ಯೆಯಲ್ಲಿ ರೈತರು ಸಂಘದ ಸದಸ್ಯರಾಗಿ, ಸಂಘದ ಮೂಲಕವೇ ತಮ್ಮ ವ್ಯವಹಾರ ನಡೆಸುವ ಮೂಲಕ ಸಂಸ್ಥೆಯ ಅಭಿವೃದ್ಧಿಗೆ ಸಹಕರಿಸಬೇಕೆಂದರು.

ಅಧ್ಯಕ್ಷತೆ ವಹಿಸಿದ್ದ ಸಂಘದ ಅಧ್ಯಕ್ಷ ಯು.ಪಿ.ಶಶಿಕುಮಾರ್ ಕಿರುವಾಲೆ ಅವರು ಮಾತನಾಡಿ, ಸಂಪೂರ್ಣ ಸಹಕಾರ ದೊರೆತರೆ ತಾಲ್ಲೂಕಿಗೆ ಮಾದರಿಯಾಗುವ ರೈತ ಭವನ ನಿರ್ಮಿಸಲು ಕ್ರಮ ವಹಿಸಲಾಗುವುದು. ಎಲ್ಲಾ ನಿರ್ದೇಶಕರ ಸಹಕಾರದಿಂದ ಸಂಘವನ್ನು ಲಾಭದತ್ತ ಕೊಂಡೊಯ್ಯಲಾಗುತ್ತಿದ್ದು, ಮುಂದೆಯೂ ಸದಸ್ಯರ ಸಹಕಾರ ಅಗತ್ಯವೆಂದರು.

ರೈತ ಭವನದಲ್ಲಿ ಹೊಸ ಸಭಾಂಗಣ ನಿರ್ಮಿಸುವ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು. ಸಂಘ ಗಳಿಸುವ ಲಾಭವನ್ನು ಸಂಸ್ಥೆಯ ಅಭಿವೃದ್ಧಿಗೆ ಸಮರ್ಪಕವಾಗಿ ಬಳಸಿಕೊಳ್ಳಲಾಗುವುದು. ಸಂಘದ ಅಭಿವೃದ್ಧಿಗೆ ಸದಸ್ಯರು ಸಹಕಾರ ನೀಡಬೇಕೆಂದು ಮನವಿ ಮಾಡಿದರು.

**6.19 ಲ.ರೂ. ನಿವ್ವಳ ಲಾಭ**

ಸಂಘವು 202526ನೇ ಸಾಲಿನಲ್ಲಿ ಸುಮಾರು 10.84 ಕೋ.ರೂ. ವಹಿವಾಟು ನಡೆಸಿದ್ದು, ಆಹಾರ ಪದಾರ್ಥ, ರಸಗೊಬ್ಬರ ಹಾಗು ಕ್ರಿಮಿನಾಶಕಗಳನ್ನು ರೈತರು ಮತ್ತು ಗ್ರಾಹಕರಿಗೆ ಪೂರೈಸಿದೆ. 33.40 ಲ.ರೂ. ವ್ಯಾಪಾರ ಲಾಭ ಗಳಿಸಿದ್ದು, ಸವಕಳಿ ಹಾಗು ಇತರೆ ವೆಚ್ಚಗಳಿಗೆ 6.48 ಲ.ರೂ. ಕಾಯ್ದಿರಿಸಿದ ಬಳಿಕ 6.19 ಲ.ರೂ. ನಿವ್ವಳ ಲಾಭ ಗಳಿಸಿದೆ ಎಂದು ಸಭೆಯಲ್ಲಿ ತಿಳಿಸಲಾಯಿತು.

ಸಂಘವು 2.02 ಕೋ.ರೂ.ಗೂ ಅಧಿಕ ಸ್ಥಿರ ಮತ್ತು ಚರಾಸ್ತಿ ಹೊಂದಿದ್ದು, ಸರ್ಕಾರದಿಂದ ಯಾವುದೇ ಸಾಲ ಪಡೆದಿಲ್ಲ. ಸಂಘದಿಂದ 17.24 ಲ.ರೂ. ಪಿಗ್ಮಿ ಸಾಲ ನೀಡಲಾಗಿದೆ. 2025-26ನೇ ಸಾಲಿನ ಆಡಳಿತ ವರದಿ ಹಾಗೂ ಲೆಕ್ಕಪತ್ರಗಳನ್ನು ಮಂಡಿಸಿ ಅಂಗೀಕರಿಸಲಾಯಿತು. 2026-27ನೇ ಸಾಲಿನ ಅಂದಾಜು ಬಜೆಟ್‌ಗೂ ಸಭೆ ಅನುಮೋದನೆ ನೀಡಿತು.

ಉಪಾಧ್ಯಕ್ಷ ಹೆಚ್.ಜೆ.ಉಮೇಶ್, ನಿರ್ದೇಶಕರಾದ ಜೆ.ಡಿ.ಪುಟ್ಟಸ್ವಾಮಿಗೌಡ, ಕೆ.ಕೆ.ರಾಮಚಂದ್ರ, ಐ.ಡಿ. ಚನ್ನಮಲ್ಲಿಕಾರ್ಜುನ, ಜೆ.ಎನ್. ಚಂದ್ರಶೇಖರ್, ಎಸ್.ಕೆ.ಸೂರ್ಯ, ಎ.ಆರ್.ರವಿಕುಮಾರ್, ಗೀತಾ ಮಲ್ಲಿಕಾರ್ಜುನ, ಚೈತ್ರ ನವೀನ್, ಹರೀಶ್ ನಾಯಕ, ಆನಂದ, ಕೆ.ಡಿ.ಮಂಜುನಾಥ್ ಇತರರಿದ್ದರು.

## ಮತದಾರರ ಪಟ್ಟಿ ಪರಿಷ್ಕರಣೆ: ನೋಟೀಸ್ ಜಾರಿಯಾದವರು ವಿಚಾರಣೆಗೆ ಹಾಜರಾಗಿ



• ಪ್ರಜೋದಯ ವರದಿ

**ಹಾಸನ:** ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯ ನಡೆಯುತ್ತಿದ್ದು, ನೋಟೀಸ್ ಜಾರಿಯಾದವರು ವಿಚಾರಣೆಗೆ ಹಾಜರಾಗಿ ಸಹಕರಿಸುವಂತೆ ಅಪರ ಜಿಲ್ಲಾಧಿಕಾರಿ ಕೃಷ್ಣಮೂರ್ತಿ ಅವರು ತಿಳಿಸಿದ್ದಾರೆ.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳೊಂದಿಗೆ ಸಭೆ ನಡೆಸಿ ಮಾತನಾಡಿದ ಅವರು, ವಿಚಾರಣೆಗಾಗಿ ನಿಗದಿಪಡಿಸಿದ ಸಮಯದಲ್ಲಿ ಕೆಲವರು ಹಾಜರಾಗಿರುವುದಿಲ್ಲ ಅಂತಹವರಿಗೆ ಪುನಃ ಸಮಯ ನಿಗದಿಪಡಿಸಿದ್ದಾರೆ. ಮತದಾರರ ಪಟ್ಟಿಯಿಂದ ಹೆಸರು ಕೈಬಿಟ್ಟು ಹೋಗದಂತೆ ನೋಡಿಕೊಳ್ಳಬೇಕು. ಈ ನಿಟ್ಟಿನಲ್ಲಿ ಮತಗಟ್ಟೆ ಏಜೆಂಟ್‌ಗಳು ನೋಟೀಸ್ ಜಾರಿಯಾಗಿರುವವರಿಗೆ ಅಗತ್ಯ ದಾಖಲೆಗಳೊಂದಿಗೆ ವಿಚಾರಣೆಗೆ ಹಾಜರಾಗುವಂತೆ ತಿಳಿಸುವ ಮೂಲಕ ಸಹಕರಿಸಬೇಕೆಂದು ತಿಳಿಸಿದರು.

ಜೂನ್ 30 ರಿಂದ ಆ.17ರ ವರೆಗೆ ಮತಗಟ್ಟೆ ಅಧಿಕಾರಿಗಳು ಮನೆ ಮನೆಗೆ ಭೇಟಿ ನೀಡುವ ಅವಧಿಯಲ್ಲಿ ಯಾವುದೇ ಮ್ಯಾಪಿಂಗ್ ಇಲ್ಲದೆ ಗಣತಿ ನಮೂನೆಗಳನ್ನು ಭರ್ತಿ ಮಾಡಿ ಸಲ್ಲಿಸಿರುವ 23,641 ಮತದಾರರಿಗೆ ಹಾಗೂ ಮತದಾರರ ಪಟ್ಟಿಯಲ್ಲಿ ವ್ಯತ್ಯಾಸಗಳಿರುವ 56,137 ಮತದಾರರು ಸೇರಿ ಒಟ್ಟು 79,778 ಮತದಾರರಿಗೆ ಆಯಾ ವಿಧಾನಸಭಾ ಕ್ಷೇತ್ರಗಳ ಮತ ದಾರರ ನೋಂದಣಾಧಿಕಾರಿಗಳು ಆ.24 ರಿಂದ ನೋಟೀಸ್ ನೀಡಿ ವಿಚಾರಣೆ ನಡೆಸಿ ತೀರುವಳಿಗೆ ಕ್ರಮಕೈಗೊಂಡಿದ್ದಾರೆ ಎಂದು ತಿಳಿಸಿದರು.

ಸ್ವೀಕರಿಸಲಾದ ಎಲ್ಲಾ ಹಕ್ಕು ಮತ್ತು ಆಕ್ಷೇಪಣೆಗಳನ್ನು ಅ.22 ರೊಳಗೆ ಪರಿಶೀಲಿಸಿ ನಿಯಮಾನುಸಾರ ಭಾರತ ಚುನಾವಣಾ ಆಯೋಗವು ನಿಗದಿಪಡಿಸಿರುವ ಮಾರ್ಗಸೂಚಿ ಅನ್ವಯ ಅ.27 ರಂದು ಅಂತಿಮ ಮತದಾರರ ಪಟ್ಟಿಯನ್ನು ಪ್ರಕಟಿಸಲಾಗುವುದೆಂದು ತಿಳಿಸಿದರು.

ಸಭೆಯಲ್ಲಿ ಚುನಾವಣಾ ಶಾಖೆ ತಹಶೀಲ್ದಾರ್ ಹಾಗೂ ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

## ದೊಡ್ಡ ಆಲೋಚನೆಗಳೇ ಭವಿಷ್ಯ ರೂಪಿಸುತ್ತವೆ

• ಪ್ರಜೋದಯ ವರದಿ




**ಹಾಸನ:** ವಿದ್ಯಾರ್ಥಿಗಳ ಆಲೋಚನೆಗಳೇ ಅವರ ಭವಿಷ್ಯವನ್ನು ರೂಪಿಸುವ ಶಕ್ತಿಯನ್ನು ಹೊಂದಿದ್ದು, ಜೀವನದಲ್ಲಿ ಉನ್ನತ ಗುರಿ ಸಾಧಿಸಲು ದೊಡ್ಡ ಆಲೋಚನೆಗಳನ್ನು ಬೆಳೆಸಿಕೊಳ್ಳಬೇಕೆಂದು ತುಮಕೂರಿನ ಶ್ರೀ ರಾಮಕೃಷ್ಣ ವಿವೇಕಾನಂದ ಆಶ್ರಮದ ಅಧ್ಯಕ್ಷ ವೀರೇಶಾನಂದ ಸರಸ್ವತಿ ಸ್ವಾಮೀಜಿ ಹೇಳಿದರು.

ನಗರದ ಹೊರವಲಯದಲ್ಲಿರುವ ನವಕೀಸ್ ಇಂಜಿನೀಯರಿಂಗ್ ಕಾಲೇಜಿನಲ್ಲಿ ಶುಕ್ರವಾರ ಆಯೋಜಿಸಿದ್ದ ಓರಿಯಂಟೇಷನ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳಲ್ಲಿ ಉತ್ಸಾಹ, ಸ್ವಾವಲಂಬನೆ, ಶಕ್ತಿ, ಬುದ್ಧಿವಂತಿಕೆ ಹಾಗು ಅವಕಾಶಗಳಿವೆ. ಆದರೆ ಅವುಗಳನ್ನು ಸರಿಯಾದ ರೀತಿಯಲ್ಲಿ ಬಳಸಿಕೊಳ್ಳಲು ವಿವೇಕ ಅಗತ್ಯ. ಈ ನಿಟ್ಟಿನಲ್ಲಿ ಓರಿಯಂಟೇಷನ್ ಕಾರ್ಯಕ್ರಮಗಳು ಮಹತ್ವದ ಪಾತ್ರ ವಹಿಸುತ್ತವೆಂದರು.

ಜೀವನದಲ್ಲಿ ಯಾವುದೂ ಪೂರ್ವ ನಿರ್ಧಾರಿತವಲ್ಲ. ಯಾರೂ ನಿರ್ದಿಷ್ಟ ಜಾತಿ, ಕುಟುಂಬ ಅಥವಾ ಪರಿಸ್ಥಿತಿಯಲ್ಲಿ ಹುಟ್ಟಬೇಕೆಂದು ಅರ್ಜಿ ಸಲ್ಲಿಸಿ ಹುಟ್ಟುವುದಿಲ್ಲ. ಆದರೆ ಇಂದು ನಾವು ಹೇಗೆ ಬದುಕುತ್ತೇವೆ, ಯಾವ ನಿರ್ಧಾರಗಳನ್ನು ತೆಗೆದುಕೊಳ್ಳುತ್ತೇವೆಂಬುದೇ ನಾಳಿನ ಭವಿಷ್ಯವನ್ನು ನಿರ್ಧರಿಸುತ್ತದೆ. ಹೀಗಾಗಿ ಪ್ರತಿಯೊಬ್ಬರೂ ತಮ್ಮ ಆಲೋಚನೆಗಳು ಹಾಗು ನಡೆ- ನುಡಿಗಳ ಬಗ್ಗೆ ಸದಾ ಎಚ್ಚರಿಕೆಯಿಂದ ಇರಬೇಕೆಂದರು.

ಬಡತನ ಶಾಪವೂ ಅಲ್ಲ, ಶ್ರೀಮಂತಿಕೆ ವರವೂ ಅಲ್ಲ. ವ್ಯಕ್ತಿಯ ಸಾಧನೆಗೆ ಆತನ ಚಿಂತನೆ, ಶಿಸ್ತು ಮತ್ತು ಸ್ವಯಂ ನಿಯಂತ್ರಣವೇ ಮುಖ್ಯ. ತಮ್ಮನ್ನು ತಾವು ಹತೋಟಿಯಲ್ಲಿ ಇಟ್ಟುಕೊಳ್ಳದೆ ಹೋದರೆ ಜೀವನದಲ್ಲಿ ದಾರಿ ತಪ್ಪುವ ಸಾಧ್ಯತೆ ಇದೆ. ಆದ್ದರಿಂದ ವಿದ್ಯಾರ್ಥಿಗಳು ಶಕ್ತಿ ಹಾಗು ಸಾಮರ್ಥ್ಯವನ್ನು ಸಕಾರಾತ್ಮಕವಾಗಿ ಬಳಸಿಕೊಂಡು ಗುರಿಯತ್ತ ಸಾಗಬೇಕೆಂದು ಸಲಹೆ ನೀಡಿದರು.

ಬೆಂಗಳೂರಿನ ಇಎಸ್‌ಎಸ್, ಸಿಇಇ ಪ್ರಿಂಟ್ ಪ್ಯಾಕ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಕೆ.ಆರ್.ಚಂದ್ರಶೇಖರ್, ಪ್ರಾಂಶುಪಾಲ ಡಾ.ಎಂ.ಕೆ.ಸಂಜಯ್ ಪಾಂಡೆ, ಪ್ರಾಧ್ಯಾಪಕರು ಹಾಗು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಬೂತ್ ಮಟ್ಟದಿಂದ ಜೆಡಿಎಸ್ ಸದೃಢಗೊಳಿಸುವ ಸಂಕಲ್ಪ

» ಮೊದಲನೇ ಪುಟದಿಂದ

ಕೊಂಡಿದೆ. ಜಿಲ್ಲಾ ಮಟ್ಟದಲ್ಲೂ ಅದೇ ವಾತಾವರಣ ಸೃಷ್ಟಿಯಾಗಬೇಕು. ಈ ನಿಟ್ಟಿನಲ್ಲಿ ಮುಂದಿನ ದಿನಗಳಲ್ಲಿ ಚರ್ಚಿಸಿ ತೀರ್ಮಾನ ಕೈಗೊಳ್ಳಲಾಗುವುದೆಂದು ಹೇಳಿದರು.

ನೂತನ ಜಿಲ್ಲಾಧ್ಯಕ್ಷ ನಟರಾಜ್ ಐಸಾಮಿಗೌಡ ಅವರು ಮಾತನಾಡಿ, ಜಿಲ್ಲೆಯ ಹಿರಿಯರ ಸಹಕಾರದಿಂದ ಅವಕಾಶ ಸಿಕ್ಕಿದೆ. ಪಕ್ಷ ಕೊಟ್ಟಿರುವ ಜವಾಬ್ದಾರಿ ಸಮರ್ಥವಾಗಿ ನಿಬಾಯಿಸುತ್ತೇನೆಂದು ವಿಶ್ವಾಸ ವ್ಯಕ್ತಪಡಿಸಿದರು.

ಜಿಲ್ಲಾ ಕಾರ್ಯದರ್ಶಿ ಕ್ರಾಂತಿ ಅವರು ಮಾತನಾಡಿ, ಪಕ್ಷದ ವರಿಷ್ಟ ಹೆಚ್.ಡಿ. ದೇವೇಗೌಡರು, ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ, ಹೆಚ್.ಡಿ.ರೇವಣ್ಣ, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯೆ ಭವಾನಿ ರೇವಣ್ಣ, ಶಾಸಕರಾದ ಹೆಚ್.ಪಿ.ಸ್ವರೂಪ್, ಎ.ಮಂಜು, ಹೆಚ್.ಸಿ.ಬಾಲಕೃಷ್ಣ ಎಲ್ಲರೂ ಸೇರಿ ಹೊಸ ಸಮಿತಿ ರಚಿಸಿದ್ದಾರೆ. ಅವರಿಗೆ ಕೃತಜ್ಞತೆ ಸಲ್ಲಿಸುತ್ತೇನೆ. ನಮ್ಮ ತಂಡವನ್ನು ನಂಬಿ ಹೆಚ್.ಡಿ.ರೇವಣ್ಣ ಅವರು ಪಕ್ಷ ಸಂಘಟಿಸಲು ಸೂಚಿಸಿದ್ದಾರೆ. ನಾವು ಸಹ ಪಕ್ಷದ ಕಾರ್ಯಕರ್ತರಾಗಿ ದುಡಿಯುತ್ತೇವೆ. ಒಗ್ಗಟ್ಟಿನಿಂದ ಪ್ರಾಮಾಣಿಕ ಕೆಲಸ ಮಾಡುತ್ತೇವೆ. ತಾಯಿಯನ್ನು ಗೌರವಿಸಿದಂತೆ ಪಕ್ಷವನ್ನು ಕಾಣುತ್ತೇವೆಂದರು.

ಜೆಡಿಎಸ್ ಜಿಲ್ಲಾ ಕಾರ್ಯದರ್ಶಿ ಹೆಚ್.ಎಲ್. ರಾಮಚಂದ್ರ, ತಾಲ್ಲೂಕು ಅಧ್ಯಕ್ಷ ಎಸ್.ದ್ಯಾವೇಗೌಡ, ಮಾಧ್ಯಮ ವಕ್ತಾರ ರಘು ಹೊಂಗೆರೆ ಇದ್ದರು.

## ಮನೆ ಮುಂದಿನ ರಸ್ತೆಯಲ್ಲಿ ಶವ ತೆಗೆದುಕೊಂಡು ಹೋಗದಂತೆ ತಡೆ

» ಮೊದಲನೇ ಪುಟದಿಂದ

ರಸ್ತೆಯಲ್ಲಿ ಮೃತದೇಹವನ್ನು ಸಾಗಿಸಲು ಯಾರೂ ಅಡ್ಡಿಪಡಿಸಬಾರದೆಂದರು.

ಸ್ಮಶಾನಕ್ಕೆ ತೆರಳುವ ರಸ್ತೆ ಸಂಪೂರ್ಣವಾಗಿ ಅಭಿವೃದ್ಧಿಯಾಗದಿರುವುದರಿಂದ ಸಮಸ್ಯೆ ಉಂಟಾಗಿದೆ. ವಿಜಿ-ಬಿ ರಾಮ್‌ಜಿ ಯೋಜನೆಯಡಿ ರಸ್ತೆಯನ್ನು ಅಭಿವೃದ್ಧಿಪಡಿಸಿ ಸ್ಮಶಾನದ ವರೆಗೆ ಸುಗಮ ಸಂಪರ್ಕ ಕಲ್ಪಿಸಲಾಗುವುದೆಂದು ತಹಶೀಲ್ದಾರ್ ತಿಳಿಸಿದರು. ಮುಂದಿನ ದಿನಗಳಲ್ಲಿ ಇದೇ ರಸ್ತೆಯಲ್ಲಿ ಮೃತದೇಹಗಳನ್ನು ಸ್ಮಶಾನಕ್ಕೆ ಕೊಂಡೊಯ್ಯಲು ಅಡ್ಡಿಪಡಿಸಬಾರದೆಂದು ಗ್ರಾಮಸ್ಥರಿಗೆ ಸೂಚಿಸಿದರು.

**ಜಮೀನು ದುರಸ್ತಿ ಕುರಿತು ಮನವಿ**

ಇದೇ ಸಂದರ್ಭದಲ್ಲಿ ಗ್ರಾಮಸ್ಥರು ಸರ್ವೆ ನಂಬರ್ 28ರಲ್ಲಿರುವ ಜಮೀನುಗಳ ದಾಖಲೆಗಳನ್ನು ದುರಸ್ತಿ ಮಾಡಿಕೊಡಬೇಕೆಂದು ತಹಶೀಲ್ದಾರ್‌ಗೆ ಮನವಿ ಮಾಡಿದರು.

ಅದಕ್ಕೆ ಪ್ರತಿಕ್ರಿಯಿಸಿದ ತಹಶೀಲ್ದಾರ್ ಸೌಮ್ಯ ಅವರು, ಈ ಪ್ರದೇಶದಲ್ಲಿ 9 ಜನರಿಗೆ ಜಮೀನು ಮಂಜೂರಾಗಿದ್ದು, ದಾಖಲಾತಿಗಳ ಕೊರತೆಯಿಂದ ದುರಸ್ತಿ ಕಾರ್ಯ ಪೂರ್ಣಗೊಂಡಿಲ್ಲ.ದರಖಾಸ್ತು ಪೋಡಿ ಆಂದೋಲನದ ಮೂಲಕ ದಾಖಲೆಗಳನ್ನು ಪರಿಶೀಲಿಸಿ ಅಗತ್ಯ ಕ್ರಮ ಕೈಗೊಂಡು ಸಮಸ್ಯೆ ಪರಿಹರಿಸಲಾಗುವುದೆಂದು ಭರವಸೆ ನೀಡಿದರು.

ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ವಿಜಯಕುಮಾರ್ ಅವರು ಮಾತನಾಡಿ, ಮೂಢನಂಬಿಕೆಯ ಕಾರಣದಿಂದ ಕೆಲವರು ಈ ರಸ್ತೆಯಲ್ಲಿ ಶವವನ್ನು ಕೊಂಡೊಯ್ಯಬಾರದೆಂದು ವಿರೋಧ ವ್ಯಕ್ತಪಡಿಸಿದ್ದಾರೆ. ಈ ರಸ್ತೆಯ ಬದಲಾಗಿ ಬೇರೆ ರಸ್ತೆಯನ್ನು ನಿರ್ಮಿಸಿಕೊಂಡು ಅದರ ಮೂಲಕವೇ ಶವಗಳನ್ನು ಸ್ಮಶಾನಕ್ಕೆ ಕೊಂಡೊಯ್ಯಬೇಕೆಂಬುದು ಅವರ ಒತ್ತಾಯವಾಗಿದೆ ಎಂದು ತಿಳಿಸಿದರು.



## ದೇಶದ ಗಡಿ ಕಾಯುವ ಸೈನಿಕನಿಗೆ ಜಿಲ್ಲೆಯ ಕ್ಷೀರಾಮೃತ



• ಪ್ರಜೋದಯ ವರದಿ

**ಬೇಲೂರು:** ಹಾಸನ ಹಾಲು ಒಕ್ಕೂಟದಿಂದ ನಿತ್ಯ ಸರಾಸರಿ 16 ಲಕ್ಷ ಲೀಟರ್ ಹಾಲು ಉತ್ಪಾದಕರಿಂದ ಬರುತ್ತಿದೆ. ಅದರಲ್ಲಿ 4 ಲಕ್ಷ ಲೀಟರ್ ಹಾಲು ದೇಶದ ಗಡಿ ಕಾಯುತ್ತಿರುವ ಸೈನಿಕರಿಗೆ ಪೂರೈಕೆಯಾಗುತ್ತಿದೆಂದು ಹಾಮೂಲ್ ಸಹಾಯಕ ವ್ಯವಸ್ಥಾಪಕ ಎಸ್.ಬಿ.ದಿನೇಶ್ ಅವರು ಹೇಳಿದರು.

ತಾಲ್ಲೂಕಿನ ಹೆಬ್ಬಾಳು ಹಾಲು ಉತ್ಪಾದಕರ ಸಹಕಾರ ಸಂಘದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಮಾತನಾಡಿದ ಅವರು, ಜಿಲ್ಲೆಯಲ್ಲಿ ಹೈನುಗಾರಿಕೆ ಬೆಳೆಯಲು ಮಾಜಿ ಸಚಿವ ಹೆಚ್.ಡಿ. ರೇವಣ್ಣ ಅವರ ಕಾರ್ಯಕ್ಷಮತೆ ಕಾರಣ. ಸದ್ಯ ರಾಜ್ಯದಲ್ಲಿ ಬರ ಪರಿಸ್ಥಿತಿಯಿಂದ ರೈತರು ತತ್ತರಿಸಿದ್ದು ಅವರಿಗೆ ಬೆಂಬಲ ನೀಡುವ ಮೂಲಕ ಆರ್ಥಿಕ ಸಬಲೀಕರಣಕ್ಕೆ ಮುನ್ನುಡಿ ಬರೆಯಬೇಕೆಂದು ಹೆಚ್.ಡಿ.ರೇವಣ್ಣ ಅವರು ಹೈನುಗಾರಿಕೆ ಸಾಲ ವಿತರಣೆಗೆ ಮುಂದಾಗಿದ್ದಾರೆಂದರು.

ಹಾಸನ ಒಕ್ಕೂಟ, ಚಿಕ್ಕಮಗಳೂರು-ಕೊಡಗು ಮತ್ತು ಹಾಸನ ಜಿಲ್ಲೆಯನ್ನು ಒಳಗೊಂಡಿದೆ. ಬೇಲೂರು ತಾಲ್ಲೂಕು ಕೂಡ ಹೈನುಗಾರಿಕೆಯ ಹಾಲಿನ ಉತ್ಪಾದನೆಯಲ್ಲಿ ಉತ್ತಮ ಹೆಸರು ಪಡೆದಿದೆ. ಇಲ್ಲಿನ 137 ಸಹಕಾರ ಸಂಘಗಳಲ್ಲಿ 37 ಸಂಘ ಬಿಎಂಸಿ ಹೊಂದಿದೆ. ರೈತರಿಗೆ ಇನ್ನಷ್ಟು ಹಾಲಿನ ದರವನ್ನು ಹೆಚ್ಚಿಸಬೇಕೆಂದು 78 ಎಕರೆಯಲ್ಲಿ ಸಾವಿರ ಕೋಟಿ ರೂ. ವೆಚ್ಚದಲ್ಲಿ ಮೆಘಾ ಡೇರಿ ಆರಂಭವಾಗುತ್ತಿದ್ದು ಇನ್ನು ಎರಡು ತಿಂಗಳಲ್ಲಿ ಲೋಕಾರ್ಪಣೆಯಾಗಲಿದೆ ಎಂದರು.

ಹೆಬ್ಬಾಳು ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ವೇದಮೂರ್ತಿ ಅವರು ಮಾತನಾಡಿ, ಬರಪರಿಸ್ಥಿತಿಯಲ್ಲಿ ರೈತರಿಗೆ ಹೈನುಗಾರಿಕೆ ಕೈಹಿಡಿದಿದೆ. ನಾವು ನೀಡುವ ಹಾಲು ಸೈನಿಕರಿಗೆ, ಶಾಲಾ ಮಕ್ಕಳಿಗೆ ಮತ್ತು ಗ್ರಾಹಕರಿಗೆ ನೀಡುವ ಕಾರಣದಿಂದ ಪ್ರತಿ ರೈತರು ಗುಣಮಟ್ಟದ ಹಾಲನ್ನು ನೀಡಬೇಕೆಂದರು.

ಹೆಬ್ಬಾಳು ಹಾಲು ಉತ್ಪಾದಕರ ಸಹಕಾರ ಸಂಘದ ಮಾಜಿ ನಿರ್ದೇಶಕ ಹೆಬ್ಬಾಳು ಹಾಲಪ್ಪ ಅವರು ಮಾತನಾಡಿ, ಸಹಕಾರ ಸಂಘದಲ್ಲಿ ಷೇರುದಾರರು ಪ್ರಮುಖ ಪಾತ್ರ ವಹಿಸುವ ಹಿನ್ನಲೆಯಲ್ಲಿ ಹಾಲು ಹಾಕದೆ ಷೇರು ಹೊಂದಿರುವವರಿಗೆ ಒಂದು ನಿರ್ದೇಶಕ ಸ್ಥಾನವನ್ನು ಮೀಸಲಿಡಬೇಕು. ಗ್ರಾಮದಲ್ಲಿ ಪಶು ಚಿಕಿತ್ಸಾಲಯ ಕಟ್ಟಡ ನಿರ್ಮಾಣಕ್ಕೆ ಶಾಸಕ ಹೆಚ್.ಕೆ.ಸುರೇಶ್ ಅವರು ಅನುದಾನ ನೀಡುವ ಭರವಸೆ ನೀಡಿದ್ದಾರೆಂದರು.

ಈ ಸಂದರ್ಭದಲ್ಲಿ ಹಾಲಿನ ಡೇರಿಗೆ ಅತಿ ಹೆಚ್ಚು ಹಾಲನ್ನು ಹಾಕಿದ ಪರಮೇಶ್, ಚಂದ್ರ ಶೇಖರಯ್ಯ ಮತ್ತು ಜಗದೀಶ್ ಅವರನ್ನು ಸನ್ಮಾನಿಸಲಾಯಿತು. 2025ರ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು.

ಉಪಾಧ್ಯಕ್ಷೆ ಮಂಜುಳಾ, ನಿರ್ದೇಶಕರಾದ ಕುಮಾರ್, ಉಮೇಶ್, ರುದ್ರೇಶ್, ಸೋಮ ಶೇಖರ್, ರವಿ, ಕಾಂತರಾಜು, ದೇವರಾಜ್, ಅಶ್ವಿನಿ, ಸಾವಿತ್ರಿ, ಕಾರ್ಯದರ್ಶಿ ಶಂಕರೇಗೌಡ, ಮಾಜಿ ನಿರ್ದೇಶಕ ಜಗದೀಶ್, ಸಿಬ್ಬಂದಿ ವಸಂತಕುಮಾರ್ ಮತ್ತು ಹರೀಶ್ ಹಾಜರಿದ್ದರು.

## ಸೆ.28 ರಿಂದ ಆನಂದದ ಅನುಭೂತಿ ಶಿಬಿರ




• ಪ್ರಜೋದಯ ವರದಿ

**ಹಾಸನ:** ಆರ್ಟ್ ಆಫ್ ಲಿವಿಂಗ್ ಮತ್ತು ರೋಟರಿ ಕ್ಲಬ್ ಆಫ್ ಕ್ವಾಂಟಾ ವತಿಯಿಂಸ ಸೆ.28 ರಿಂದ ಅ.3ರ ವರೆಗೆ ಆನಂದದ ಅನುಭೂತಿ ಶಿಬಿರ, ಯೋಗ, ಧ್ಯಾನ, ಪ್ರಾಣಾಯಾಮ ಮತ್ತು ಸುದರ್ಶನ ಕ್ರಿಯೆ ಹಮ್ಮಿಕೊಳ್ಳಲಾಗಿದೆ ಎಂದು ರೋಟರಿ ಕ್ಲಬ್ ಆಫ್ ಕ್ವಾಂಟಾ ಅಧ್ಯಕ್ಷ ಡಾ.ಜಿ.ಎನ್.ಬಸವರಾಜ್ ಅವರು ತಿಳಿಸಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾನಸಿಕ ಒತ್ತಡ, ಆತಂಕ ಇವುಗಳಿಂದ ಮುಕ್ತಿ ಪಡೆಯಲು ಮತ್ತು ಆರೋಗ್ಯ ಸುಧಾರಣೆ, ರೋಗ ನಿರೋಧಕ ಶಕ್ತಿ ಹೆಚ್ಚಿಸಿ ಕೊಳ್ಳಲು ವಿಶ್ವ ಪ್ರಸಿದ್ಧ ಸುದರ್ಶನ ಕ್ರಿಯೆ ಕಲಿಯುವ ಸುವರ್ಣಾವಕಾಶ ಕಲ್ಪಿಸಲಾಗಿದೆ. ಒಟ್ಟು 6 ದಿನಗಳ ಕಾಲ ನಗರದ ರವೀಂದ್ರ, ನಗರದ ರಾಘವೇಂದ್ರ ಮಠದ ರಸ್ತೆಯ ಯೋಗಿ ನಾರಾಯಣ ಸಮುದಾಯ ಭವನದಲ್ಲಿ ಶಿಬಿರ ನಡೆಯಲಿದೆ ಎಂದು ಹೇಳಿದರು.

ಮೊದಲ ಬ್ಯಾಚ್ ಬೆಳಿಗ್ಗೆ 5.30 ರಿಂದ 8 ಗಂಟೆವರೆಗೆ, 2ನೇ ಬ್ಯಾಚ್ ಬೆಳಿಗ್ಗೆ 11 ರಿಂದ ಮಧ್ಯಾಹ್ನ 1.30 ಹಾಗೂ 3ನೇ ಬ್ಯಾಚ್ ಸಂಜೆ 6 ಗಂಟೆಯಿಂದ ರಾತ್ರಿ 8.30 ರ ವರೆಗೆ ನಡೆಯಲಿದೆ. ಸಾರ್ವಜನಿಕರು ತಮಗೆ ಅನುಕೂಲವಾದ ಸಮಯಕ್ಕೆ ಬರಬಹುದು. ಮಾಹಿತಿಗಾಗಿ 9845173779, 9110256623 ಸಂಪರ್ಕಿಸಬಹುದೆಂದು ತಿಳಿಸಿದರು.

ಯೋಗ ಶಿಕ್ಷಕರಾದ ಹೆಚ್.ಎಲ್.ವಿದ್ಯಾ, ಶಿಬಿರದ ಪ್ರಾಯೋಜಕರು, ಮಾನವ ಹಕ್ಕುಗಳ ಒಕ್ಕೂಟ ಜಿಲ್ಲಾ ಘಟಕದ ಪ್ರಭಾರ ಅಧ್ಯಕ್ಷ ಜಿ.ಕುಮಾರ್, ಅರುಣ್ ಇದ್ದರು.

# ಡಿಜಿಟಲ್ ಬ್ಯಾಂಕಿಂಗ್ ಯುಗದಲ್ಲಿ ಜಾಗರೂಕತೆ ಅತ್ಯಗತ್ಯ

• ಪ್ರಜೋದಯ ವರದಿ




**ಹಾಸನ:** ಆರ್‌ಬಿಐ ನಿಯಂತ್ರಿತ ಸಂಸ್ಥೆಗಳು ಒದಗಿಸುವ ಹಣಕಾಸು ಸೇವೆಗಳ ಗ್ರಾಹಕರ ಹಕ್ಕುಗಳು ಮತ್ತು ರಕ್ಷಣೆಯ ಬಗ್ಗೆ ಅರಿವು ಮೂಡಿಸುವುದು ಭಾರತೀಯ ರಿಸರ್ವ್ ಬ್ಯಾಂಕ್‌ನ ಕರ್ತವ್ಯವಾಗಿದ್ದು, ಡಿಜಿಟಲ್ ಬ್ಯಾಂಕಿಂಗ್ ಯುಗದಲ್ಲಿ ಜಾಗರೂಕತೆ ಅತ್ಯಗತ್ಯವೆಂದು ಸಿಜಿಎಂ ಮತ್ತು ಆರ್‌ಬಿಐ ಓಂಬುಡ್ಸ್‌ಮನ್ ಸೋನಾಲಿ ದಾಸ್ ಅವರು ತಿಳಿಸಿದ್ದಾರೆ.

ಬ್ಯಾಂಕುಗಳು, ಬ್ಯಾಂಕೇತರ ಹಣಕಾಸು ಸಂಸ್ಥೆಗಳು ಮತ್ತು ಭಾರತೀಯ ರಿಸರ್ವ್ ಬ್ಯಾಂಕ್ (ಆರ್.ಬಿ.ಐ.) ನಿಯಂತ್ರಣಕ್ಕೊಳಪಟ್ಟ ಇತರೆ ಸಂಸ್ಥೆಗಳು ಗ್ರಾಹಕರಲ್ಲಿ ಅರಿವು ಮೂಡಿಸಲು ಆರ್‌ಬಿಐ ಓಂಬುಡ್ಸ್‌ಮನ್ ಕಚೇರಿ, ಬೆಂಗಳೂರು ವತಿಯಿಂದ ನಗರದ ಹಾಸನಾಂಬ ಕಲಾ ಕ್ಷೇತ್ರದಲ್ಲಿ ಆಯೋಜಿಸಲಾಗಿದ್ದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಹಣಕಾಸಿನ ಸ್ಥಿರತೆಯನ್ನುಕಾಯ್ದುಕೊಳ್ಳುವಲ್ಲಿ ಗ್ರಾಹಕರ ವಿಶ್ವಾಸದ ಪ್ರಾಮುಖ್ಯತೆಯನ್ನು ಅವರು ಒತ್ತಿ ಹೇಳಿದರು. ಆರ್‌ಬಿಐ-ನಿಯಂತ್ರಿತ ಸಂಸ್ಥೆಗಳ ವಿರುದ್ಧದ ಬಗೆಹರಿಯದ ಕುಂದುಕೊರತೆಗಳನ್ನು ಉಚಿತವಾಗಿ, ತ್ವರಿತವಾಗಿ ಮತ್ತು ನ್ಯಾಯಯುತವಾಗಿ ಪರಿಹರಿಸಿಕೊಳ್ಳಲು ಗ್ರಾಹಕರು ಆರ್‌ಬಿಐ ಓಂಬುಡ್ಸ್‌ಮನ್ ಅನ್ನು ಸಂಪರ್ಕಿಸಬಹುದೆಂದರು.

ಬ್ಯಾಂಕುಗಳು ದೂರುಗಳಿಗೆ 30 ದಿನಗಳೊಳಗೆ ಪ್ರತಿಕ್ರಿಯಿಸಬೇಕು ಮತ್ತು ತಮ್ಮ ವೆಬ್‌ಸೈಟ್‌ಗಳು ಮತ್ತು ಶಾಖೆಗಳ ಮೂಲಕ ದೂರುಗಳನ್ನು ದಾಖಲಿಸಲು ಅನುಕೂಲಕರ ಮಾರ್ಗಗಳನ್ನು ಒದಗಿಸಬೇಕು. ವಿವಿಧ ಡಿಜಿಟಲ್ ಬ್ಯಾಂಕಿಂಗ್ ಮತ್ತು ಸೈಬರ್ ವಂಚನೆಗಳ ಕಾರ್ಯ ವಿಧಾನಗಳು, ಡಿಜಿಟಲ್ ವಹಿವಾಟು ನಡೆಸುವಾಗ ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆಗಳು, ಪಾಸ್ವರ್ಡ್‌ಗಳು ಮತ್ತು ಲಾಗಿನ್ ವಿವರಗಳ ಗೌಪ್ಯತೆಯನ್ನು ಕಾಪಾಡಿಕೊಳ್ಳುವ ಪ್ರಾಮುಖ್ಯತೆ, ವಂಚನೆಯ ವಹಿವಾಟುಗಳಲ್ಲಿ ಗ್ರಾಹಕರ ಹೊಣೆಗಾರಿಕೆಗೆ ಸಂಬಂಧಿಸಿದ ನಿಯಮ ಗಳು ಇತ್ಯಾದಿಗಳ ಬಗ್ಗೆ ವಿವರಿಸಿದ ಅವರು ಈ ವಂಚನೆ ಚಟುವಟಿಕೆಗಳ ಬಗ್ಗೆ ಜಾಗರೂಕರಾಗಿರಲು ಸಭಿಕರಿಗೆ ತಿಳಿಸಿದರು.

ಇತ್ತೀಚಿನ ದಿನಗಳಲ್ಲಿ ಬ್ಯಾಂಕಿಂಗ್ ಸೇವೆಗಳನ್ನು ಡಿಜಿಟಲೀಕರಣಗೊಳಿಸಲಾಗಿದ್ದು, ಗ್ರಾಹಕರು ನೇರವಾಗಿ ಬ್ಯಾಂಕಿಂಗ್ ಸೌಲಭ್ಯಗಳನ್ನು ಪಡೆಯಲು ಸಾಧ್ಯವಾಗಿದೆ. ಡಿಜಿಟಲ್ ವಹಿವಾಟುಗಳು ಸುರಕ್ಷಿತವಾಗಿವೆ ಎಂಬ ವಿಶ್ವಾಸವನ್ನು ಗ್ರಾಹಕರಲ್ಲಿ ಮೂಡಿಸಲು ಓಂಬುಡ್ಸ್‌ಮನ್ ಕಚೇರಿಯು ಇಂತಹ ಕಾರ್ಯ ಕ್ರಮಗಳನ್ನು ಆಯೋಜಿಸುತ್ತಿದೆ. ಗ್ರಾಹಕರ ಪ್ರತಿ ಯೊಂದು ರೂಪಾಯಿಯನ್ನು ಸುರಕ್ಷಿತವಾಗಿಡುವುದು ಬ್ಯಾಂಕುಗಳ ಮುಖ್ಯ ಉದ್ದೇಶವಾಗಿದೆ. ಗ್ರಾಹಕರು ಜಾಗೃತರಾಗಿ ಮತ್ತು ಎಚ್ಚರದಿಂದಿದ್ದಾಗ ಬ್ಯಾಂಕಿಂಗ್ ಸುಲಭ ಮತ್ತು ಸುರಕ್ಷಿತವಾಗುತ್ತದೆಂದು ತಿಳಿಸಿದರು.

ಬೆಂಗಳೂರಿನ ಆರ್‌ಬಿಐಉಪ ಓಂಬುಡ್ಸ್‌ಮನ್ ಮತ್ತು ಡಿಜಿಎಂ ಶ್ರೀರಾಮ್ ಗೋವಿಂದ್ ಬಡೆ ಅವರು ಮಾತನಾಡಿ, ಬ್ಯಾಂಕುಗಳ ಆಂತರಿಕ ಕುಂದುಕೊರತೆ ನಿವಾರಣಾ ವ್ಯವಸ್ಥೆಯ ಬಗ್ಗೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಸಾರ್ವಜನಿಕರಿಗೆ ಸಂಕ್ಷಿಪ್ತವಾಗಿ ವಿವರಿಸಿದರು. ಆರ್‌ಬಿಐ ಓಂಬುಡ್ಸ್‌ಮನ್ ಯೋಜನೆ, 2026ರಡಿಯಲ್ಲಿ ಕುಂದು ಕೊರತೆ ನಿವಾರಣಾ ಕಾರ್ಯ ವಿಧಾನದ ಬಗ್ಗೆ ಮಾಹಿತಿಯನ್ನು ಹಂಚಿಕೊಂಡ ಅವರು, ಆರ್‌ಬಿಐ ಪೋರ್ಟಲ್ ಮತ್ತು ಲಭ್ಯವಿರುವ ಇತರೆ ಮಾರ್ಗಗಳ ಮೂಲಕ ದೂರುಗಳನ್ನು ಹೇಗೆ ಸಲ್ಲಿಸಬಹುದೆಂಬುದನ್ನು ವಿವರಿಸಿದರು. ವಿವಿಧ ರೀತಿಯ ವಂಚನೆಗಳನ್ನು ತಡೆಗಟ್ಟಲು ಗ್ರಾಹಕರು ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕಾ ಕ್ರಮಗಳನೂ ತಿಳಿಸಿದರು.

ಕಾರ್ಯಕ್ರಮದಲ್ಲಿ ಆರ್‌ಬಿಐ ಓಂಬುಡ್ಸ್‌ಮನ್ ಯೋಜನೆ, 2026ಕ್ಕೆ ಸಂಬಂಧಿಸಿದ ಕರ ಪತ್ರಗಳು ಮತ್ತು ಕಿರು ಪುಸ್ತಕಗಳನ್ನು ವಿತರಿಸಲಾಯಿತು. ಕೆನರಾ ಬ್ಯಾಂಕ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಇತರೆ ಬ್ಯಾಂಕ್‌ಗಳ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

1,250ಕ್ಕೂ ಹೆಚ್ಚು ಗ್ರಾಹಕರು, ಕಾಲೇಜು ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ರಸಪ್ರಶ್ನೆ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು ಅದರಲ್ಲಿ ಸಭಿಕರು ಉತ್ಸಾಹದಿಂದ ಭಾಗವಹಿಸಿದರು. ತದನಂತರ ಪ್ರಶೋತ್ತರ ಅವಧಿಯನ್ನು ನಡೆಸಲಾಯಿತು. ಆರ್‌ಬಿಐ ಓಂಬುಡ್ಸ್‌ಮನ್ ಮತ್ತು ವಿವಿಧ ಬ್ಯಾಂಕ್‌ಗಳ ಅಧಿಕಾರಿಗಳು ಸಾರ್ವಜನಿಕರ ಪ್ರಶ್ನೆಗಳಿಗೆ ಉತ್ತರಿಸಿದರು.

## ಬೇಲೂರು ತಾಲ್ಲೂಕು ಜೆಡಿಎಸ್ ಅಧ್ಯಕ್ಷರಾಗಿ ಲೋಕೇಗೌಡ ಆಯ್ಕೆ

» ಮೊದಲನೇ ಪುಟದಿಂದ

ಗುವುದು. ಬಹುಕಾಲದಿಂದ ಪಕ್ಷಕ್ಕಾಗಿ ದುಡಿದ ಹಿರಿಯ ಕಾರ್ಯಕರ್ತರ ಅನುಭವವನ್ನು ಪಡೆದು ಯುವಕರು ಹಾಗು ಹೊಸ ಮುಖಗಳನ್ನು ಸಂಘಟನೆಯಲ್ಲಿ ತೊಡಗಿಸಿ ಕೊಳ್ಳಲಾಗುವುದು. ಕಾರ್ಯಕರ್ತರೇ ಪಕ್ಷದ ನಿಜವಾದ ಶಕ್ತಿಯಾಗಿದ್ದು, ಎಲ್ಲರನ್ನು ಒಗ್ಗೂಡಿಸಿಕೊಂಡು ಸಂಘಟನೆ ಬಲ ಪಡಿಸಲಾಗುವುದೆಂದರು.

ಮುಂಬರುವ ಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಗ್ರಾಮ ಮಟ್ಟದಿಂದಲೇ ಪಕ್ಷದ ಸಂಘಟನೆಯನ್ನು ವ್ಯವಸ್ಥಿತವಾಗಿ ರೂಪಿಸಲಾಗುವುದು. ಮುಖಂಡರು ಹಾಗು ಕಾರ್ಯಕರ್ತರ ನಡುವೆ ಸಮನ್ವಯ ಸಾಧಿಸಿ ಭಿನ್ನಾಭಿಪ್ರಾಯಗಳಿಗೆ ಅವಕಾಶ ನೀಡದೆ ಒಗ್ಗಟ್ಟಿನಿಂದ ಪಕ್ಷ ಸಂಘಟನೆ ಮಾಡಲಾಗುವುದೆಂದರು.

ಹೆಚ್‌ಡಿಸಿಸಿ ಬ್ಯಾಂಕ್ ನಿರ್ದೇಶಕ ಎಂ.ಎ. ನಾಗರಾಜ್ ಅವರು ಮಾತನಾಡಿ, ಲೋಕೇಗೌಡ ಅವರು ಪಕ್ಷ ಸಂಘಟನೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಕಾರ್ಯಕರ್ತರೊಂದಿಗೆ ಉತ್ತಮ ಬಾಂಧವ್ಯ ಹೊಂದಿದ್ದಾರೆ. ಅವರ ನೇತೃತ್ವದಲ್ಲಿ ಬೇಲೂರು ತಾಲ್ಲೂಕಿನಲ್ಲಿ ಜೆಡಿಎಸ್ ಸಂಘಟನೆ ಮತ್ತಷ್ಟು ಬಲಿಷ್ಟವಾಗಲಿದೆ ಎಂಬ ವಿಶ್ವಾಸವಿದೆ. ಪಕ್ಷದ ಹಿರಿಯರು ಹಾಗು ಕಾರ್ಯಕರ್ತರನ್ನು ವಿಶ್ವಾಸಕ್ಕೆ ತೆಗೆದು ಕೊಂಡು ಸಂಘಟನೆಯನ್ನು ಮುನ್ನಡೆಸುವಂತೆ ಶುಭ ಹಾರೈಸಿದರು. ಮಾಜಿ ಶಾಸಕ ಕೆ.ಎಸ್.ಲಿಂಗೇಶ್, ಹೆಚ್.ಕೆ.ಕುಮಾರಸ್ವಾಮಿ, ಹೆಚ್‌ಡಿಸಿಸಿ ಬ್ಯಾಂಕ್ ಜಿಲ್ಲಾ ನಿರ್ದೇಶಕ ಎಂ.ಎ. ನಾಗರಾಜು, ಬಲ್ಲೇನಹಳ್ಳಿ ರವಿ ಕುಮಾರ್, ಅದ್ದೂರಿ ಚೇತನ್, ಮಹದೇವ್ ಇತರರಿದ್ದರು.

## ಎಸ್‌ಐಆರ್ ನಿರ್ವಹಣೆ: ಸ್ಪಷ್ಟನೆಗೆ ಎನ್‌ಡಿಎ ಮಿತ್ರಪಕ್ಷಗಳ ಆಗ್ರಹ

**ನವದೆಹಲಿ:** ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ನಿರ್ವಹಣೆಗೆ ಸಂಬಂಧಿಸಿದಂತೆ ಟೀಕೆ ಆರೋಪಗಳು ಹೆಚ್ಚುತ್ತಿರುವಂತೆಯೇ, ಈ ವಿಚಾರವಾಗಿ ಚುನಾವಣಾ ಆಯೋಗ ಸ್ಪಷ್ಟನೆ ನೀಡಬೇಕೆಂದು ಎನ್‌ಡಿಎ ಅಂಗಪಕ್ಷಗಳು ಶುಕ್ರವಾರ ಆಗ್ರಹಿಸಿವೆ.

ಎಸ್‌ಐಆರ್ ವೇಳೆ ಅಕ್ರಮಗಳು ನಡೆದಿವೆ ಎಂಬ ಆರೋಪಗಳ ಬಗ್ಗೆ ಪ್ರತಿ ಕ್ರಿಯಿಸಿ, ತನ್ನ ಕಾರ್ಯವೈಖರಿ ಕುರಿತು ಮೂಡಿರುವ ತಪ್ಪುಕಲ್ಪನೆಗಳನ್ನು ಆಯೋಗ ನಿವಾರಿಸಬೇಕೆಂದು ಟಿಡಿಪಿ, ಲೋಕ ಜನಶಕ್ತಿ ಪಾರ್ಟಿ, ರಾಷ್ಟ್ರೀಯ ಲೋಕ ಮೋರ್ಚಾ ಹಾಗೂ ಯುನೈಟೆಡ್ ಪೀಪಲ್ಸ್ ಪಾರ್ಟಿ (ಲಿಬರಲ್) ಸೇರಿ ಎನ್‌ಡಿಎದ ಇತರ ಮಿತ್ರಪಕ್ಷಗಳು ಚುನಾವಣಾ ಆಯೋಗವನ್ನು ಒತ್ತಾಯಿಸಿವೆ.

ಆಯುಕ್ತರ ನಡುವಿನ ಭಿನ್ನಾಭಿಪ್ರಾಯಗಳು ಚುನಾವಣಾ ಆಯೋಗವು ಪ್ರಜಾಸತ್ತಾತ್ಮಕ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತದೆಂಬುದನ್ನು ತೋರಿಸುತ್ತದೆಂದು ಹೇಳುವ ಮೂಲಕ ಬಿಜೆಪಿಯು ಚುನಾವಣಾ ಆಯೋಗದ ಬೆಂಬಲಕ್ಕೆ ನಿಂತ ಬೆನ್ನಲ್ಲೇ, ಅದರ ಮಿತ್ರಪಕ್ಷಗಳಿಂದ ಈ ಒತ್ತಾಯ ಕೇಳಿಬಂದಿದೆ.

**ಅನುಮಾನಗಳು ನಿವಾರಣೆ ಆಗಬೇಕು**

ಜನರ ಮನಸ್ಸಿನಲ್ಲಿರುವ ಅನುಮಾನಗಳನ್ನು ಭಾರತೀಯ ಚುನಾವಣಾ ಆಯೋಗ ನಿವಾರಿಸಬೇಕೆಂದು ಲೋಕ ಜನಶಕ್ತಿ ಪಕ್ಷದ (ರಾಮ್ ವಿಲಾಸ್) ಮುಖ್ಯಸ್ಥರೂ ಆಗಿರುವ ಕೇಂದ್ರ ಸಚಿವ ಚಿರಾಗ್ ಪಾಸ್ವಾನ್ ಹೇಳಿದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019